ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೆರವಣಿಗೆ

ಮಣಿಪುರದಲ್ಲಿ ಶಾಂತಿ ಸ್ಥಾಪಿಸಬೇಕೆಂದು ಒತ್ತಾಯಿಸಿ ಅಲ್ಲಿನ ಜನ ಕೋಲ್ಕತ್ತದಲ್ಲಿ ಶನಿವಾರ ಮೊಂಬತ್ತಿ ಹಿಡಿದು ಮೆರವಣಿಗೆ ನಡೆಸಿದರು





ಹಿರಿಯಾನೆ ಗಾಯತ್ರಿಗೆ ಮಿತ್ರರೇ ಮುಸ್ಸಂಜೆಯ ಆಪ್ತರು

● ಆನೇಕಲ್ ಶಿವಣ್ಣ

ಆನೇಕಲ್: ರಾಜ್ಯದ ಉದ್ಯಾನ ಮತ್ತು ಶಿಬಿರಗಳಲ್ಲಿರುವ ಆನೆಗಳಲ್ಲಿಯೇ ಅತ್ಯಂತ ಹಿರಿಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಗಾಯತ್ರಿ ಹೆಸರಿನ ಹೆಣ್ಣಾನೆ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಜೀವನದ ಮುಸ್ಸಂಜೆ ಕಳೆಯುತ್ತಿದೆ.

ವಯೋಸಹಜ ಕಾಯಿಲೆಗಳು ಗಾಯತ್ರಿಯನ್ನು ಕಾಡುತ್ತಿವೆ. 87 ವರ್ಷದ ಈಕೆಗೆ ನಾಲ್ಕು ವರ್ಷದಿಂದ ಕಣ್ಣು ಕಾಣಿಸುತ್ತಿಲ್ಲ. ಕಿವಿ ಕೇಳಿಸುತ್ತಿಲ್ಲ. ಹಲ್ಲುಗಳೂ ಇಲ್ಲ. ಜೊತೆಗಿರುವ ಆನೆಗಳೇ ಈ ಹಿರಿಯ ಜೀವದ ಅನುಗಾಲದ ಮಿತ್ರರು. ಸದಾ ಕಾಲ ಗಾಯತ್ರಿಯ ಕಣ್ಣು ಮತ್ತು ಕಿವಿಯಾಗಿರುತ್ತವೆ.

ಸದಾ ಗಾಯತ್ರಿ ನೆರವಿಗೆ ನಿಲ್ಲುವ ಇತರ ಆನೆಗಳು ಮನೆಯ ಹಿರಿಯರನ್ನು ನೋಡಿಕೊಂಡಂತೆ ಆಕೆಯನ್ನು ಜೋಪಾನದಿಂದ ನೋಡಿಕೊಳ್ಳುತ್ತವೆ. ಇಂತಹ ಜೀವವನ್ನು ಉಳಿಸಿಕೊಳ್ಳುವುದು ಮತ್ತು ಆರೈಕೆ ಮಾಡುವುದು ಸವಾಲಿನ ಕೆಲಸ. ಈ ಸವಾಲನ್ನು ಪ್ರೀತಿಯಿಂದಲೇ ಸ್ವೀಕರಿಸಿರುವ ಮಾವುತರು, ಕಾವಾಡಿಗಳು ಮತ್ತು ಸಿಬ್ಬಂದಿಯು ಪ್ರೀತಿ ಮತ್ತು ಅನ್ಯೋನ್ಯತೆಯಿಂದ ಗಾಯತ್ರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಇದರಿಂದಾಗಿಯೇ ಆಕೆ ತನ್ನ ಕೊನೆ ದಿನಗಳನ್ನುಚೈತನ್ಯದಿಂದ ಕಳೆಯುತ್ತಿದ್ದಾಳೆ. ಬನ್ನೇರುಘಟ್ಟ ಉದ್ಯಾನದ ಆನೆ ಕುಟುಂಬಕ್ಕೆ ಗಾಯತ್ರಿ ಮತ್ತು ಲಿಲ್ಲಿ ಹಿರಿಯರಂತಿವೆ. ಅದರಲ್ಲೂ ಗಾಯತ್ರಿ ಎಂದರೆ ಎಲ್ಲಾ ಆನೆಗಳಿಗೆ ಮಾವುತರಿಗೆ ಅಚ್ಚುಮೆಚ್ಚು.



ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಹಿರಿಯಾನೆ ಗಾಯತ್ರಿಯನ್ನು ಸಲುಹುತ್ತಿರುವ ಮರಿಗಳು

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಬಿನಿ ಹಿನ್ನೀರಿನ ಪ್ರದೇಶದ ಬಳ್ಳೆಯಲ್ಲಿ ಖೆಡ್ಡಾ ಕಾರ್ಯಾಚರಣೆಯಲ್ಲಿ 1968ರಲ್ಲಿ ಗಾಯತ್ರಿಯನ್ನು ಸೆರೆ ಹಿಡಿಯಲಾಯಿತು. ಟಿಂಬರ್ ಸಾಗಣೆ, ಕಾಡಾನೆಗಳ ಸೆರೆ, ಆನೆಗಳ ಪಳಗಿಸುವಿಕೆ ಸೇರಿದಂತೆ ವಿವಿಧ ಕಾರ್ಯಗಳಲ್ಲಿ ಸದಾ ಮುಂದಿದ್ದ ಗಾಯತ್ರಿಗೆ 66 ವರ್ಷದ ತುಂಬಿದಾಗ ಈ ಕೆಲಸಗಳಿಂದ ನಿವೃತ್ತಿ ನೀಡಲಾಯಿತು.

2002ರ ಜೂನ್‌ನಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ಕುಟುಂಬಕ್ಕೆ ಬರ ಮಾಡಿಕೊಳ್ಳಲಾಯಿತು. 18 ವರ್ಷಗಳಿಂದಲೂ ಮಾವುತ ರಾಜ ಮತ್ತು ಕವಾಡಿ (ಮಾವುತನ ಸಹಾಯಕ) ಅಯ್ಯಪ್ಪ ಗಾಯತ್ರಿಯನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಾರೆ. ಈ ಹಿಂದೆ ಸಣ್ಣಪ್ಪ ಎಂಬುವವರು ನೋಡಿಕೊಳ್ಳುತ್ತಿದ್ದರು.

'18 ವರ್ಷಗಳಿಂದಲೂ ಗಾಯತ್ರಿ ಆರೈಕೆ ನನ್ನ ನಿತ್ಯದ ಕಾಯಕವಾಗಿದೆ. ಕೆಲವೊಮ್ಮೆ ಕಾಡಿನಲ್ಲಿ ತಪ್ಪಿಸಿಕೊಂಡರೆ ಇದು ಸಿಗುವವರೆಗೂ ನೆಮ್ಮದಿ ಇರುವುದಿಲ್ಲ. ಮಾವುತರೆಲ್ಲರೂ ಸೇರಿ ಗಾಯತ್ರಿಯನ್ನು ಹುಡುಕಿ ತರುತ್ತೇವೆ' ಎನ್ನುತ್ತಾರೆ ಮಾವುತ ರಾಜ.

ಆನೆಕ್ಯಾಂಪ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವನರಾಜ, ಗಜೇಂದ್ರ, ಶ್ರೀರಾಮ, ರಂಗ ಸೇರಿದಂತೆ ಎಂಟು ಗಂಡಾನೆಗಳಿವೆ. ಗಾಯತ್ರಿ, ಲಿಲ್ಲಿ, ವೇದ ಸೇರಿದಂತೆ 16 ಹೆಣ್ಣಾನೆ ಉದ್ಯಾನದಲ್ಲಿವೆ. 24 ಆನೆಗಳ ಕುಟುಂಬ ಜೈವಿಕ ಉದ್ಯಾನ ಮತ್ತು ಪಕ್ಕದ ರಾಷ್ಟ್ರೀಯ ಉದ್ಯಾನದಲ್ಲೂ ವಿಹರಿಸುತ್ತವೆ. ಮರಿ ಆನೆಗಳಿಗೆ ತರಬೇತಿ ನೀಡಲು ತರಬೇತಿ ಕೇಂದ್ರ ಇದೆ. ಎಂಟು ಮರಿಗಳಿದ್ದು ರಂಗ ಎಂಬ ಆನೆ ಇವುಗಳ ಮಾಸ್ಟರ್ ಆಗಿದ್ದಾನೆ.

ವಾಸನೆಯಿಂದಲೇ ಸಂವಹನ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಆನೆಗಳ ಆರೈಕೆಗೆ ವಿಶೇಷ ವ್ಯವಸ್ಥೆ ಇದೆ. ಉದ್ಯಾನದ ಆನೆಗಳು ಬೆಳಿಗ್ಗೆ ಸಿಬ್ಬಂದಿಯ ನಿಯಂತ್ರಣದಲ್ಲಿರುತ್ತವೆ. ಸಂಜೆಯ ನಂತರ ಆಹಾರ ನೀಡಿ ಕಾಡಿನಲ್ಲಿ ವಿಹರಿಸಲು ಬಿಡಲಾಗುತ್ತದೆ.

ಆನೆಗಳು ಕಾಡಾನೆಗಳ ಜೊತೆಯೂ ಬೆರೆಯುತ್ತವೆ. ಇಂತಹ ವ್ಯವಸ್ಥೆ ದೇಶದ ಉದ್ಯಾನಗಳ ಪೈಕಿ ಬನ್ನೇರುಘಟ್ಟದಲ್ಲಿ ಮಾತ್ರ ಇದೆ. ಇದನ್ನು ಸೆಮಿ ಕ್ಯಾಪ್ಟಿವಿಟಿ ಎಂದು ಕರೆಯಲಾಗುತ್ತದೆ. ಜೈವಿಕ ಉದ್ಯಾನದ ಪಕ್ಕದಲ್ಲಿಯೇ ವಿಶಾಲವಾದ ಕಾಡಿರುವುದರಿಂದ ಇಂತಹ ವ್ಯವಸ್ಥೆ ಸಾಧ್ಯ ಎಂದು ಉದ್ಯಾನದ ವೈದ್ಯ ಡಾ.ಉಮಾಶಂಕರ್ ಹೇಳುತ್ತಾರೆ. ಸಂಜೆಯ ವೇಳೆಗೆ ಉದ್ಯಾನದಿಂದ ಕಾಡಿಗೆ ತೆರಳಬೇಕಾದರೆ ಕಣ್ಣು ಕಾಣದ, ಕಿವಿ ಕೇಳಿಸದ ಗಾಯತ್ರಿಯನ್ನು ಉದ್ಯಾನದ ಇತರ ಆನೆಗಳು ಕಾಡಿನತ್ತ ಕರೆದೊಯ್ಯುತ್ತವೆ. ಗಾಯತ್ರಿಯು ವಾಸನೆಯ ಮೂಲಕವೇ ಸಂವಹನ ಸಾಧಿಸಿ ಆನೆಗಳೊಂದಿಗೆ ತೆರಳುತ್ತದೆ. ಮಗುವನ್ನು ನೋಡಿಕೊಂಡಂತೆ ಇತರೆ ಆನೆಗಳು ಗಾಯತ್ರಿಯನ್ನು ಜೋಪಾನ ಮಾಡುತ್ತವೆ. ಕೆಲವೊಮ್ಮೆ ಆನೆ ಹಿಂಡಿನಿಂದ ಬೇರ್ಪಡುವ ಗಾಯತ್ರಿಯನ್ನು ಕಾಡಾನೆಗಳು ಉದ್ಯಾನದತ್ತ ಕರೆತಂದಿರುವ ಉದಾಹರಣೆಗಳು ಇವೆ ಎಂದು ಮಾವುತ ರಾಜ 'ಪ್ರಜಾವಾಣಿ'ಗೆ ತಿಳಿಸಿದರು.

'ರೌಡಿ ರಂಗ'ನ ಪ್ರಿಯತಮೆ!

ಬನ್ನೇರುಘಟ್ಟ ಭಾಗದಲ್ಲಿ ಪುಂಡಾಟದಿಂದ 'ರೌಡಿ ರಂಗ' ಎಂದೇ ಕುಖ್ಯಾತಿ ಗಳಿಸಿದ್ದ ಕಾಡಾನೆಗೂ ಗಾಯತ್ರಿ ಕಂಡರೆ ಇಷ್ಟ. ಗಾಯತ್ರಿಗೂ ಅಷ್ಟೇ ರೌಡಿ ರಂಗ ಎಂದರೆ ಪ್ರೀತಿ. ಇಬ್ಬರಿಗೂ ಕಾಡಿನಲ್ಲಿಯೇ ಪ್ರೀತಿ ಅರಳಿತ್ತು. ಗಾಯತ್ರಿಯನ್ನು ನೋಡಲಿಕ್ಕಾಗಿಯೇ ಆಗಾಗ ರೌಡಿ ರಂಗ ಉದ್ಯಾನಕ್ಕೂ ನುಗ್ಗಿ ಬರುತ್ತಿದ್ದ. ಆಗ ಇಬ್ಬರ ಸರಸಲ್ಲಾಪ ಜೋರಾಗಿರುತ್ತಿತ್ತು ಎನ್ನುತ್ತಾರೆ ಇಲ್ಲಿನ ಮಾವುತರು. ಈಕೆ ಐದು ಮರಿಗಳ ತಾಯಿ.

ಮುದ್ದೆ ಎಂದರೆ ಪಂಚಪ್ರಾಣ

ವೈದ್ಯರ ಮಾರ್ಗದರ್ಶನದಲ್ಲಿ ಈ ಆನೆ ಪಾಲನೆ ಮಾಡಲಾಗುತ್ತಿದೆ. ಹಲ್ಲುಗಳಿಲ್ಲದಿರುವುದರಿಂದ ಹುಲ್ಲು ತಿನ್ನಲಾಗುವುದಿಲ್ಲ. ಹಾಗಾಗಿ ಹುರುಳಿ ಕಾಳು, ಅಲಸಂದೆ, ಸೋಯಾಬಿನ್, ನವಣೆ, ನವಧಾನ್ಯಗಳೊಂದಿಗೆ ಈರುಳ್ಳಿಯನ್ನು ಸೇರಿಸಿ ವಿಶೇಷವಾದ ಮುದ್ದೆ ತಯಾರಿಸಿ ನೀಡಲಾಗುತ್ತದೆ. ಪ್ರತಿದಿನ 12 ಗಂಟೆಗೆ ಒಂದರಿಂದ ಒಂದೂವರೆ ಕೆಜಿಯಿರುವ 10-12 ಮುದ್ದೆಗಳನ್ನು ನೀಡಲಾಗುತ್ತದೆ. ಸಂಜೆ ಅನ್ನ, ಬೆಲ್ಲ, ಕೊಬ್ಬರಿಯ ಪೊಂಗಲ್ ತಯಾರಿಸಿ ನೀಡಲಾಗುತ್ತದೆ ಎಂದು ಆನೆ ಮೇಲ್ವಿಚಾರಕ ಸುರೇಶ್ ಮಾಹಿತಿ ನೀಡಿದರು.

ವಿವಿಧ ರಾಜ್ಯಗಳ ಶಿಫಾರಸು ಒಪ್ಪಿಕೊಂಡ ಆಯೋಗ

ಕೇಂದ್ರ ಒಬಿಸಿ ಪಟ್ಟಿ ರಾಜ್ಯದ ಜಾತಿ ಇಲ್ಲ?

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ಒಬಿಸಿ ಮತಗಳು 'ಕೈ' ಜಾರದಂತೆ ನೋಡಿಕೊಳ್ಳಲು ಕೇಂದ್ರದ ಬಿಜೆಪಿ ಸರ್ಕಾರವು ಆರು ರಾಜ್ಯಗಳ ಸುಮಾರು 80 ಜಾತಿಗಳನ್ನು ಶೀಘ್ರದಲ್ಲಿ ಕೇಂದ್ರ ಸರ್ಕಾರದ 'ಇತರ ಹಿಂದುಳಿದ ಜಾತಿಗಳ' (ಒಬಿಸಿ) ಪಟ್ಟಿಗೆ ಸೇರ್ಪಡೆ ಮಾಡುವ ಸಾಧ್ಯತೆ ಇದೆ. ಕರ್ನಾಟಕದ ಯಾವುದೇ ಜಾತಿ ಸದ್ಯದಲ್ಲಿ ಈ ಪಟ್ಟಿಗೆ ಸೇರುವ ಲಕ್ಷಣಗಳಿಲ್ಲ.

ಈ ಸಂಬಂಧ ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ಹಿಮಾಚಲ ಪ್ರದೇಶ, ಪಂಜಾಬ್ ಹಾಗೂ ಹರಿಯಾಣ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದವು. ಈ ಪೈಕಿ, ಬಹುತೇಕ ಶಿಫಾರಸುಗಳನ್ನು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ಪರಿಶೀಲನೆ ನಡೆಸಿ ಸಹಮತ ವ್ಯಕ್ತಪಡಿಸಿದೆ. 'ಆಯೋಗವು ಈ ಸಂಬಂಧ ಪ್ರಕ್ರಿಯೆಗಳನ್ನು ನಡೆಸುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೇಂದ್ರ ಸಚಿವ ಸಂಪುಟಕ್ಕೆ ಶಿಫಾರಸು ಮಾಡಲಾಗುತ್ತದೆ. ಸಚಿವ ಸಂಪುಟ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ' ಎಂದು ಆಯೋಗದ ಅಧ್ಯಕ್ಷ ಹಂಸರಾಜ್ ಗಂಗಾರಾಮ್ ಅಹಿರ್ ತಿಳಿಸಿದರು.

ಮಂಡಲ್ ಆಯೋಗ ಸೂಚಿಸಿದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸೂಚಕಗಳ ಆಧಾರದ ಮೇಲೆ ಕೇಂದ್ರದ ಪಟ್ಟಿಗೆ ಸೇರ್ಪಡೆಗಳನ್ನು ಪರಿಗಣಿಸಲಾಗುತ್ತದೆ ಎಂದೂ ಅವರು ಹೇಳಿದರು.

ಕರ್ನಾಟಕದ ಅತ್ಯಂತ ಹಿಂದುಳಿದ 46 ಜಾತಿಗಳನ್ನು ಈ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಅನೇಕ ವರ್ಷಗಳಿಂದ ಪ್ರಯತ್ನ ನಡೆಸುತ್ತಿದೆ. ಆದರೆ, ಅದಕ್ಕೆ ಯಶ ಸಿಕ್ಕಿಲ್ಲ. ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆಯಾಗದ ಜಾತಿಗಳನ್ನು ಪಟ್ಟಿ ಮಾಡಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ನಾಲ್ಕು ವರ್ಷಗಳ ಹಿಂದೆಯೇ ವರದಿ ಸಲ್ಲಿಸಿದೆ. ಕಾಡುಗೊಲ್ಲ, ಕುಂಚಿಟಿಗ ಜಾತಿಗಳನ್ನು ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರ್ಕಾರ ವರ್ಷಗಳ ಹಿಂದೆಯೇ ಶಿಫಾರಸು ಮಾಡಿದೆ. ಕುಂಚಿಟಿಗರನ್ನು ಕೇಂದ್ರದ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದರು. 'ಈ ಎರಡು ಸಮುದಾಯಗಳನ್ನು ಕೇಂದ್ರದ ಪಟ್ಟಿಗೆ ಸೇರಿಸಬೇಕು ಎಂಬ ಬಗ್ಗೆ ಹೆಚ್ಚಿನ ಒತ್ತಡ ಇದೆ. ರಾಜ್ಯ ಸರ್ಕಾರದ ಈ ಶಿಫಾರಸುಗಳನ್ನು ಆಯೋಗ ಪರಿಶೀಲನೆ ನಡೆಸಲಿದೆ. ಆ ಬಳಿಕವಷ್ಟೇ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಮೂಲಗಳು ತಿಳಿಸಿವೆ.

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ಈ ಶಿಫಾರಸುಗಳ ಪರಾಮರ್ಶೆ ನಡೆಸಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ರಾಜ್ಯ ಆಯೋಗ ನಡೆಸುವ ರೀತಿಯಲ್ಲೇ ಕೇಂದ್ರದ ಆಯೋಗವು ಸಹ ವಿಚಾರಣೆ ನಡೆಸಲಿದೆ. ಈ ಪ್ರಕ್ರಿಯೆಗೆ ಸಾಕಷ್ಟು ಸಮಯ ತೆಗೆದುಕೊಳ್ಳಲಿದೆ ಎಂದೂ ಹೇಳಿವೆ.

ಲಿಂಗಾಯತರ ಹೋರಾಟ

ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನು ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಇದೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಗೋವಾದಲ್ಲಿರುವ ವೀರಶೈವ–ಲಿಂಗಾಯತರ 90 ಉಪ ಪಂಗಡಗಳಲ್ಲಿ 16 ಉಪ ಪಂಗಡಗಳು ಮಾತ್ರ ಕೇಂದ್ರ ಪಟ್ಟಿಗೆ ಸೇರ್ಪಡೆಯಾಗಿವೆ. ಎಲ್ಲ ಉಪ ಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿ ವಿವಿಧ ಮಠಾಧೀಶರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಹೋರಾಟಗಳು ಆರಂಭವಾಗಿವೆ. ಲೋಧಿ, ಲಿಂಗಾಯತ, ಭೋಯರ್, ಪವಾರ್, ಝಾಂಡ್ಸೆ ಸಮುದಾಯಗಳನ್ನು ಕೇಂದ್ರದ ಪಟ್ಟಿಗೆ ಸೇರಿಸುವಂತೆ ಮಹಾರಾಷ್ಟ್ರ ಸರ್ಕಾರ ಕೇಳಿಕೊಂಡಿದೆ. ಮತ್ತೊಂದೆಡೆ, ಆಂಧ್ರ ಪ್ರದೇಶವು ತುರುಪ್ ಕಾಪು ಸಮುದಾಯವನ್ನು ಸೇರಿಸಲು ಕೋರಿದೆ.

ಸೌಜನ್ಯ ಕೊಲೆ: ಮರು ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದ ಪಾಂಗಳ ಗ್ರಾಮದ ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣದ ಮರು ತನಿಖೆ ನಡೆಸಬೇಕು ಎಂದು ಸೌಜನ್ಯ ಅವರ ತಾಯಿ ಕುಸುಮಾವತಿ ಆಗ್ರಹಿಸಿದ್ದಾರೆ.

ತಮ್ಮ ಮನೆಯಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ಸಂತೋಷ್ ರಾವ್ ಆರೋಪಿ ಅಲ್ಲ. ಸಿಬಿಐ ನ್ಯಾಯಾಲಯ ಆತನನ್ನು ದೋಷ ಮುಕ್ತಗೊಳಿಸಿರುವುದು ಖುಷಿ ತಂದಿದೆ. ಆದರೆ ನಮ್ಮ ಮಗಳು ಸೌಜನ್ಯಳ ಮೇಲೆ ಅತ್ಯಾಚಾರ ಮಾಡಿದವರು ಯಾರು ಎಂದು ಸಿಬಿಐ ಮರು ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

'ನಾವು ಆ ಸಂದರ್ಭದಲ್ಲೇ ನಾಲ್ವರು ಆರೋಪಿಗಳ ಹೆಸರನ್ನು ನೀಡಿದ್ದೇವೆ. ಆದರೆ, ಅವರು ತನಿಖೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಅವರು ಯಾಕೆ ತಡೆಯಾಜ್ಞೆ ತರಬೇಕಿತ್ತು' ಎಂದು ಪ್ರಶ್ನಿಸಿದ್ದಾರೆ.

'11 ವರ್ಷ ನ್ಯಾಯಕ್ಕಾಗಿ ಹೋರಾಟ ಮಾಡಿದ್ದೇವೆ. ಸಿಬಿಐ ತನಿಖೆ ಬಗ್ಗೆ ನಮಗೆ ಸಮಾಧಾನ ಇಲ್ಲ. ನಾವು ಹೇಳಿದ್ದ ನಾಲ್ವರ ಹೆಸರೇ ಅವರ ವರದಿಯಲ್ಲಿ ಇಲ್ಲ. ಮರು ತನಿಖೆಗೆ ಮನವಿ ಮಾಡುತ್ತೇವೆ. ನ್ಯಾಯಾಲಯದಲ್ಲಿ ನ್ಯಾಯ ಸಿಗುತ್ತದೆ ಎಂಬ ಭರವಸೆ ಇದೆ. ಅದಿಲ್ಲದಿದ್ದರೆ ಮಂಜುನಾಥ ಮತ್ತು ಅಣ್ಣಪ್ಪ ಸ್ವಾಮಿ ಖಂಡಿತಾ ನ್ಯಾಯ ಕೊಡುತ್ತಾರೆ ಎಂಬ ನಂಬಿಕೆ ಇದೆ' ಎಂದು ಸೌಜನ್ಯ ಅವರ ಮಾವ ವಿಠಲ ಗೌಡ ಹೇಳಿದ್ದಾರೆ.


ಉಜಿರೆಯ ಎಸ್‌ಡಿಎಂ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿನಿ ಸೌಜನ್ಯ 2012ರ ಅ. 9ರಂದು ಸಂಜೆ ಕಾಲೇಜಿನಿಂದ ಮನೆಗೆ ತೆರಳುವ ವೇಳೆ ನಾಪತ್ತೆಯಾಗಿದ್ದರು. ಮರುದಿನ ರಾತ್ರಿ ಧರ್ಮಸ್ಥಳದ ಮಣ್ಣಸಂಕ ಬಳಿ ಅವರ ಶವ ಪತ್ತೆಯಾಗಿತ್ತು. ಬೆಳ್ತಂಗಡಿ ಠಾಣೆಯಲ್ಲಿ ಅತ್ಯಾಚಾರ, ಕೊಲೆ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪತ್ತೆಗಾಗಿ ಪ್ರತಿಭಟನೆ ನಡೆದಿದ್ದವು. ಸರ್ಕಾರ ತನಿಖೆಯನ್ನು ಸಿಬಿಐಗೆ ವಹಿಸಿತ್ತು.

ಶಕ್ತಿ ಯೋಜನೆ: 30 ಲಕ್ಷ ಪ್ರಯಾಣಿಕರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆ ಜಾರಿಯಾದ ಮೇಲೆ ಸಾರಿಗೆ ಇಲಾಖೆಯ ಅಧೀನದ ನಾಲ್ಕು ನಿಗಮಗಳ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಭಾರಿ ಏರಿಕೆ ಕಂಡಿದೆ. ನಿತ್ಯ ಪ್ರಯಾಣಿಸುವವರ ಸಂಖ್ಯೆ ಸುಮಾರು 30 ಲಕ್ಷದಷ್ಟು ಹೆಚ್ಚಳವಾಗಿದೆ.

ಮಹಿಳೆಯರಿಗೆ ಉಚಿತವಾಗಿ ಪ್ರಯಾಣ ಕಲ್ಪಿಸಿದ ಈ ಯೋಜನೆ ಜಾರಿಯಾಗುವ ಮೊದಲು ನಿತ್ಯ ಸರಾಸರಿ 84.14 ಲಕ್ಷ ಜನರು ಬಸ್‌ನಲ್ಲಿ ಸಂಚರಿಸುತ್ತಿದ್ದರು. ಶಕ್ತಿ ಯೋಜನೆ ಜಾರಿಯಾದ ನಂತರದ ಐದು ದಿನಗಳಲ್ಲಿ ಸರಾಸರಿ 1.12 ಕೋಟಿ ಪ್ರಯಾಣಿಕರು ನಿತ್ಯವೂ ಸಂಚರಿಸಿದ್ದಾರೆ. ಅದರಲ್ಲಿ ಸರಾಸರಿ 50 ಲಕ್ಷ ಮಹಿಳಾ ಪ್ರಯಾಣಿಕರು. ಜತೆಗೆ ಪುರುಷ ಪ್ರಯಾಣಿಕರ ಸಂಖ್ಯೆಯೂ ಸ್ವಲ್ಪ ಜಾಸ್ತಿಯಾಗಿದೆ. ಮನೆಯ ಹೆಣ್ಣುಮಕ್ಕಳಿಗೆ ಉಚಿತ ಪ್ರಯಾಣ ಇರುವುದರಿಂದ ಅವರ ಜತೆ ಹೋಗುವ ಪುರುಷರು ಸಹ ಅನಿವಾರ್ಯವಾಗಿ ಸರ್ಕಾರಿ ಬಸ್‌ನಲ್ಲಿ ಪ್ರಯಾಣಿಸಿದ್ದರಿಂದ ಈ ಹೆಚ್ಚಳ ಕಂಡು ಬಂದಿದೆ. ಜೂನ್ 11ರಂದು ಮಧ್ಯಾಹ್ನ 1ರ ಬಳಿಕ ಶಕ್ತಿ ಯೋಜನೆ ಜಾರಿಯಾಗಿತ್ತು. ಮೊದಲ ದಿನ ಭಾನುವಾರ ಆಗಿದ್ದರಿಂದ ಅಂದು ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳವಾಗಿರಲಿಲ್ಲ.





ಕೊಳ್ಳೇಗಾಲ ಕೆಎಸ್‌ಆರ್‌ಟಿಸಿ ನಿಲ್ದಾಣದಲ್ಲಿ ಬಸ್‌ನ ಬಾಗಿಲ ಕಿತ್ತು ಬಂದಿರುವುದು

ಕಿತ್ತು ಬಂದ ಬಸ್ ಬಾಗಿಲು!

ಕೊಳ್ಳೇಗಾಲ (ಚಾಮರಾಜನಗರ): ನಗರದ ಬಸ್ ನಿಲ್ದಾಣದಲ್ಲಿ ಶನಿವಾರ ಮಹದೇಶ್ವರ ಬೆಟ್ಟಕ್ಕೆ ತೆರಳುವ ಬಸ್‌ಗೆ ಹತ್ತಲು ಮಹಿಳೆಯರ ನಡುವೆ ಉಂಟಾದ ಪೈಪೋಟಿಯಲ್ಲಿ ಬಸ್‌ನ ಬಾಗಿಲು ಕಿತ್ತು ಬಂದಿದೆ. ಮಣ್ಣೆತ್ತಿನ ಅಮಾವಾಸ್ಯೆ ಪ್ರಯುಕ್ತ ಸಾವಿರಾರು ಭಕ್ತರು ಬಂದಿದ್ದರಿಂದ ಬಸ್ ಕೊರತೆ ಉಂಟಾಗಿತ್ತು. ಬೆಟ್ಟಕ್ಕೆ ಹೊರಟಿದ್ದ ಬಸ್‌ಗೆ ಹತ್ತಲು ಮಹಿಳೆಯರು ಮುಗಿಬಿದ್ದರು. ಬಾಗಿಲ ಮೇಲೆ ಬಲಹಾಕಿ ಬಸ್ ಹತ್ತುವ ಭರದಲ್ಲಿ ಬಾಗಿಲು ಕಿತ್ತು ಬಂದಿದೆ.

ಒಕ್ಕಲಿಗರ ಸಂಘಕ್ಕೆ ಬಿ. ಕೆಂಚಪ್ಪಗೌಡ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ಸಿ.ಎನ್. ಬಾಲಕೃಷ್ಣ ಮತ್ತು ಅವರ ಬೆಂಬಲಿಗರ ತಂಡವನ್ನು ಕಾರ್ಯಕಾರಿ ಸಮಿತಿಯಿಂದ ಪದಚ್ಯುತಗೊಳಿಸಿ, ಬಿ. ಕೆಂಚಪ್ಪಗೌಡ ಗುಂಪಿನ ಆರು ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ರಾಜ್ಯ ಒಕ್ಕಲಿಗರ ಸಂಘದ ಸಭಾಂಗಣದಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಬೆಂಗಳೂರು ಜಯನಗರದ ಬಿ.ಕೆಂಚಪ್ಪಗೌಡ (ಅಧ್ಯಕ್ಷ), ಎಲ್. ಶ್ರೀನಿವಾಸ್ ಹಾಗೂ ಸಿ. ದೇವರಾಜು (ಉಪಾಧ್ಯಕ್ಷರು), ಎಚ್‌.ಸಿ. ಜಯಮುತ್ತು (ಪ್ರಧಾನ ಕಾರ್ಯದರ್ಶಿ), ಸಿ.ಜೆ. ಗಂಗಾಧರ (ಸಹಾಯಕ ಕಾರ್ಯದರ್ಶಿ), ಸಿ.ಎಂ. ಮಾರೇಗೌಡ (ಖಜಾಂಚಿ) ಆಯ್ಕೆಯಾಗಿದ್ದಾರೆ. ತಮ್ಮದೇ ಅಧಿಕೃತ ಆಡಳಿತ ಮಂಡಳಿ ಎಂದು ಇವರು ಘೋಷಿಸಿಕೊಂಡಿದ್ದಾರೆ.

ಕೆಲ ತಿಂಗಳಿಂದ ಒಕ್ಕಲಿಗರ ಸಂಘದಲ್ಲಿ ಬಾಲಕೃಷ್ಣ ನೇತೃತ್ವದ ಕಾರ್ಯಕಾರಿ ಸಮಿತಿ ವಿರುದ್ಧ ಈ ಗುಂಪು ಬಂಡಾಯ ಎದ್ದಿತ್ತು.

> **ಈಗ ನಡೆದಿರುವ ಚುನಾವಣೆಗೆ ಮಾನ್ಯತೆ ಇಲ್ಲ. ಆಯ್ಕೆ ವಿರುದ್ಧ ಹೈಕೋರ್ಟ್‌ಗೆ ತೆರಳುತ್ತೇವೆ. ಹೈಕೋರ್ಟ್ ಆದೇಶ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇವೆ.**
>
> **ಟಿ.ಕೋನಪ್ಪರೆಡ್ಡಿ,** ಬಾಲಕೃಷ್ಣ ಗುಂಪಿನ ಪ್ರಧಾನ ಕಾರ್ಯದರ್ಶಿ

'ವಿ.ವಿ ಪುರಂ ಕೃಷ್ಣರಾಜ ರಸ್ತೆಯ ರಾಜ್ಯ ಒಕ್ಕಲಿಗರ ಸಂಘದ ಹೆಸರಿನಲ್ಲಿ ನೂತನ ಪದಾಧಿಕಾರಿಗಳ ಆಯ್ಕೆಗೆ ಸಭೆ ಕರೆಯಲಾಗಿದೆ' ಎಂದು ಹಂಗಾಮಿ ಪ್ರಧಾನ ಕಾರ್ಯದರ್ಶಿ ಎಂ. ಪುಟ್ಟಸ್ವಾಮಿ ಹೆಸರಿನಲ್ಲಿ ಪ್ರಕಟಣೆ ಹೊರಡಿಸಲಾಗಿತ್ತು. ಇದರ ವಿರುದ್ಧ ಬಾಲಕೃಷ್ಣ ನೇತೃತ್ವದ ಗುಂಪು ಈಚೆಗೆ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿತ್ತು. ನ್ಯಾಯಾಲಯವು ಈ ಅರ್ಜಿ ವಿಚಾರಣೆಯನ್ನು ಆಗಸ್ಟ್ 28ಕ್ಕೆ ಮುಂದೂಡಿದ್ದರಿಂದ ಶನಿವಾರ ಚುನಾವಣೆ ನಡೆದಿದೆ.

'ನಮ್ಮ ತಂಡಕ್ಕೆ ಬಹುತೇಕ ನಿರ್ದೇಶಕರ ಬೆಂಬಲ ಇದೆ. ಹಿಂದಿನ ಆಡಳಿತ ಮಂಡಳಿಯಲ್ಲಿದ್ದ 21 ಮಂದಿ ನಿರ್ದೇಶಕರು ಬೆಂಬಲ ನೀಡಿದ್ದಾರೆ. ಗೊಂದಲ ಇಲ್ಲ' ಎಂದು ಎಲ್.ಶ್ರೀನಿವಾಸ್ ತಿಳಿಸಿದ್ದಾರೆ.

'2021ರ ಡಿ.12ರಂದು ಸಂಘದ ಕಾರ್ಯಕಾರಿ ಸಮಿತಿಗೆ ನಡೆದಿದ್ದ ಚುನಾವಣೆಯಲ್ಲಿ 35 ಮಂದಿ ಸದಸ್ಯರು ಆಯ್ಕೆಯಾಗಿದ್ದೆವು. ಬೈಲಾ ಪ್ರಕಾರ 30 ತಿಂಗಳ ಎರಡು ಅವಧಿ ಇರುತ್ತದೆ. ಆದರೆ, ಅಧಿಕಾರ ಹಂಚಿಕೆ ಮಾತುಕತೆ ನಡೆದಿರಲಿಲ್ಲ' ಎಂದು ಬಾಲಕೃಷ್ಣ ಗುಂಪಿನಲ್ಲಿದ್ದ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ ತಿಳಿಸಿದ್ದಾರೆ.

'ಸಂಘದಲ್ಲಿ ₹ 250 ಕೋಟಿಯಷ್ಟು ಹಣ ಉಳಿಸಿದ್ದೇವೆ. ಹಾಸ್ಟೆಲ್, ನರ್ಸಿಂಗ್ ಹಾಗೂ ಆಯುರ್ವೇದ ಕಾಲೇಜುಗಳನ್ನು ಹೊಸದಾಗಿ ಆರಂಭಿಸಿದ್ದೆವು. ಈ ಸುಧಾರಣೆ ಕ್ರಮಗಳನ್ನು ಸಹಿಸಿಕೊಳ್ಳಲು ತಿಮಿಂಗಿಲಗಳಿಗೆ ಸಾಧ್ಯವಾಗಿಲ್ಲ. ಅವಿರೋಧ ಆಯ್ಕೆ ಘೋಷಿಸಿಕೊಂಡವರ ಮೇಲೆ ಅವ್ಯವಹಾರದ ಆರೋಪವಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಗೃಹಲಕ್ಷ್ಮಿ: ಹಣ ನೀಡಿಕೆ ವಿಳಂಬ ಇಲ್ಲ'

ಚಿಕ್ಕಮಗಳೂರು: 'ಗೃಹಲಕ್ಷ್ಮಿ ಯೋಜನೆ ಅನುಷ್ಠಾನದಲ್ಲಿ ಕೆಲ ಬದಲಾವಣೆ ಮಾಡಲಾಗುತ್ತಿದ್ದು, ಅರ್ಜಿ ಸಲ್ಲಿಕೆಗೆ ವಿಳಂಬವಾಗುತ್ತಿದೆ. ಆದರೆ, ಆ. 17 ಅಥವಾ 18ರಂದು ಫಲಾನುಭವಿಗಳ ಖಾತೆಗೆ ಹಣ ಸಂದಾಯ ಆಗಲಿದೆ' ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

ಕೊಪ್ಪ ತಾಲ್ಲೂಕಿನ ಗೌರಿಗದ್ದೆ ಆಶ್ರಮಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಒಟಿಟಿಯಲ್ಲೂ ತಂಬಾಕು ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಟಿಟಿ ವೇದಿಕೆಗಳಲ್ಲಿ ತಂಬಾಕು ವಿರೋಧಿ ಎಚ್ಚರಿಕೆ ಮತ್ತು ಸೂಚನೆಗಳ ಪ್ರದರ್ಶನವನ್ನು ಕಡ್ಡಾಯಗೊಳಿಸಿ ಕೇಂದ್ರ ಸರ್ಕಾರವು ಹೊಸದಾಗಿ ಮಾರ್ಗಸೂಚಿ ಪ್ರಕಟಿಸಿದೆ.

ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್, ಝೀ5 ಸೇರಿದಂತೆ ಇತರೆ ಒಟಿಟಿ ವೇದಿಕೆಗಳು ಇನ್ನು ಮುಂದೆ ಈ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ. ವೇದಿಕೆಯಲ್ಲಿನ ಎಲ್ಲಾ ಕಂಟೆಂಟ್‌ಗಳಲ್ಲೂ ತಂಬಾಕು ವಿರೋಧಿ ಎಚ್ಚರಿಕೆಗಳು ಹಾಗೂ ಸೂಚನೆಗಳನ್ನು ಪ್ರದರ್ಶಿಸಬೇಕಿದೆ. ಈ ನಿಯಮಾವಳಿ ಉಲ್ಲಂಘಿಸಿದರೆ ಕಠಿಣ ಕ್ರಮಕೈಗೊಳ್ಳಲಾಗುತ್ತದೆ ಎಂದು ಕೇಂದ್ರವು ಎಚ್ಚರಿಕೆ ನೀಡಿದೆ.

ಪ್ರತಿ ಪ್ರಕಾಶಕರು ಆನ್‌ಲೈನ್ ಕಂಟೆಂಟ್‌ನ ಆರಂಭದಲ್ಲಿ ಹಾಗೂ ಕೊನೆಯಲ್ಲಿ ತಲಾ 30 ಸೆಕೆಂಡ್‌ವರೆಗೆ, ತಂಬಾಕಿನಿಂದ ಆಗುವ ಅಪಾಯಗಳ ಬಗ್ಗೆ ಪ್ರದರ್ಶಿಸಬೇಕಿದೆ ಎಂದು ತಿಳಿಸಿದೆ.

'ಲಿಂಬೆ ಕಣಜ' ವಿಜಯಪುರ ಜಿಲ್ಲೆಯ ರೈತರಲ್ಲಿ ಹರ್ಷ

'ಇಂಡಿ ಲಿಂಬೆ'ಗೆ ಲಭಿಸಿದ ಭೌಗೋಳಿಕ ಮಾನ್ಯತೆ

● ಬಸವರಾಜ್ ಸಂಪಳ್ಳಿ

ವಿಜಯಪುರ: ಜಿಲ್ಲೆಯ ಇಂಡಿ ಲಿಂಬೆಗೆ ಕೇಂದ್ರ ಸರ್ಕಾರದಿಂದ ಭೌಗೋಳಿಕ ಮಾನ್ಯತೆ (ಜಿಯೋಗ್ರಫಿಕಲ್ ಟ್ಯಾಗ್) ಲಭಿಸಿದೆ. ಅಸ್ಸಾಂ ಲಿಂಬೆಯ ಬಳಿಕ 'ಜಿಐ ಟ್ಯಾಗ್' ಪಡೆದ ಎರಡನೇ ಲಿಂಬೆ ತಳಿ ಎಂಬ ಹೆಗ್ಗಳಿಕೆಗೆ 'ಇಂಡಿ ಲಿಂಬೆ' ಪಾತ್ರವಾಗಿದೆ.

'ಕಾಗ್ಜಿ' ಲಿಂಬೆ ಎಂದೇ ಪ್ರಸಿದ್ಧವಾದ 'ಇಂಡಿ ಲಿಂಬೆ'ಗೆ ಭೌಗೋಳಿಕ ಮಾನ್ಯತೆ ಲಭಿಸಿರುವುದರಿಂದ 'ಲಿಂಬೆ ಕಣಜ' ಎಂದೇ ಖ್ಯಾತವಾದ ವಿಜಯಪುರ ಜಿಲ್ಲೆಯ ಲಿಂಬೆ ಬೆಳೆಗಾರರ ಮೊಗದಲ್ಲಿ ಸಂತಸ ಮೂಡಿದೆ.

'ಇಂಡಿಯಲ್ಲಿನ ಕರ್ನಾಟಕ ಲಿಂಬೆ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ತೋಟಗಾರಿಕೆ ಇಲಾಖೆ ಜಂಟಿಯಾಗಿ 'ಇಂಡಿ ಲಿಂಬೆ'ಗೆ ಐಜಿ ಟ್ಯಾಗ್ ಪಡೆಯುವ ಸಂಬಂಧ ಅಧ್ಯಯನ ವರದಿ ತಯಾರಿಸಿ, ಚೆನ್ನೈನಲ್ಲಿರುವ ಕೇಂದ್ರ ಸರ್ಕಾರದ ಜಿಐ ಟ್ಯಾಗ್ ಕಚೇರಿಗೆ 2021ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಕಳೆದ ಮಾರ್ಚ್ 31ಕ್ಕೆ ಐಜಿ ಟ್ಯಾಗ್ ಮಾನ್ಯತೆ ಲಭಿಸಿದ್ದು, ಇದು 2031 ಮಾರ್ಚ್ 25ರವರೆಗೆ ಇರಲಿದೆ' ಎಂದು ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕ ಸಂತೋಷ ಸಪ್ಪಂಡಿ 'ಪ್ರಜಾವಾಣಿ'ಗೆ ತಿಳಿಸಿದರು.



ಭೌಗೋಳಿಕ ಮಾನ್ಯತೆಗೆ ಪಾತ್ರವಾಗಿರುವ ಇಂಡಿ ಲಿಂಬೆ ಹಣ್ಣು

ವಿಜಯಪುರ ಜಿಲ್ಲೆಯಲ್ಲಿ 'ಕಾಗ್ಜಿ' ತಳಿಯ ಲಿಂಬೆ ಉತ್ಪಾದನೆ ಹೆಚ್ಚು. ಈ ತಳಿಯ ಹಣ್ಣುಗಳು ದುಂಡಗಿದ್ದು, ಹಣ್ಣಿನ ಸಿಪ್ಪೆ ತೆಳುವಾಗಿರುತ್ತದೆ. ಹಣ್ಣಿನ ರಸ ಹುಳಿಯಾಗಿದ್ದು, ವಿಶಿಷ್ಟ ಸುವಾಸನೆ ಹೊಂದಿದೆ.

'ಜಿಲ್ಲೆಯ ಒಣ ಹವೆಯು ಲಿಂಬೆ ಬೆಳೆ ಬೆಳೆಯಲು ಸೂಕ್ತವಾಗಿದೆ. ಕಡಿಮೆ ಫಲವತ್ತತೆ ಇರುವ ಜಮೀನಿನಲ್ಲಿ ಕಡಿಮೆ ನೀರಿದ್ದರೂ ಲಿಂಬೆ ಬೆಳೆ ಬೆಳೆಯಬಹುದು. ಲಿಂಬೆ ವರ್ಷವಿಡೀ ಹೊಸ ಚಿಗುರಿನೊಂದಿಗೆ ಹೂ, ಹಣ್ಣು ಬಿಡುತ್ತದೆ. ವರ್ಷಪೂರ್ತಿ ನಿರಂತರ ಆದಾಯ ಇರುತ್ತದೆ' ಎಂದು ರೈತರು ಹೇಳುತ್ತಾರೆ.

ಇಂಡಿ ಲಿಂಬೆಯ ಇತಿಹಾಸ

'ವಿಜಯಪುರದ ಆದಿಲ್‌ಶಾಹಿ ಅರಸರು ಕರ್ಜೂರ, ತಂಬಾಕು ಮತ್ತು ಲಿಂಬೆ ಬೆಳೆಯನ್ನು ಕರ್ನಾಟಕಕ್ಕೆ ಪರಿಚಯಿಸಿದ್ದಾರೆ. ಆದರೆ, ಲಿಂಬೆ ಬೆಳೆಯನ್ನು ರಾಜ್ಯಕ್ಕೆ ಆದಿಲ್‌ಶಾಹಿ ಅರಸರೇ ಪರಿಚಯಿಸಿದ್ದು ಎಂಬುದಕ್ಕೆ ಪೂರಕ ಸಾಕ್ಷಾಧಾರಗಳ ಕೊರತೆ ಇದೆ' ಎಂದು ಕರ್ನಾಟಕ ಲಿಂಬೆ ಅಭಿವೃದ್ಧಿ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕ ಸಂತೋಷ ಸಪ್ಪಂಡಿ ಹೇಳುತ್ತಾರೆ.

ಲಿಂಬೆ ಹಾಗೂ ಲಿಂಬೆ ಜಾತಿಗೆ ಸೇರಿದ ಕಿತ್ತಳೆ ಹಾಗೂ ಮೊಸಂಬಿ ಬೆಳೆಗಳ ಸಮಗ್ರ ಅಭಿವೃದ್ಧಿಗೆ ಹಾಗೂ ರೈತರ ಪ್ರೋತ್ಸಾಹದ ದೃಷ್ಟಿಯಿಂದ ರಾಜ್ಯ ಕಾಂಗ್ರೆಸ್ ಸರ್ಕಾರವು 2017 ಮೇ 16ರಂದು ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಿದೆ.

> **ಜಿಐ ಟ್ಯಾಗ್ ಲಭಿಸಿರುವುದರಿಂದ ಭವಿಷ್ಯದಲ್ಲಿ ಲಿಂಬೆ ಕೃಷಿ ಮತ್ತಷ್ಟು ಮಹತ್ವ ಪಡೆಯಲಿದೆ. ಉತ್ತಮ ಮಾರುಕಟ್ಟೆ, ಬೇಡಿಕೆ, ರಫ್ತು ಸೌಲಭ್ಯ ಮುಂತಾದವು ದೊರೆಯುವ ನಿರೀಕ್ಷೆ ಇದೆ.**
>
> **ಸಂತೋಷ ಸಪ್ಪಂಡಿ,** ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಲಿಂಬೆ ಅಭಿವೃದ್ಧಿ ಪ್ರಾಧಿಕಾರ

ರಾಜ್ಯದಲ್ಲಿ 21,660 ಹೆಕ್ಟೇರ್‌ನಲ್ಲಿ ಲಿಂಬೆ ಬೆಳೆಯಲಾಗುತ್ತಿದ್ದು, 30 ಸಾವಿರ ರೈತರು ಈ ಕೃಷಿಯಲ್ಲಿ ತೊಡಗಿ ಕೊಂಡಿದ್ದಾರೆ. ವಿಜಯಪುರ ಜಿಲ್ಲೆಯು ರಾಜ್ಯದ ವಿಸ್ತೀರ್ಣದಲ್ಲಿ ಶೇ 58ರಷ್ಟು (12,220 ಹೆಕ್ಟೆರ್) ಹೊಂದಿದೆ. ಕಲಬುರಗಿ ಎರಡನೇ ಸ್ಥಾನ, ಬಾಗಲಕೋಟೆ ಮೂರನೇ ಮತ್ತು ಬೆಳಗಾವಿ ಜಿಲ್ಲೆ ನಾಲ್ಕನೇ ಸ್ಥಾನ ಪಡೆದಿವೆ. ವಿಜಯಪುರ ಜಿಲ್ಲೆಯ ಇಂಡಿ (5,500 ಹೆಕ್ಟೇರ್) ಮತ್ತು ಸಿಂದಗಿ(4,500 ಹೆಕ್ಟೇರ್) ತಾಲ್ಲೂಕುಗಳಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಲಿಂಬೆ ಬೆಳೆಯಲಾಗುತ್ತದೆ.

ವಿದೇಶಕ್ಕೂ ರಫ್ತು: ರಾಜ್ಯದಿಂದ ನೆರೆಯ ಬಾಂಗ್ಲಾದೇಶ, ನೇಪಾಳ, ದುಬೈ, ಅಬುದಾಬಿ, ಕುವೈತ್, ಶ್ರೀಲಂಕಾ, ಪಾಕಿಸ್ತಾನ ಸೇರಿ 25 ದೇಶಗಳಿಗೆ ಲಿಂಬೆ ರಫ್ತು ಮಾಡಲಾಗುತ್ತಿದೆ.

ಪಿಎಸ್‌ಐ ಮೇಲೆ ಹಲ್ಲೆ ಯತ್ನ ಆರೋಪಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಕಲಬುರಗಿ: ಜೇವರ್ಗಿಯ ಹುಲ್ಲೂರು ಗ್ರಾಮದ ಬಳಿ ಮರಳು ಅಕ್ರಮ ಸಾಗಾಣಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ರ್ಯಾಕ್ಟರ್ ಮಾಲೀಕ, ರೌಡಿ ಶೀಟರ್ ಸಾಯಿಬಣ್ಣ ಕರ್ಜಗಿಯನ್ನು ಕರೆತರುವ ವೇಳೆ ಪಿಎಸ್‌ಐ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದಾಗ ಆತನ ಕಾಲಿಗೆ ಪೊಲೀಸರು ಶನಿವಾರ ಗುಂಡು ಹಾರಿಸಿ ಬಂಧಿಸಿದ್ದಾರೆ.

ಗಾಯಗೊಂಡ ಸಾಯಿಬಣ್ಣನನ್ನು ನಗರದ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಾಯಬಣ್ಣನಿಂದ ದಾಳಿಗೊಳಗಾದ ಯಡ್ರಾಮಿ ಪಿಎಸ್‌ಐ ಬಸವರಾಜ ಚಿತಕೋಟಿ ಅವರನ್ನು ನಗರದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹುಲ್ಲೂರು ಗ್ರಾಮದ ಬಳಿ ಗುರುವಾರ ರಾತ್ರಿ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ ತಡೆಯಲು ಮುಂದಾದ ನೆಲೋಗಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಯೂರ ಚವ್ಹಾಣ ಅವರ ಮೇಲೆ ಚಾಲಕ ಸಿದ್ದಣ್ಣ ಕರ್ಜಗಿ ಟ್ರ್ಯಾಕ್ಟರ್ ಹರಿಸಿ ಕೊಲೆ ಮಾಡಿದ್ದ. ಈ ಟ್ರ್ಯಾಕ್ಟರ್ ಸಾಯಿಬಣ್ಣನ ಹೆಸರಿನಲ್ಲಿತ್ತು. ಹೀಗಾಗಿ, ಆತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು ಶನಿವಾರ ವಿಜಯಪುರ ಜಿಲ್ಲೆಯ ಆಲಮೇಲ ಪಟ್ಟಣದಿಂದ ಬಂಧಿಸಿ ಕರೆತರುತ್ತಿದ್ದರು.



ಸಾಯಿಬಣ್ಣ

ಯಡ್ರಾಮಿ ಪಿಎಸ್‌ಐ ಬಸವರಾಜ ಚಿತಕೋಟೆ, ಜೇವರ್ಗಿ ಪಿಎಸ್‌ಐ ಸಂಗಮೇಶ ಅಂಗಡಿ ಹಾಗೂ ಎಎಸ್‌ಐ ಗುರುಬಸಪ್ಪ ಆರೋಪಿಯನ್ನು ವಾಹನದಲ್ಲಿ ಕರೆ ತರುವ ವೇಳೆಯಲ್ಲಿ ಮಾರ್ಗ ಮಧ್ಯೆ ನಿಸರ್ಗ ಕರೆಗೆ ಇಳಿದಿದ್ದ ಸಾಯಿಬಣ್ಣ ಚಾಕುವಿನಿಂದ ಏಕಾಏಕಿ ಪಿಎಸ್‌ಐ ಬಸವರಾಜ ಚಿತಕೋಟೆ ಮೇಲೆ ಹಲ್ಲೆ ಮಾಡಿದ್ದಾನೆ. ಕೈಗೆ ಮತ್ತು ಹೊಟ್ಟೆಯ ಭಾಗಕ್ಕೆ ಗಾಯವಾಗಿದೆ. ಈ ವೇಳೆ ತಪ್ಪಿಸಿಕೊಂಡು ಓಡಿ ಹೋಗುವ ವೇಳೆಯಲ್ಲಿ ವಾಹನದಲ್ಲೇ ಇದ್ದ ಇನ್ನೊಬ್ಬ ಪಿಎಸ್‌ಐ ಸಂಗಮೇಶ ಸರ್ವಿಸ್ ರಿವಾಲ್ವರ್‌ನಿಂದ ಒಂದು ಸುತ್ತು ಕಾಲಿಗೆ ಗುಂಡು ಹಾರಿಸಿ ಹಿಡಿದರು.


'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಲಬುರಗಿ ಎಸ್‌ಪಿ ಇಶಾ ಪಂತ್, 'ಪಿಎಸ್‌ಐ ಮೇಲೆ ಹಲ್ಲೆ ನಡೆಸಲು ಮುಂದಾದಾಗ ಮತ್ತೊಬ್ಬ ಪಿಎಸ್‌ಐ ಆರೋಪಿಯ ಬಲಗಾಲಿಗೆ ಗುಂಡು ಹಾರಿಸಿದ್ದಾರೆ. ಆರೋಪಿ ಸಾಯಬಣ್ಣ ವಿರುದ್ಧ ಕೊಲೆ ಯತ್ನ ಹಾಗೂ ಡಕಾಯಿತಿ ಪ್ರಕರಣಗಳಿವೆ. ಹೀಗಾಗಿ, ಜೇವರ್ಗಿ ಠಾಣೆಯಲ್ಲಿ ರೌಡಿ ಪಟ್ಟಿಯಲ್ಲಿ ಹೆಸರು ಸೇರಿಸಲಾಗಿದೆ' ಎಂದರು.

ಸಿಪಿಐ, ಪಿಎಸ್‌ಐ ಅಮಾನತು: ಮರಳು ಅಕ್ರಮ ಸಾಗಾಟ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿದ ಜೇವರ್ಗಿ ಸರ್ಕಲ್ ಪೊಲೀಸ್ ಇನ್‌ಸ್ಪೆಕ್ಟರ್ ಭೀಮನಗೌಡ ಬಿರಾದಾರ, ನೆಲೋಗಿ ಠಾಣೆ ಪಿಎಸ್‌ಐ ಗೌತಮ್ ಹಾಗೂ ಕಾನ್‌ಸ್ಟೆಬಲ್ ರಾಜಶೇಖರ ಅವರನ್ನು ಎಸ್ಪಿ ಇಶಾ ಪಂತ್ ಅಮಾನತುಗೊಳಿಸಿದ್ದಾರೆ.

ಭಾನುವಾರ, ಜೂನ್ 18, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 168 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹವಾಮುನ್ಸೂಚನೆಯ ಸವಾಲಿಗೆ, ವಿಜ್ಞಾನ ಕಾಲಾಂತರದಲ್ಲಿ ಹಲವು ಬಗೆಯ ಜವಾಬುಗಳನ್ನು ಕೊಡುತ್ತಾಬಂದಿದೆ.



ಎಲ್‌ನಿನೊ: ಸಾಂಸ್ಥಿಕ ಹೂಡಿಕೆಗೆ ಅಡ್ಡಿ? 6
ಮಣಿಪುರ ಹಿಂಸಾಚಾರ: ನರೇಂದ್ರ ಮೋದಿ ಮೌನ ಪ್ರಶ್ನಿಸಿದ ನಾಯಕರು
ಪ್ರಧಾನಿ ಜೊತೆ ಮಾತುಕತೆಗೆ ಪಟ್ಟು 7
ಉತ್ತರ ಪ್ರದೇಶ: ಬಿಸಿಗಾಳಿಗೆ 34 ಸಾವು 5

ಎಪಿಎಂಸಿ ಕಾಯ್ದೆ ತಿದ್ದುಪಡಿ ತಂದಿಟ್ಟ ಸಂಕಷ್ಟ • ರೈತರಿಗೆ ಕೋಟ್ಯಂತರ ರೂಪಾಯಿ ವಂಚನೆ

ಆದಾಯ ಕ್ಷೀಣ: ಪ್ರಾಂಗಣ ಭಣಭಣ

• ಭೀಮಸೇನ ಚಳಗೇರಿ

ಒಳನೋಟ
ಪುನಶ್ಚೇತನ ತುರ್ತು ಅಗತ್ಯ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ಆಂಧ್ರಪ್ರದೇಶ ಮೂಲದ ವ್ಯಾಪಾರಿಯೊಬ್ಬರು ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳ ರೈತರ ಹೊಲಗಳಿಗೇ ಹೋಗಿ ಮೆಣಸಿನಕಾಯಿ ಖರೀದಿ ಮಾಡುತ್ತಿದ್ದರು. ಆರಂಭದಲ್ಲಿ ಖರೀದಿಸಿದ ನಂತರ ಕೆಲವರಿಗೆ ಹಣ ನೀಡಿದ್ದರು. ಹೀಗಾಗಿ ಅವರನ್ನು ನಂಬಿದ ಅನೇಕ ರೈತರು ಅವರಿಗೇ ಮೆಣಸಿನಕಾಯಿ ಮಾರಾಟ ಮಾಡಿದ್ದಾರೆ. ಆದರೆ, ಅವರು ಈವರೆಗೆ ಹಣ ನೀಡದೆ, ಬಾಕಿ ಉಳಿಸಿಕೊಂಡಿರುವ ಮೊತ್ತ ಬರೋಬ್ಬರಿ ₹ 12 ಕೋಟಿ!

ನಾಲಿಗೆಗೆ ಕಡುಖಾರ ಸವರಿಕೊಂಡ ಅನುಭವ ಹಣ ಕಳೆದುಕೊಂಡ ರೈತರದ್ದಾಗಿದೆ. ಖಾರದ ಮೆಣಸಿನಕಾಯಿಯನ್ನು ತಿನ್ನದಿದ್ದರೂ ರೈತರು ನೀರು ಕುಡಿಯ ಬೇಕಾಗಿದೆ.. ಕಣ್ಣೀರೂ ಹಾಕಬೇಕಾಗಿದೆ.

‘ಈ ವ್ಯಾಪಾರಿ ವಿರುದ್ಧ ದೇವದುರ್ಗ ತಾಲ್ಲೂಕಿನ ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರೈತರಿಗೆ ಹಣ ಕೊಡಿಸುವ ಸಲುವಾಗಿ ಅನೇಕ ಬಾರಿ ಹೋರಾಟಗಳನ್ನು ನಡೆಸಿ, ಸ್ಥಳೀಯ ಆಡಳಿತದ ಗಮನಕ್ಕೂ ತಂದಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಕರ್ನಾಟಕ ರಾಜ್ಯ ರೈತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪ್ರಭಾಕರ ಪಾಟೀಲ ತಿಳಿಸಿದರು.

ರೈತರಿಂದ ಕೃಷಿ ಉತ್ಪನ್ನ ಖರೀದಿಸಿದ ದಲ್ಲಾಳಿಯೊಬ್ಬರು, ಹಣ ಕೊಡದೇ ವಂಚಿಸಿದ ಪ್ರಕರಣಗಳು ದಾವಣಗೆರೆ ಜಿಲ್ಲೆಯಲ್ಲೂ ನಡೆದಿವೆ. ರೈತರು ದೂರಿನಲ್ಲಿ ಇಂತಹ ವ್ಯಕ್ತಿಯೇ ಮೋಸ ಮಾಡಿದ್ದು ಎಂದು ಹೇಳಿದ್ದರು ಬಹಳಷ್ಟು ಎಫ್‌ಐಆರ್‌ಗಳಲ್ಲಿ ಅನಾಮಧೇಯ ಮೋಸ ಮಾಡಿದ ಎಂದು ನಮೂದಿಸಲಾಗಿದೆ.

‘2022ರ ಡಿಸೆಂಬರ್‌ನಲ್ಲಿ ರೈತರಿಂದ ಭತ್ತ, ಮೆಕ್ಕೆಜೋಳ ಖರೀದಿಸಿದ ದಲ್ಲಾಳಿಯೊಬ್ಬರು ಹಣ ಕೊಡದೇ ವಂಚನೆ ಮಾಡಿದ್ದರು. ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಅರವಿ ಗ್ರಾಮದ 15 ರೈತರು, ದಾವಣಗೆರೆ ಜಿಲ್ಲೆಯ ಮಾಯಕೊಂಡ, ಮೆಳ್ಳೇಕಟ್ಟೆ, ನಲ್ಲೂರು ಭಾಗಗಳ ನೂರಾರು ರೈತರು ಹಾಗೂ ಸಣ್ಣ ಸ್ಥಳೀಯ ವರ್ತಕರಿಗೂ ಕೋಟ್ಯಂತರ ರೂಪಾಯಿ ವಂಚನೆ ಮಾಡಲಾಗಿದೆ. ಹಣ ಕೇಳಲು ಹೋದರೆ ರೌಡಿಗಳನ್ನು ಬಿಟ್ಟು ಬೆದರಿಸುತ್ತಿದ್ದಾರೆ’ ಎಂದು ರೈತರು ಆರೋಪಿಸಿದ್ದಾರೆ.

4ನೇ ಪುಟ ನೋಡಿ


ಹೆಸರು ಮಾತ್ರ ಎಪಿಎಂಸಿ ಮಾರುಕಟ್ಟೆಗೆ ಬರುತ್ತಿದೆ. ಉಳಿದ ಉತ್ಪನ್ನಗಳು ಹೊರಗಡೆಯೇ ಮಾರಾಟವಾಗುತ್ತಿವೆ. ಸಿಬ್ಬಂದಿ ವೆಚ್ಚ ನಿರ್ವಹಿಸುವುದು ಕಷ್ಟವಾಗುತ್ತಿದೆ
ವೀರೇಶ ಅಂಗಡಿ, ವ್ಯಾಪಾರಸ್ಥ, ಎಪಿಎಂಸಿ, ಬಾಗಲಕೋಟೆ

ಕಲಬುರಗಿಯಲ್ಲಿ ಹೆಚ್ಚಾಗಿ ಬೆಳೆಯುವ ತೊಗರಿಯನ್ನು ವ್ಯಾಪಾರಿಗಳು ಎಪಿಎಂಸಿ ಹೊರಗಡೆ ಕಡಿಮೆ ಬೆಲೆಗೆ ಖರೀದಿಸಿ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸಿದ್ದಾರೆ.
ಶರಣಬಸಪ್ಪ ಮಮಶೆಟ್ಟಿ, ಜಿಲ್ಲಾ ಅಧ್ಯಕ್ಷ, ಕರ್ನಾಟಕ ಪ್ರಾಂತ ರೈತ ಸಂಘ, ಕಲಬುರಗಿ



ಕೂಲಿ ಕೆಲಸವಿಲ್ಲದ ಕಾರಣ ಕಾರ್ಮಿಕರೊಬ್ಬರು ಕಲಬುರಗಿಯ ಎಪಿಎಂಸಿ (ಗಂಜ್) ಮಾರುಕಟ್ಟೆಯಲ್ಲಿ ನಿದ್ರೆಗೆ ಜಾರಿರುವುದು
ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಎಪಿಎಂಸಿ ಅವನತಿಯ ಅಂಕಿ ಅಂಶ



ಅಕ್ಕಿ ಖರೀದಿ: ಇನ್ನೂ ಕಗ್ಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತ್ಯೋದಯ ಮತ್ತು ಆದ್ಯತಾ (ಬಡತನ ರೇಖೆಗಿಂತ ಕೆಳಗಿರುವ-ಬಿಪಿಎಲ್) ಪಡಿತರ ಚೀಟಿ ಹೊಂದಿರುವ ಕುಟುಂಬ ಸದಸ್ಯರಿಗೆ ಅನ್ನ ಭಾಗ್ಯ ಯೋಜನೆಯಡಿ ವಿತರಿಸಲು ಅಗತ್ಯವಿರುವ ಅಕ್ಕಿ ಖರೀದಿಯ ಕಗ್ಗಂಟು ಮುಂದುವರಿದಿದೆ.

ಅಂತ್ಯೋದಯ ಮತ್ತು ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿ ವಿತರಿಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ‘ಗ್ಯಾರಂಟಿ’ ಭರವಸೆ ಘೋಷಿಸಿತ್ತು. ಈ ಯೋಜನೆಗೆ ವರ್ಷಕ್ಕೆ 2.85 ಲಕ್ಷ ಟನ್ ಅಕ್ಕಿ ಅಗತ್ಯವಿದೆ. ಕೇಂದ್ರ ಸರ್ಕಾರ ಸ್ವಾಮ್ಯದ ಭಾರತ ಆಹಾರ ನಿಗಮವು ಹೆಚ್ಚುವರಿ ಅಕ್ಕಿ ಪೂರೈಸಲು ನಿರಾಕರಿಸಿರುವ ಕಾರಣ ರಾಜ್ಯ ಸರ್ಕಾರಗಳ ಬಳಿ ದಾಸ್ತಾನು ಇರುವ ಅಕ್ಕಿ ಖರೀದಿಗೆ ಪ್ರಯತ್ನ ನಡೆಸಲಾಗುತ್ತಿದೆ.

ತೆಲಂಗಾಣದಿಂದ ಅಕ್ಕಿ ಖರೀದಿಸಲು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಪ್ರಯತ್ನಿಸಿದ್ದರು. ಆದರೆ, ತಮ್ಮಲ್ಲಿ ಕರ್ನಾಟಕಕ್ಕೆ ಅಗತ್ಯ ಇರುವಷ್ಟು ಪ್ರಮಾಣದ ಅಕ್ಕಿಯ ದಾಸ್ತಾನು ಇಲ್ಲ ಎಂಬ ಉತ್ತರವನ್ನು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೀಡಿದ್ದಾರೆ. ಆ ಬಳಿಕ ಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆಯುವ ಇತರ ರಾಜ್ಯಗಳಿಂದ ಅಕ್ಕಿ ಖರೀದಿಗೆ ಪ್ರಯತ್ನ ನಡೆದಿದೆ.

ಛತ್ತೀಸಗಢದತ್ತ ಚಿತ್ತ: ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರವೇ ಇರುವ ಛತ್ತೀಸಗಢದಲ್ಲಿ 1.5 ಲಕ್ಷ ಟನ್ ಅಕ್ಕಿಯ ದಾಸ್ತಾನಿದೆ ಎಂಬ ಮಾಹಿತಿ ರಾಜ್ಯ ಸರ್ಕಾರಕ್ಕೆ ಲಭ್ಯವಾಗಿದೆ. ಅಲ್ಲಿಂದ ಅಕ್ಕಿ ಖರೀದಿಗೆ ಪ್ರಯತ್ನ ಆರಂಭವಾಗಿದೆ. ಅಲ್ಲಿನ ಸರ್ಕಾರದ ಜತೆ ಪತ್ರ ವ್ಯವಹಾರ ನಡೆಸಿ, ಅಕ್ಕಿಯ ಲಭ್ಯತೆ ಖಚಿತಪಡಿಸಿಕೊಳ್ಳುವಂತೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

6ನೇ ಪುಟ ನೋಡಿ

ಬಿಜೆಪಿ ನಾಯಕರ ಮನೆಗಳೇ ಉದ್ರಿಕ್ತರ ದಾಳಿಯ ಗುರಿ

ಮಣಿಪುರ: ನಿಲ್ಲದ ಘರ್ಷಣೆ

ಇಂಫಾಲ್/ಕೋಲ್ಕತ್ತ (ಪಿಟಿಐ): ಮಣಿಪುರದ ಇಂಫಾಲ್‌ನಲ್ಲಿ ಶುಕ್ರವಾರ ತಡರಾತ್ರಿಯಿಂದ ಶನಿವಾರ ಬೆಳಿಗ್ಗೆವರೆಗೂ ಉದ್ರಿಕ್ತ ಗುಂಪುಗಳು ಬಿಜೆಪಿ ಕಚೇರಿ ಮತ್ತು ಆ ಪಕ್ಷದ ನಾಯಕರ ಮನೆಗಳನ್ನು ಗುರಿಯಾಗಿಸಿಕೊಂಡು ದಾಳಿ ಮುಂದುವರಿಸಿದ್ದು, ಈ ಘರ್ಷಣೆಯಲ್ಲಿ ಇಬ್ಬರು ನಾಗರಿಕರು ಗಾಯಗೊಂಡಿದ್ದಾರೆ.

ಕೇಂದ್ರ ವಿದೇಶಾಂಗ ಖಾತೆಯ ರಾಜ್ಯ ಸಚಿವ ಆರ್.ಕೆ. ರಂಜನ್ ಸಿಂಗ್ ಅವರ ಮನೆಯ ಮೇಲೆ ಗುರುವಾರ ಮಧ್ಯರಾತ್ರಿ ಗುಂಪೊಂದು ಪೆಟ್ರೋಲ್ ಬಾಂಬ್ ದಾಳಿ ನಡೆಸಿ ಧ್ವಂಸಗೊಳಿಸಿತ್ತು. ಇದರ ಬೆನ್ನಲ್ಲೇ ಬಿಜೆಪಿ ಶಾಸಕ ಬಿಸ್ವಜಿತ್ ಅವರ ಮನೆಗೆ ಬೆಂಕಿ ಹಚ್ಚಲು ಕಿಡಿಗೇಡಿಗಳು ಯತ್ನಿಸಿದರು. ಸ್ಥಳಕ್ಕೆ ಧಾವಿಸಿದ ಮಣಿಪುರ ಕ್ಷಿಪ್ರಪಡೆಯ ಯೋಧರು ಗುಂಪನ್ನು ಚದುರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪೋರಂಪತ್ ಬಳಿ ಇರುವ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶಾರದಾ ದೇವಿ ಅವರ ಮನೆಗೆ ಬೆಂಕಿ ಹಚ್ಚಿ ಧ್ವಂಸಗೊಳಿಸಲು ಮುಂದಾಗಿದ್ದ ಯುವಕರ ಗುಂಪನ್ನು ಸೇನಾ ಪಡೆಗಳು ಚದುರಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

7ನೇ ಪುಟ ನೋಡಿ

ಪರೀಕ್ಷೆಗೆ ಗೈರು, ಉತ್ತರ ಪತ್ರಿಕೆ ಪ್ರತ್ಯಕ್ಷ!

• ರಶ್ಮಿ ಬೇಲೂರು

ಬೆಂಗಳೂರು: ಡಿ.ಫಾರ್ಮಾ (ಫಾರ್ಮಸಿ ಡಿಪ್ಲೊಮಾ) ಪರೀಕ್ಷೆಗೆ ಗೈರಾಗಿದ್ದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನ ಸಮಯದಲ್ಲಿ ಪತ್ತೆಯಾಗಿದ್ದು, ವಿಚಾರಣೆಗೆ ಹಾಜರಾಗುವಂತೆ 104 ವಿದ್ಯಾರ್ಥಿಗಳಿಗೆ ಔಷಧ ನಿಯಂತ್ರಣ ಇಲಾಖೆಯ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನೋಟಿಸ್ ನೀಡಿದೆ.

ಪರೀಕ್ಷೆಗೆ ಗೈರಾಗಿದ್ದ ವಿದ್ಯಾರ್ಥಿಗಳ 397 ಉತ್ತರ ಪತ್ರಿಕೆಗಳೂ ಮೌಲ್ಯಮಾಪನ ಮಾಡುವಾಗ ದೊರೆತಿದ್ದವು. ಹಗರಣದಲ್ಲಿ ಹೊರಗಿನ ರಾಜ್ಯಗಳ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾದ ಸಂಶಯವಿದೆ. ಮಂಡಳಿ ಈಗಾಗಲೇ ಪ್ರಾಥಮಿಕ ವಿಚಾರಣೆ ಆರಂಭಿಸಿದ್ದು, ಉನ್ನತಮಟ್ಟದ ತನಿಖೆ ನಡೆಸಲು ಕೋರಿ ನಿರ್ಣಯ ಕೈಗೊಂಡಿದೆ.

ಗೈರಾಗಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನೂ ನೀಡಿರಲಿಲ್ಲ. ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಕರೆತರುವ ಮಧ್ಯವರ್ತಿಗಳ ಕೈವಾಡದಿಂದ ಈ ಉತ್ತರ ಪತ್ರಿಕೆಗಳು ಸೇರಿಕೊಂಡಿರಬಹುದು.

6ನೇ ಪುಟ ನೋಡಿ

ಮಳೆಗೆ ಸಿಲುಕಿದ 2400 ಪ್ರವಾಸಿಗರು

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯ ಪರಿಣಾಮ ರಸ್ತೆ ತಡೆಯುಂಟಾಗಿ ಉತ್ತರ ಸಿಕ್ಕಿಂನ ಲಾಚೆನ್ ಮತ್ತು ಲಾಚುಂಗ್ ಪ್ರದೇಶದಲ್ಲಿ 2,400ಕ್ಕೂ ಹೆಚ್ಚು ಪ್ರವಾಸಿಗರು ಸಿಲುಕಿಕೊಂಡಿದ್ದಾರೆ.

ಚಂಡಮಾರುತ ಬಿಪೊರ್‌ಜಾಯ್ ಪರಿಣಾಮದಿಂದಾಗಿ ರಾಜಸ್ಥಾನದ ವಿವಿಧ ಜಿಲ್ಲೆಗಳಲ್ಲಿ ಕಳೆದ 24 ಗಂಟೆಗಳಲ್ಲಿ ಧಾರಾಕಾರ ಮಳೆಯಾಗಿದೆ. ಮೌಂಟ್ ಅಬುವಿನಲ್ಲಿ ಗರಿಷ್ಠ 21 ಸೆಂ.ಮೀ. ಮಳೆಯಾಗಿದೆ.

ಚಂಡಮಾರುತದ ತೀವ್ರ ಪರಿಣಾಮಕ್ಕೆ ಗುರಿಯಾಗಿರುವ ಗುಜರಾತ್‌ನ ಕಛ್ ಜಿಲ್ಲೆ ಸೇರಿದಂತೆ ಅಲ್ಲಿನ ಕರಾವಳಿ ಜಿಲ್ಲೆಗಳಲ್ಲಿ ಜನಜೀವನ ಸಹಜಸ್ಥಿತಿಗೆ ಮರಳುತ್ತಿದೆ. ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಪಡಿಸುವ ಕೆಲಸ ಭರದಿಂದ ಸಾಗಿದೆ.

ವಿವರ 5

ರೊಬಸ್ಟಾ ಕಾಫಿಗೆ ಸಾರ್ವಕಾಲಿಕ ದಾಖಲೆ ಬೆಲೆ 6

ಚಿನಕುರಳಿ
ಪ್ರಕಾಶ್ ಶೆಟ್ಟಿ



ವಿವಿಧ ಕ್ಷೇತ್ರಗಳ ಪ್ರಮುಖರ ಜೊತೆ ವಿಧಾನಸೌಧದಲ್ಲಿ ಸಭೆ • ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

ಬೆಂಗಳೂರು ಅಭಿವೃದ್ಧಿಗೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ಮಹಾ ಯೋಜನೆ ರೂಪಿಸಲು ಸರ್ಕಾರಿ ಅಧಿಕಾರಿಗಳು ಮತ್ತು ವಿಷಯ ಪರಿಣಿತರನ್ನು ಒಳಗೊಂಡ ತಜ್ಞರ ಸಮಿತಿ ನೇಮಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಜಧಾನಿಯ ಅಭಿವೃದ್ಧಿ ಕುರಿತು ವಿವಿಧ ಕ್ಷೇತ್ರಗಳ ಪ್ರಮುಖರ ಜತೆ 'ಬ್ರ್ಯಾಂಡ್ ಬೆಂಗಳೂರು' ಶೀರ್ಷಿಕೆಯಡಿ ವಿಧಾನಸೌಧದಲ್ಲಿ ಶನಿವಾರ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಬೆಂಗಳೂರಿನ ಸಮಗ್ರ ಅಭಿವೃದ್ಧಿಗಾಗಿ ಮಹಾ ಯೋಜನೆ (ಮಾಸ್ಟರ್ ಪ್ಲ್ಯಾನ್) ರೂಪಿಸಬೇಕಿದೆ. ಅದಕ್ಕೆ ಪೂರಕವಾಗಿ ತಜ್ಞರ ಸಮಿತಿಯು ನೀಲನಕ್ಷೆಯನ್ನು ಸಿದ್ಧಪಡಿಸಲಿದೆ. ಸಮಿತಿಯ ಸದಸ್ಯರ ಹೆಸರುಗಳನ್ನು ಶೀಘ್ರದಲ್ಲಿ ಅಂತಿಮಗೊಳಿಸಲಾಗುವುದು ಎಂದರು.

ಕೈಗಾರಿಕೋದ್ಯಮಿಗಳು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಶಿಕ್ಷಣ ಕ್ಷೇತ್ರದ ಪ್ರಮುಖರು, ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿದಂತೆ ಹಲವು ಕ್ಷೇತ್ರಗಳ 42 ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವ ಭರವಸೆ ಅವರಿಂದ ದೊರಕಿದೆ ಎಂದು ಹೇಳಿದರು.

ಅತಿ ದಟ್ಟಣೆಯ ಕಾರಿಡಾರ್‌ಗಳ ವಿಸ್ತರಣೆ, ಮೆಟ್ರೊ ರೈಲು ಮಾರ್ಗಗಳ ವಿಸ್ತರಣೆ, ಸಂಚಾರ ದಟ್ಟಣೆ ತಗ್ಗಿಸುವುದು, ತ್ಯಾಜ್ಯ ನಿರ್ವಹಣೆಯಲ್ಲಿನ ಸಮಸ್ಯೆ ಪರಿಹರಿಸುವುದು, ಕೊಳಚೆ ನೀರು ಶುದ್ಧೀಕರಿಸಿ ಮರುಬಳಕೆ ಮಾಡುವುದು, ಕೊಳೆಗೇರಿಗಳ ಅಭಿವೃದ್ಧಿ, ಹೊಸ ಉಪನಗರಗಳ ನಿರ್ಮಾಣ, ಹೊರ ವರ್ತುಲ ರಸ್ತೆ ನಿರ್ಮಾಣ ಸೇರಿದಂತೆ ಹಲವು ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ ಎಂದರು.

ಉಪ ನಗರ ರೈಲು ಯೋಜನೆ ಕಾಮಗಾರಿ ಆರಂಭವಾಗದೇ ಇರುವ ಕುರಿತು ಕೆಲವರು ಅಸಮಾಧಾನ ವ್ಯಕ್ತಪಡಿಸಿದರು. ನೈಸ್ ರಸ್ತೆಯ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ವರ್ತುಲ ರಸ್ತೆ ಮಾದರಿಯಲ್ಲಿ ಬಳಸಿಕೊಳ್ಳುವ ಬಗ್ಗೆಯೂ ಸಲಹೆಗಳು ಬಂದಿವೆ ಎಂದು ಶಿವಕುಮಾರ್ ವಿವರಿಸಿದರು.

'ಕೊಳಚೆ ನೀರು ಶುದ್ಧೀಕರಣಕ್ಕೆ ಆಸಕ್ತಿ'

'ಬೆಂಗಳೂರಿನ ಅಭಿವೃದ್ಧಿಗೆ ಅನೇಕ ಕೆಲಸಗಳನ್ನು ಮಾಡಲು ಸಹಕಾರ ನೀಡುವುದಾಗಿ ಖಾಸಗಿ ಕ್ಷೇತ್ರದ ಪ್ರಮುಖರು ಭರವಸೆ ನೀಡಿದ್ದಾರೆ. ಕೊಳಚೆ ನೀರು ಶುದ್ಧೀಕರಣಕ್ಕೆ ಹೆಚ್ಚಿನ ಜನರು ಆಸಕ್ತಿ ತೋರಿದ್ದಾರೆ. ಹಣವನ್ನೂ ವ್ಯಯಿಸುವುದಾಗಿ ಹೇಳಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿವಿಧ ಕ್ಷೇತ್ರಗಳ ಪ್ರಮುಖರ ಜತೆ ಶನಿವಾರ ಸಭೆ ನಡೆಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಇದ್ದರು – ಪ್ರಜಾವಾಣಿ ಚಿತ್ರ

ಮುಂದಿನ ವಾರ ಮತ್ತೊಂದು ಸುತ್ತಿನ ಸಭೆ ನಡೆಸಲಾಗುವುದು. ಆಗಲೂ ವಿವಿಧ ಕ್ಷೇತ್ರಗಳ ಪ್ರಮುಖರ ಅಭಿಪ್ರಾಯ ಆಲಿಸಲಾಗುವುದು. ವೆಬ್‌ಸೈಟ್ ತೆರೆದು ಸಾರ್ಜನಿಕರ ಅಭಿಪ್ರಾಯಗಳನ್ನೂ ಸಂಗ್ರಹಿಸಲಾಗುವುದು. ಆ ಬಳಿಕ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಪೂರಕವಾದ ಮಹಾ ಯೋಜನೆ ರೂಪಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದರು.

'ಬೆಂಗಳೂರು ಅಭಿವೃದ್ಧಿಗೆ ಕಾರ್ಯಪಡೆ ರಚನೆ ಬಗ್ಗೆಯೂ ಕೆಲವರು ಸಲಹೆ ನೀಡಿದ್ದಾರೆ. ನಾನು ಎಲ್ಲರ ಸಲಹೆ ಆಲಿಸುತ್ತೇನೆ. ಸಾರ್ವಜನಿಕರ ಅಭಿಪ್ರಾಯವನ್ನೂ ಆಲಿಸುತ್ತೇನೆ. ನಂತರದಲ್ಲಿ ತೀರ್ಮಾನಕ್ಕೆ ಬರಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಸಂಶದ ಡಿ.ವಿ. ಸದಾನಂದಗೌಡ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಉದ್ಯಮಿಗಳಾದ ಆರ್. ಕೆ. ಮಿಶ್ರಾ, ಇರ್ಫಾನ್, ಕಿರಣ್ ಮಜುಂದಾರ್ ಷಾ, ಪ್ರಶಾಂತ್, ಗೀತಾಂಜಲಿ ಕಿರ್ಲೋಸ್ಕರ್, ಮಧುಕರ ಕಾಮತ್, ಎಂ.ಆರ್. ಜೈಶಂಕರ್, ರಾಜಾ ಭಾಗ್ಮನೆ, ಉಲ್ಲಾಸ ಕಾಮತ್, ಅರುಣ್ ಚಿಟ್ಟಿಲಾಪಿಲ್ಲ, ಕ್ರಿಕೆಟಿಗ ಬ್ರಿಜೇಶ್ ಪಟೇಲ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಬಿ.ಎಸ್. ಪಾಟೀಲ್, ಕೆ. ಜೈರಾಜ್, ಸಿದ್ದಯ್ಯ ಸಭೆಯಲ್ಲಿದ್ದರು

ಕೆ.ಎನ್. ಗುರುಸ್ವಾಮಿ ನೆನಪಿನ ಸಂಜೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ದಿನಪತ್ರಿಕೆಗಳ ಸ್ಥಾಪಕರಾದ ಕೆ.ಎನ್. ಗುರುಸ್ವಾಮಿ ಅವರ ನೆನಪಿನ ಸಂಜೆ ಕಾರ್ಯಕ್ರಮವು ನಗರದ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಇದೇ 19ರಂದು (ಸೋಮವಾರ) ಸಂಜೆ 6.30ಕ್ಕೆ ನಡೆಯಲಿದೆ. ಗುರುಸ್ವಾಮಿ ಅವರ ಮೊಮ್ಮಗ ಕೆ.ಎನ್. ಹರಿಕುಮಾರ್ ಅವರು ಬರೆದಿರುವ 'ಗ್ರ್ಯಾಂಡ್‌ಫಾದರ್ ಅಂಡ್ ಗ್ರ್ಯಾಂಡ್‌ಮದರ್: ಎ ಮೆಮೊರ್' ಕೃತಿಯನ್ನೂ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಹಿರಿಯ ಪತ್ರಕರ್ತ ಜಿ.ಎನ್. ರಂಗನಾಥರಾವ್, ಪತ್ರಕರ್ತ, ವಕೀಲ ಪಿ.ಜಿ. ಬೆಳ್ಳಿಯಪ್ಪ, ಲೇಖಕಿ, ಇತಿಹಾಸ ತಜ್ಞೆ ಜಾನಕಿ ನಯರ್ ಮಾತನಾಡಲಿದ್ದಾರೆ.

ರಾವ್ ಬಹದ್ದೂರ್ ಕಣೇಕಲ್ ನೆಟ್ಟಕಲ್ಲಪ್ಪ ಅವರ ಕಿರಿಯ ಪುತ್ರರಾಗಿದ್ದ ಗುರುಸ್ವಾಮಿ ಅವರು (1901–1990), ಇಡೀ ನಾಡು ಹೆಮ್ಮೆ ಪಡುವಂತಹ ಮಾಧ್ಯಮ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು. ಅವರು ಸ್ಥಾಪಿಸಿದ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಎರಡೂ ಪತ್ರಿಕೆಗಳು ಈಗ 75ರ ಸಂಭ್ರಮದಲ್ಲಿವೆ.



ಪತ್ರಿಕೋದ್ಯಮಿಯಾಗಿಯೇ ಗುರುತಿಸಿಕೊಂಡ ಗುರುಸ್ವಾಮಿ ಅವರು, ಈಡಿಗ ಸಮುದಾಯದ ಸಮಾಜೋ–ಆರ್ಥಿಕ ಮತ್ತು ರಾಜಕೀಯ ಉನ್ನತಿಗಾಗಿ ಆ ಸಮುದಾಯವನ್ನು ಸಂಘಟಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದರು. ಸದಾ ಧರಿಸುತ್ತಿದ್ದ ಬಿಳಿಬಣ್ಣದ ಕಚ್ಚೆ ಪಂಚೆ ಮತ್ತು ಕ್ಲೋಸ್ಡ್ ಕಾಲರ್ ಕೋಟ್, ತಲೆಯ ಮೇಲೆ ಸುತ್ತಿಕೊಳ್ಳುತ್ತಿದ್ದ ಬಿಳಿಬಣ್ಣದ ದೊಡ್ಡ ಗಾತ್ರದ ರುಮಾಲು, ಕಪ್ಪುಬಣ್ಣದ ಮೊಂಟ್‌ಬ್ಲಾಂಕ್ ಪೆನ್ನು ಮತ್ತು ಕಪ್ಪುಬಣ್ಣದ ಉದ್ದನೆಯ ಕ್ಯಾಡಿಲಾಕ್ ಕಾರು- ಅವರ ಹೆಗ್ಗುರುತುಗಳೇ ಆಗಿದ್ದವು. ಒಂದು ವೈವಿಧ್ಯಮಯ ವೈಭವದ ಹಾಗೂ ಸಾರ್ಥಕ ಜೀವನವನ್ನು ಬದುಕಿದರು ಅವರು. ಎಲ್ಲ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ ಬೆಳೆದ ವ್ಯಕ್ತಿತ್ವ ಅವರದ್ದಾಗಿತ್ತು.

'ರಾಜಧಾನಿಯಲ್ಲಿ ಕನ್ನಡಕ್ಕೆ ಅಪಾಯ'

ಗೃಹ ಸಚಿವ ಜಿ. ಪರಮೇಶ್ವರ ಕಳವಳ • 'ಚಾವುಂಡರಾಯ ದತ್ತಿ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷೆ ಈಗ ಅಪಾಯಕ್ಕೆ ಸಿಲುಕಿದೆ. ಬೆಂಗಳೂರಿನಲ್ಲಿ ಶೇ 60ರಷ್ಟು ಮಂದಿಗೆ ಕನ್ನಡ ಭಾಷೆ ಮಾತನಾಡಲು ಬರುವುದೇ ಇಲ್ಲ. ಇನ್ನುಳಿದವರು ಅನ್ಯ ಭಾಷೆ ಮಿಶ್ರಿತ ಕನ್ನಡ ಮಾತನಾಡುತ್ತಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಕಳವಳ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ಕೆ.ಇ.ರಾಧಾಕೃಷ್ಣ ಅವರಿಗೆ 'ಚಾವುಂಡರಾಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಿದರು. ಈ ಪ್ರಶಸ್ತಿಯು ₹ 30 ಸಾವಿರ ನಗದು ಒಳಗೊಂಡಿದೆ. 'ರಾಜಧಾನಿಯಲ್ಲಿ ಕನ್ನಡ ಉಳಿಸುವ ಜವಾಬ್ದಾರಿ ಕನ್ನಡ ಸಾಹಿತ್ಯ ಪರಿಷತ್ತಿನ ಮೇಲಿದೆ' ಎಂದು ಹೇಳಿದರು.

'ಧರ್ಮದ ಕುರಿತ ಅಧ್ಯಯನ ನಮ್ಮಲ್ಲಿ ಕೇವಲ ಅಕಾಡಮಿಕ್ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು ಅದರ ಅಂತಃಸತ್ವ ಹಿಡಿಯುವ ಕೆಲಸವಾಗುತ್ತಿಲ್ಲ. ಜೈನ ಧರ್ಮ ನಮ್ಮ ದೇಶದಲ್ಲಿ ಹುಟ್ಟಿಕೊಂಡು ಪ್ರಪಂಚಕ್ಕೆ ಶಾಂತಿಯ ಸಂದೇಶವನ್ನು ನೀಡುತ್ತ ಬಂದಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡ ಸಾರಸ್ವತ ಲೋಕಕ್ಕೆ ಜೈನರ ಕೊಡುಗೆ ಅಪಾರ. ಪರಿಷತ್ತಿನ ಮುಂಭಾಗದಲ್ಲಿ ಇರುವ ಪಂಪ ಮಹಾಕವಿ ರಸ್ತೆಯಲ್ಲಿ ಪಂಪನ ಪುತ್ಥಳಿಯನ್ನು ಸ್ಥಾಪಿಸಿ, 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ವಿಶ್ವ ಮಾನವ ಸಂದೇಶ ಹಾಕಿಸಲಾಗುವುದು. ಈ ಕಾರ್ಯ ಪ್ರಗತಿಯಲ್ಲಿದೆ' ಎಂದರು.

ಪ್ರಶಸ್ತಿ ಪುರಸ್ಕೃತ ಕೆ.ಇ.ರಾಧಾಕೃಷ್ಣ, 'ಭಾಷೆಗೊಂದು ಮನೋಧರ್ಮವಿರುತ್ತದೆ. ಆ ಮನೋಧರ್ಮದ ಮೂಲಕವೇ ಜ್ಞಾನದ ಬೆಳವಣಿಗೆಯಾಗುತ್ತದೆ. ಜ್ಞಾನಕ್ಕೂ ಜೀವನಕ್ಕೂ ಅವಿನಾಭಾವ ಪವಿತ್ರ ಸಂಬಂಧವಿದೆ' ಎಂದರು.

ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ. ಅರುಣ್, 'ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ ಅರ್ಥಪೂರ್ಣ. ಪಂಪ, ರನ್ನನ ಕಾಲವನ್ನು ನಮ್ಮ ನಾಡಿನ ಸಾಹಿತ್ಯದ ಸುವರ್ಣಯುಗ ಎಂದು ಕರೆಯುತ್ತಿದ್ದರು. ಪ್ರಪಂಚಕ್ಕೆ ಜೈನ ಮತವು ಏಕರೂಪತೆಯ ನಡತೆಯನ್ನು ತೋರಿಸಿಕೊಟ್ಟಿದೆ. ಆದರೆ, ನಮ್ಮ ಪಠ್ಯದಲ್ಲಿ ಮಕ್ಕಳಿಗೆ ಇಂಥಹ ಮಹತ್ವದ ಸಂಗತಿಗಳು ಇಲ್ಲದಿರುವುದು ವಿಷಾದನೀಯ' ಎಂದು ಬೇಸರ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಕೆ.ಇ. ರಾಧಾಕೃಷ್ಣ ಅವರಿಗೆ 'ಚಾವುಂಡರಾಯ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಜಿ. ಪರಮೇಶ್ವರ, ಮಹೇಶ ಜೋಶಿ, ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜ್ ಮತ್ತು ನ್ಯಾ.ಎಂ.ಐ. ಅರುಣ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರಣಾಳಿಕೆ ಜಾರಿ ಕಷ್ಟವಾಗಿದೆ. ಆದರೆ, ಬಸವಣ್ಣನವರ ಮಾತಿನಂತೆ ನಾವು ನುಡಿದಂತೆ ನಡೆಯುವವರು. ಕಷ್ಟವೆಂದು ಹೆದರಿ ಓಡಿ ಹೋಗುವುದಿಲ್ಲ

ಜಿ. ಪರಮೇಶ್ವರ, ಗೃಹ ಸಚಿವ

ಸಾಂಸ್ಕೃತಿಕ ನೀತಿಯ ಬಗ್ಗೆ ಈಗ ಚರ್ಚೆ ಪ್ರಾರಂಭವಾಗಿದೆ. ಬಜೆಟ್ ಮಂಡನೆಯ ಬಳಿಕ ಸೂಕ್ತ ರೀತಿಯಲ್ಲಿ ಸಮಾಲೋಚನೆ ನಡೆಸಿ, ಮುಂದಿನ ಹೆಜ್ಜೆ ಇರಿಸಲಾಗುವುದು

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ಸಂಕ್ಷಿಪ್ತ ಸುದ್ದಿ

ಶಿಕ್ಷಕರ ವೇತನ ತಾರತಮ್ಯ ನಿವಾರಣೆಗೆ ಆದೇಶ

ಬೆಂಗಳೂರು: ತರಬೇತಿ ಪಡೆಯದೇ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ನೇಮಕವಾಗಿದ್ದ ಶಿಕ್ಷಕರು ಕನಿಷ್ಠ 15 ವರ್ಷ ಸೇವೆ ಪೂರ್ಣಗೊಳಿಸಿದ್ದರೆ, ಅವರು ತರಬೇತಿ ಹೊಂದಿದ ಶಿಕ್ಷಕರ ವೇತನ ಶ್ರೇಣಿಗೆ ಅರ್ಹರು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ. 1987ಕ್ಕೂ ಹಿಂದೆ ಶಿಕ್ಷಕರ ತರಬೇತಿ ಪಡೆಯದ ಹಲವರನ್ನು ಶಿಕ್ಷಕರಾಗಿ ನೇಮಿಸಿಕೊಳ್ಳಲಾಗಿತ್ತು. ಅವರಿಗೆ ನಿಗದಿಯಾಗಿದ್ದ ವೇತನ ಶ್ರೇಣಿಗೂ ನಂತರ ನೇಮಕಗೊಂಡಿದ್ದ ಟಿಸಿಎಚ್, ಡಿ.ಇಡಿ ತರಬೇತಿ ಪಡೆದ ಶಿಕ್ಷಕರಿಗೂ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿತ್ತು. ಈ ತಾರತಮ್ಯದ ವಿರುದ್ಧ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್ ಸಮಾನ ವೇತನಕ್ಕೆ ಪರಿಗಣಿಸುವಂತೆ ನಿರ್ದೇಶನ ನೀಡಿತ್ತು.

ಇಂದು ವಿವಿಧೆಡೆ ಮಳೆ

ಬೆಂಗಳೂರು: ಕರಾವಳಿಯ ಹಲವು ಕಡೆ ಒಳನಾಡಿನ ಕೆಲವೆಡೆ ಭಾನುವಾರವೂ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ರಾಜ್ಯದಾದ್ಯಂತ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಸಾಧ್ಯತೆಯಿದ್ದು, ಗಾಳಿಯ ವೇಗವು ಗಂಟೆಗೆ 30ರಿಂದ 40 ಕಿ.ಮೀ. ತಲುಪುವ ಸಾಧ್ಯತೆಯಿದೆ. ಕರಾವಳಿಯಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40–45 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಹೇಳಿದೆ.

ಊರನಾಡ ಹಬ್ಬ 20ರಿಂದ

ಬೆಂಗಳೂರು: ನಗರದ ಕೋಟೆ 'ಇ' ಬೀದಿಯ ಕೋಟೆ ಮಾರಮ್ಮ ದೇವಿಯ ಊರನಾಡ ಹಬ್ಬ ಮತ್ತು ರಜತ ಮಹೋತ್ಸವವು ಇದೇ 20ರಿಂದ 24ರವರೆಗೆ ನಡೆಯಲಿದೆ. 20ರಂದು ಸಂಜೆ 4ಕ್ಕೆ ಕೋಟೆ ರಾಜಬೀದಿಗಳಲ್ಲಿ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. 21ರಂದು ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಂಗೋಲಿ ಸ್ಪರ್ಧೆ, 23ರಂದು ಮಾರಮ್ಮ ದೇವಿಗೆ ಲಕ್ಷ್ಮಿ ಅಲಂಕಾರ, ವಾದ್ಯಗೋಷ್ಠಿ ಮತ್ತು 24ಕ್ಕೆ ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ ಕೋಟೆ ಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ ಪ್ರಕಟಣೆ ತಿಳಿಸಿದೆ.

ಗೃಹ ಸಚಿವ ಡಾ. ಜಿ. ಪರಮೇಶ್ವರ ನಿರ್ದೇಶನ

ದಟ್ಟಣೆ ನಿಯಂತ್ರಿಸಲು ಸೌಕರ್ಯ; ಪ್ರಸ್ತಾವಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಿದ್ದು, ನಿಧಾನಗತಿಯಲ್ಲಿ ಸಂಚರಿಸುವ ಸ್ಥಿತಿ ಇದೆ. ಪ್ರತಿ ವಾಹನದ ವೇಗ ಕನಿಷ್ಠ 30 ಕಿ.ಮೀ ಇರುವಂತೆ ನೋಡಿಕೊಳ್ಳುವತ್ತ ಗಮನ ಹರಿಸಬೇಕು. ಇದಕ್ಕೆ ಅಗತ್ಯವಿರುವ ಸೌಕರ್ಯಗಳ ಅಭಿವೃದ್ಧಿಗಾಗಿ ಪ್ರಸ್ತಾವ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿ' ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಪೊಲೀಸ್ ಅಧಿಕಾರಿಗಳಿಗೆ ಹೇಳಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಗೆ ಭೇಟಿ ನೀಡಿದ್ದ ಪರಮೇಶ್ವರ, ಕಮಾಂಡೊ ಕೇಂದ್ರದಲ್ಲಿ 'ನಮ್ಮ 112' ಕಾರ್ಯವೈಖರಿ ಪರಿಶೀಲಿಸಿದರು. ಹೊಯ್ಸಳ ವಾಹನ ಸಿಬ್ಬಂದಿಗೆ ಬಾಡಿವೋರ್ನ್ ಕ್ಯಾಮೆರಾ ಹಾಗೂ ಬೆರಳಚ್ಚು ಗುರುತು ಪತ್ತೆ ಯಂತ್ರಗಳನ್ನು ನೀಡಿದರು. ಅಧಿಕಾರಿಗಳ ಸಭೆ ನಡೆಸಿದ ಅವರು, 'ಪೊಲೀಸರು ಎಂದರೆ ಜನರಲ್ಲಿ ಭರವಸೆ ಮೂಡಬೇಕು. ಠಾಣೆಗಳಲ್ಲಿ ಜನಸ್ನೇಹಿ ವ್ಯವಸ್ಥೆ ರೂಪಿಸಿ, ದೂರುದಾರರ ಜೊತೆ ಸೌಜನ್ಯದಿಂದ ವರ್ತಿಸಬೇಕು. ಯಾರಾದರೂ ಸಿಬ್ಬಂದಿ, ಕಾನೂನು ಮೀರಿ ನಡೆದುಕೊಂಡರೆ ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದರು.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟವನ್ನು ಬುಡಸಮೇತ ನಿರ್ಮೂಲನೆ ಮಾಡಬೇಕು. ಕೋಮು ಗಲಭೆಗಳಿಗೆ ಅವಕಾಶ ನೀಡದಂತೆ ಶಾಂತಿ–ಸೌಹಾರ್ದತೆ ಕಾಪಾಡಬೇಕು. ರೌಡಿ ಚಟುವಟಿಕೆಗಳನ್ನು ಹತ್ತಿಕ್ಕಬೇಕು' ಎಂದು ಸಚಿವ ಪರಮೇಶ್ವರ್ ಅಧಿಕಾರಿಗಳಿಗೆ ಹೇಳಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಪೊಲೀಸ್ ಕಮಿಷನರ್ ಬಿ. ದಯಾನಂದ್ ಇದ್ದರು.


ನಗರದ ಹಲವು ಸ್ಥಳಗಳಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪೊಲೀಸ್ ಕಮಿಷನರ್ ಕಚೇರಿಯ ಕಮಾಂಡೊ ಕೇಂದ್ರದಲ್ಲಿ ಡಾ. ಜಿ. ಪರಮೇಶ್ವರ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ನಿರ್ವಹಣೆಗೆ ಡ್ರೋನ್

ನಗರದ ಸಂಚಾರ ದಟ್ಟಣೆ ನಿಯಂತ್ರಿಸುವಂತೆ ಗೃಹ ಸಚಿವ ಜಿ. ಪರಮೇಶ್ವರ ಸೂಚನೆ ನೀಡಿದ್ದು, ಇದರ ಬೆನ್ನಲ್ಲೇ ಡ್ರೋನ್ ಕ್ಯಾಮೆರಾ ಬಳಸಿ ದಟ್ಟಣೆ ನಿಯಂತ್ರಿಸಲು ಪೊಲೀಸರು ಮುಂದಾಗಿದ್ದಾರೆ.

'ವಿಪರೀತ ದಟ್ಟಣೆ ಇರುವ ವೃತ್ತಗಳು ಹಾಗೂ ರಸ್ತೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಅಲ್ಲಲ್ಲ ಡ್ರೋನ್ ಕ್ಯಾಮೆರಾ ಹಾರಿಸಿ, ದಟ್ಟಣೆ ಬಗ್ಗೆ ಮಾಹಿತಿ ಕಲೆಹಾಕಲಾಗುವುದು. ಸ್ಥಳದಲ್ಲಿರುವ ಸಿಬ್ಬಂದಿಯನ್ನು ಬಳಸಿಕೊಂಡು ದಟ್ಟಣೆ ನಿಯಂತ್ರಿಸಲಾಗುವುದು' ಎಂದು ಕಮಿಷನರ್ ಬಿ. ದಯಾಂದ್ ಹೇಳಿದ್ದಾರೆ.

'ಈಗಾಗಲೇ ನಾಲ್ಕು ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ. ಅವುಗಳ ನಿರ್ವಹಣೆ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ' ಎಂದಿದ್ದಾರೆ.

ತಡೆಯಾಜ್ಞೆ ಮಾಹಿತಿ ಇಲ್ಲದೆಯೇ ಸ್ಥಳಕ್ಕೆ ತೆರಳಿದ್ದ ಎಂಜಿನಿಯರ್‌ಗಳು

ನಡೆಯದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ವ್ಯಾಪ್ತಿಯ ಮುನೇಕೊಳಲು ಗ್ರಾಮದ ಸ್ಪೈಸ್ ಗಾರ್ಡನ್ ಬಳಿ ರಾಜಕಾಲುವೆಗಳನ್ನು ಒತ್ತುವರಿ ಮಾಡಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸಲು ತೆರಳಿದ್ದ ಬಿಬಿಎಂಪಿ ಎಂಜಿನಿಯರ್‌ಗಳು ತಡೆಯಾಜ್ಞೆಯ ನೋಟಿಸ್ ನೋಡಿ ಕಾರ್ಯಾಚರಣೆ ನಿಲ್ಲಿಸಬೇಕಾಯಿತು. ದೊಡ್ಡ ಕಟ್ಟಡಗಳನ್ನು ತೆರವು ಮಾಡಲಾಗದೇ ಕಾರ್ಮಿಕರ ಶೆಡ್‌ಗಳನ್ನು, ರಸ್ತೆಗಳನ್ನು ಒಡೆದು ಹಾಕಿ ವಾಪಸ್ ತೆರಳಿದರು.


ಪೊಲೀಸರ ರಕ್ಷಣೆಯಲ್ಲಿ ಒತ್ತುವರಿ ತೆರವಿಗೆ ಬಿಬಿಎಂಪಿ ಮತ್ತು ರಾಜಕಾಲುವೆ ಅಧಿಕಾರಿಗಳು, ಎಂಜಿನಿಯರ್‌ಗಳು, ಭೂಮಾಪಕರು ಹಿಟಾಚಿಯೊಂದಿಗೆ ಸ್ಥಳಕ್ಕೆ ಬಂದಿದ್ದರು. ಒತ್ತುವರಿಗಳ ತೆರವುಗೊಳಿಸುವ ಕಾರ್ಯ ಆರಂಭಿಸಲಾಗುವುದು. ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಿಕೊಂಡರು. ಆಗ 2022ರ ಅಕ್ಟೋಬರ್‌ನಲ್ಲೇ ಹೈಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಕಟ್ಟಡ ಮಾಲೀಕರ ಪರವಾಗಿ ವಕೀಲರು ತಡೆಯಾಜ್ಞೆಯ ಪ್ರತಿಯನ್ನು ನೀಡಿದರು.

ಒತ್ತುವರಿಯಾಗಿರುವ 22 ಸ್ಥಳ ಗುರುತು ಮಾಡಲಾಗಿತ್ತು. ಈ ತಡೆಯಾಜ್ಞೆ ಯಿಂದಾಗಿ ತೆರವು ಕಾರ್ಯ ಸ್ಥಗಿತಗೊಂಡಿತು. ರಾಜಕಾಲುವೆ ಒತ್ತುವರಿ ಪ್ರದೇಶದಲ್ಲಿದ್ದ ಕಾರ್ಮಿಕರು ಹಾಕಿದ್ದ ತಾತ್ಕಾಲಿಕ ಶೆಡ್ ತೆರವುಗೊಳಿಸಿದರು. ಒತ್ತುವರಿ ಸ್ಥಳದ ಲ್ಲಿದ್ದ ಕಾಂಕ್ರೀಟ್ ರಸ್ತೆ ಒಡೆದು ಹಾಕಿದರು. ಮುನೇಶ್ವರ ದೇವಸ್ಥಾನದ ಬಳಿ 200 ಮೀಟರ್ ಉದ್ದದ ಕಾಂಪೌಂಡ್ ಗೋಡೆ ತೆರವುಗೊಳಿಸಿದರು.

ಮಾಹಿತಿ ನೀಡದ ತಹಶೀಲ್ದಾರ್: ಒತ್ತುವರಿ ಬಗ್ಗೆ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ನೀಡಿದ್ದ ನೋಟೀಸ್‌ಗೆ ಕಟ್ಟಡ ಮಾಲೀಕರು ತಡೆಯಾಜ್ಞೆ ತಂದಿದ್ದರು. ಈ ಮಾಹಿತಿಯನ್ನು ಬಿಬಿಎಂಪಿ ಗಮನಕ್ಕೆ ತಹಶೀಲ್ದಾರ್ ತಂದಿರಲಿಲ್ಲ. ಜೂನ್ 15ರಂದು ಸ್ಥಳೀಯ ಶಾಸಕರ ನೇತೃತ್ವದಲ್ಲಿ ಸಭೆ ನಡೆದಿತ್ತು. ಒತ್ತುವರಿ ತೆರವು ಕಾರ್ಯಾಚರಣೆ ನಡೆಸುವ ಬಗ್ಗೆ ಈ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಈ ಸಭೆಯಲ್ಲಿ ಭಾಗಿಯಾಗಿದ್ದ ತಹಶೀಲ್ದಾರ್ ಅಜಿತ್ ಕುಮಾರ್ ರೈ ಅವರು ತಡೆಯಾಜ್ಞೆ ಬಗ್ಗೆ ಯಾವುದೇ ಮಾಹಿತಿ ನೀಡಿರಲಿಲ್ಲ.

ಈ ಬಗ್ಗೆ ಮಾಹಿತಿಗಾಗಿ ತಹಶೀಲ್ದಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

‘ಮುನೇಕೊಳಲು ಪ್ರದೇಶದಲ್ಲಿ ಒತ್ತುವರಿ ತೆರವು ಮಾಡಲು ವಾರದಿಂದ ಸಿದ್ಧತೆ ಮಾಡಿಕೊಂಡು ಶನಿವಾರ ಬಂದಿದ್ದೆವು. ತಡೆಯಾಜ್ಞೆ ಇರುವುದು ಇಲ್ಲಿ ಬಂದ ಮೇಲೆ ಗೊತ್ತಾಗಿದೆ. ತಡೆಯಾಜ್ಞೆಯ ಬಗ್ಗೆ ಪರಿಶೀಲಿಸಲಾಗುವುದು. ತಡೆಯಾಜ್ಞೆಯನ್ನು ತೆರವುಗೊಳಿಸಿದ ಬಳಿಕ ಕಾರ್ಯಾಚರಣೆ ಮುಂದುವರಿಸುತ್ತೇವೆ’ ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಲೋಕೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.



ಮಹದೇವಪುರ ವ್ಯಾಪ್ತಿಯ ಮುನೇಕೊಳಲು ಗ್ರಾಮದಲ್ಲಿ ರಾಜಕಾಲುವೆ ಒತ್ತುವರಿ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಕಾರ್ಮಿಕರ ಶೆಡ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಶನಿವಾರ ತೆರವುಗೊಳಿಸಿದರು —ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

19ರಂದು ಪಣತ್ತೂರು, ದೊಡ್ಡಾನೆಕುಂದಿಯಲ್ಲಿ ಒತ್ತುವರಿ ತೆರವು

ಮಹದೇವಪುರ ವಲಯ ಪಣತ್ತೂರು ಹಾಗೂ ದೊಡ್ಡಾನೆಕುಂದಿ ವ್ಯಾಪ್ತಿಯಲ್ಲಿ ಜೂನ್ 19ರಂದು ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುವುದು. ಮುನ್ನೇನಕೊಳಲಿನ ಸ್ಪೈಸ್ ಗಾರ್ಡನ್ ಪ್ರದೇಶದ ಸರ್ವೆ ನಂಬರ್ 34, 19/3 ಮತ್ತು 17ಕ್ಕೆ ತಡೆಯಾಜ್ಞೆ ತಂದಿದ್ದಾರೆ. ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಮುಂದುವರಿಸುತ್ತೇವೆ ಎಂದು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ತಿಳಿಸಿದ್ದಾರೆ.

ಶಿಕ್ಷಣ ಸಚಿವರೊಂದಿಗೆ ಕೆಎಸ್‌ಎಂಎಫ್ ಸಭೆ

ಬೆಂಗಳೂರು: ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್. ಮಧು ಬಂಗಾರಪ್ಪ ಅವರು ಶನಿವಾರ ಕರ್ನಾಟಕ ರಾಜ್ಯ ಬಿಸಿಯೂಟ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ (ಕೆಎಸ್‌ಎಂಎಫ್) ಸದಸ್ಯರೊಂದಿಗೆ ಸಭೆ ನಡೆಸಿದರು.

ಕೆಎಸ್‌ಎಂಎಫ್ ಒಕ್ಕೂಟದ ಅಧ್ಯಕ್ಷರಾದ ಬೆಳಗಾವಿ ಜಿಲ್ಲೆಯ ಹುಕ್ಕೇರಿಯ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ‘ರಾಜ್ಯದಲ್ಲಿ 51 ಸರ್ಕಾರೇತರ ಸಂಸ್ಥೆಗಳು ಅಕ್ಷರ ದಾಸೋಹ ಯೋಜನೆಯನ್ನು 19 ವರ್ಷಗಳಿಂದ ನಿರ್ವಹಿಸುತ್ತಾ ಬಂದಿವೆ. ಯೋಜನೆ ಯಶಸ್ವಿಗೆ ಸಚಿವರು, ಸರ್ಕಾರದ ಸಹಕಾರ ಅಗತ್ಯ’ ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ, ‘ಬದ್ಧತೆ, ಸಿದ್ಧತೆ, ಜಾಗೃತಿ ಒಕ್ಕೂಟದ ಉದ್ದೇಶವಾಗಿದೆ. ಇದೇ ನಿಟ್ಟಿನಲ್ಲಿ ಬದ್ಧತೆಯಿಂದ ಕಾರ್ಯ ನಿರ್ವಹಿಸಿ ಶುದ್ಧ ಆಹಾರ ಸಿದ್ಧಗೊಳಿಸಿ ಜಾಗೃತಿಯಿಂದ ಮುಟ್ಟಿಸುವಲ್ಲಿ ಸರ್ಕಾರೇತರ ಸಂಸ್ಥೆಗಳು ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿವೆ, ಹೀಗೆ ಮುಂದುವರಿಸಬೇಕು’ ಎಂದರು.

ಅಕ್ಷರ ದಾಸೋಹ ಯೋಜನೆಯ ರಾಜ್ಯ ಜಂಟಿ ನಿರ್ದೇಶಕರಾದ ಅನಿತಾ ನಾಜರೆ, ‘ಸರ್ಕಾರೇತರ ಸಂಸ್ಥೆಗಳು ಒಟ್ಟು 15 ಲಕ್ಷ ಮಕ್ಕಳಿಗೆ ಅಕ್ಷರ ದಾಸೋಹ ಯೋಜನೆಯನ್ನು ತಲುಪಿಸುತ್ತಿವೆ. ಶೀಘ್ರದಲ್ಲೇ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು’ ಎಂದು ತಿಳಿಸಿದರು.

₹ 6.38 ಕೋಟಿ ಮೌಲ್ಯದ ಭೂಮಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ₹ 6.38 ಕೋಟಿ ಮೌಲ್ಯದ 2.37 ಎಕರೆ ಒತ್ತುವರಿಯನ್ನು ಶನಿವಾರ ತೆರವುಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎ.ದಯಾನಂದ ತಿಳಿಸಿದ್ದಾರೆ.

8 ಕೆರೆ ಸೇರಿದಂತೆ ಕುಂಟೆ, ಗೋಮಾಳ, ಸ್ಮಶಾನ, ರಾಜಕಾಲುವೆ ಮತ್ತು ಇತರೆ ಸರ್ಕಾರಿ ಜಮೀನು ಗಳ ಅನಧಿಕೃತ ಒತ್ತುವರಿ ತೆರವುಗೊಳಿಸಲು ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಳ್ಳಿ ಹೋಬಳಿ ಕಣ್ಣೂರು ಗ್ರಾಮದಲ್ಲಿ ₹ 67 ಲಕ್ಷ ಮೌಲ್ಯದ 0.20 ಗುಂಟೆ ಗೋಮಾಳ, ಮಾರಗೊಂಡನಹಳ್ಳಿ ಗ್ರಾಮದ ₹ 60 ಲಕ್ಷ ಮೌಲ್ಯದ 3 ಗುಂಟೆ ಸರ್ಕಾರಿ ಕುಂಟೆ, ಕೆ.ಆರ್ ಪುರಂ ಹೋಬಳಿಯ ಹಗದೂರಿನಲ್ಲಿ ₹ 30 ಲಕ್ಷ ಮೌಲ್ಯದ 0.4 ಗುಂಟೆ ಸರ್ಕಾರಿ ಹುಲ್ಲು ಬನ್ನಿ ಹಾಗೂ ವರ್ತೂರು ಹೋಬಳಿಯ ಕೊಡತಿ ಗ್ರಾಮದ 0.5 ಗುಂಟೆ ಸರ್ಕಾರಿ ಕುಂಟೆಯ ಒತ್ತುವರಿಯನ್ನು ತೆರವು ಗೊಳಿಸಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಪಿಳ್ಳಹಳ್ಳಿ ಗ್ರಾಮದಲ್ಲಿ ₹ 10 ಲಕ್ಷ ಮೌಲ್ಯದ 0.5 ಗುಂಟೆ ಗೋಮಾಳ, ದಾಸನಪುರ ಹೋಬಳಿಯ ತೋಟದ ಗುಡ್ಡದ ಹಳ್ಳಿ ಗ್ರಾಮದಲ್ಲಿ ₹ 2 ಕೋಟಿ ಮೌಲ್ಯದ 0.5 ಗುಂಟೆ ಸರ್ಕಾರಿ ಗೋಮಾಳ, ದಾಸನಪುರ ಹೋಬಳಿಯ ಹುಲ್ಲೇ ಗೌಡನಹಳ್ಳಿ ಗ್ರಾಮದಲ್ಲಿ ₹ 15 ಲಕ್ಷ ಮೌಲ್ಯದ 0.65 ಗುಂಟೆ ವಿಸ್ತೀರ್ಣದ ಸರ್ಕಾರಿ ಕುಂಟೆಯ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ವಾಜರಹಳ್ಳಿ ಗ್ರಾಮದಲ್ಲಿ ₹ 35 ಲಕ್ಷ ಮೌಲ್ಯದ ಭೈಯಪ್ಪನ ಕುಂಟೆಯ 0.2 ವಿಸ್ತೀರ್ಣದ ಸರ್ಕಾರಿ ಜಮೀನು, ಬೇಗೂರು ಹೋಬಳಿಯ ಮೈಲಸಂದ್ರ ಗ್ರಾಮದಲ್ಲಿ ₹ 42 ಲಕ್ಷ ಮೌಲ್ಯದ 0.6 ವಿಸ್ತೀರ್ಣದ ಕೆರೆ, ಕೆಂಗೇರಿ ಹೋಬಳಿಯ ತಗಚಗುಪ್ಪೆ ಗ್ರಾಮದ ₹ 50 ಲಕ್ಷ ಮೌಲ್ಯದ 0.18 ಗುಂಟೆ ಸರ್ಕಾರಿ ಕುಂಟೆ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ.

ಆನೇಕಲ್ ತಾಲೂಕಿನ ಕಸಬಾ ಹೋಬಳಿಯ ಸಮಂದೂರು ಗ್ರಾಮದಲ್ಲಿ ₹ 6 ಲಕ್ಷ, ಮೌಲ್ಯದ 0.2 ಸರ್ಕಾರಿ ಗುಂಟೆ, ಜಿಗಣಿ ಹೋಬಳಿಯ ಹೆನ್ನಾಗರ ಗ್ರಾಮದಲ್ಲಿ ₹ 20 ಲಕ್ಷ ಮೌಲ್ಯದ 0.2 ಗುಂಟೆ ರಾಜ ಕಾಲುವೆ, ಬನ್ನೇರುಘಟ್ಟ ಗ್ರಾಮದಲ್ಲಿ ₹ 13 ಲಕ್ಷ ಮೌಲ್ಯದ 0.05 ಗುಂಟೆ ರಾಜ ಕಾಲುವೆ ಹಾಗೂ ಸರ್ಜಾಪುರ ಹೋಬಳಿಯ ನೆಕ್ಕುಂದಿ ದೊಮ್ಮಸಂದ್ರ ಗ್ರಾಮದಲ್ಲಿ ₹ 60 ಲಕ್ಷ ಮೌಲ್ಯದ 0.30 ಗುಂಟೆ ಕುಂಟೆ ಕೆರೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜುಲೈನಲ್ಲಿ ವೈಟ್‌ಫೀಲ್ಡ್‌ಗೆ ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ– ಕೆ.ಆರ್.ಪುರ ನಡುವೆ ನಡೆಯುತ್ತಿದ್ದ ಮೆಟ್ರೊ ಸಿವಿಲ್ ಕಾಮಗಾರಿ ಮುಗಿದಿದೆ. ಟ್ರ್ಯಾಕ್ ಸಿಗ್ನಲ್ ಸಹಿತ ಕೆಲವು ತಾಂತ್ರಿಕ ಕೆಲಸ ಮುಗಿದರೆ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ನೇರ ಸಂಚರಿಸಲಿದೆ. ಜುಲೈ 15ರ ಒಳಗೆ ಎಲ್ಲ ಕೆಲಸ ಮುಗಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ವೈಟ್‌ಫೀಲ್ಡ್ ತನಕ ಮೆಟ್ರೊ ರೈಲು ಈಗಲೂ ಸಂಚಾರ ಇದೆ. ಆದರೆ, ಬೈಯಪ್ಪನಹಳ್ಳಿಯಿಂದ ಕೆ.ಆರ್.ಪುರ ನಡುವೆ ಎರಡು ಕಿ.ಮೀ ಸಂಪರ್ಕ ಇರಲಿಲ್ಲ. ಪ್ರಯಾಣಿಕರು ಬೈಯಪ್ಪನಹಳ್ಳಿಯಲ್ಲಿ ಇಳಿದು ಬಸ್‌ನಲ್ಲಿ ಎರಡು ಕಿ.ಮೀ ಹೋಗಿ ಮತ್ತೆ ಮೆಟ್ರೊಗೆ ಹೋಗಬೇಕಿತ್ತು. ಆ ಕಡೆಯಿಂದ ಬರುವವರು ಕೆ.ಆರ್. ಪುರದಿಂದ ಬೈಯಪನಹಳ್ಳಿವರೆಗೆ ಬಸ್‌ನಲ್ಲಿ ಬರಬೇಕಿತ್ತು. ಈ ತೊಡಕಿನಿಂದಾಗಿ ಜನರು ಮೆಟ್ರೊವನ್ನು ಹೆಚ್ಚು ಅವಲಂಬಿಸಿರಲಿಲ್ಲ. ಹಾಗಾಗಿ ಬಿಎಂಆರ್‌ಸಿಎಲ್ ನಿರೀಕ್ಷೆಯ ಶೇ 20ರಷ್ಟು ಪ್ರಯಾಣಿಕರು ಮಾತ್ರ ಇಲ್ಲಿ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾರೆ. ಈ ಕಾಮಗಾರಿ ಮುಗಿದರೆ ನಿತ್ಯ 1 ಲಕ್ಷ ಜನ ಸಂಚರಿಸಬಹುದು ಎಂದು ಅಂದಾಜಿಸಲಾಗಿದೆ. ನೇರ ಮೆಟ್ರೊ ಆರಂಭ ಗೊಂಡರೆ ಹೊರ ವರ್ತುಲ ರಸ್ತೆಯಲ್ಲಿ ವಾಹನಗಳ ಸಂದಣಿ ಕಡಿಮೆಯಾಗಲಿದೆ. ಜ್ಯೋತಿಪುರ ಸಹಿತ ಮೂರು ಸ್ಟೇಷನ್‌ಗಳು ಈ ಎರಡು ಕಿ.ಮೀ ವ್ಯಾಪ್ತಿಯಲ್ಲಿ ಇರಲಿವೆ. ಪ್ರಯಾಣಿಕರಿಗೆ ಬಸ್ಸಿನಲ್ಲಿ ಹೋಗುವುದಕ್ಕಿಂತ ಕನಿಷ್ಠ ಅರ್ಧ ತಾಸು ಉಳಿಯತಾಯವಾಗಲಿದೆ.

ಗರ್ಡರ್ ಅಳವಡಿಕೆ, ವಯಡಕ್ಟ್ ಕಾಮಗಾರಿ, ಹಳಿ ಅಳವಡಿಕೆ, ಟ್ರ್ಯಾಕ್ ಕವರ್, ಎಲ್ಲವೂ ಪೂರ್ಣಗೊಂಡಿದೆ. ಒಟ್ಟು ಕಾಮಗಾರಿಯಲ್ಲಿ ಶೇ 95ರಷ್ಟು ಪೂರ್ಣಗೊಂಡಿದೆ. 2–3 ವಾರಗಳಲ್ಲಿ ಉಳಿದ ಶೇ 5 ಕಾಮಗಾರಿ ಪೂರ್ಣಗೊಳ್ಳಲಿದೆ. ಜುಲೈ 15ರ ಹೊತ್ತಿಗೆ ಪ್ರಾಯೋಗಿಕವಾಗಿ ಮೆಟ್ರೊ ರೈಲು ಓಡಿಸಬೇಕು. ಬಳಿಕ ಅಧಿಕೃತವಾಗಿ ಚಾಲನೆ ನೀಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಲಂಚ: ಬಿಬಿಎಂಪಿ ಅಧಿಕಾರಿಗೆ ಮೂರು ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಗಳ ಜಂಟಿ ಖಾತೆ ಮಾಡಲು ₹ 20,000 ಲಂಚ ಪಡೆದ ಪ್ರಕರಣದಲ್ಲಿ ಬಿಬಿಎಂಪಿ ಅಂಜನಾಪುರ ಉಪ ವಿಭಾಗದ ಹಿಂದಿನ ಸಹಾಯಕ ಕಂದಾಯ ಅಧಿಕಾರಿ ಕೃಷ್ಣೇಗೌಡ ಅಪರಾಧಿ ಎಂದು ತೀರ್ಮಾನಿಸಿರುವ ವಿಶೇಷ ನ್ಯಾಯಾಲಯ, ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 40,000 ದಂಡ ವಿಧಿಸಿದೆ.

ಕೊತ್ತನೂರು ಮತ್ತು ಹುಳಿಮಾವು ಗ್ರಾಮಗಳಲ್ಲಿ ತಾವು ಹೊಂದಿದ್ದ ಆಸ್ತಿಗಳ ಜಂಟಿ ಖಾತೆ ಮಾಡಿಕೊಡುವಂತೆ ಮಾರುತಿ ಕುಮಾರ್ ಎಂಬುವವರು ಬಿಬಿಎಂಪಿ ಅಂಜನಾಪುರ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಮುಂದಿನ ಪ್ರಕ್ರಿಯೆ ನಡೆಸುವ ಜವಾಬ್ದಾರಿಯನ್ನು ಪ್ರದೀಪ್ ಎಚ್.ಆರ್. ಎಂಬುವವರಿಗೆ ವಹಿಸಿ ಒಪ್ಪಿಗೆ ಪತ್ರವನ್ನೂ ನೀಡಿದ್ದರು.

ಪ್ರದೀಪ್ ಅವರು ಸಹಾಯಕ ಕಂದಾಯ ಅಧಿಕಾರಿಯನ್ನು ಭೇಟಿಮಾಡಿ ಅರ್ಜಿಯ ಕುರಿತು ಚರ್ಚಿಸಿದ್ದರು. ಜಂಟಿ ಖಾತೆ ಮಾಡಿಕೊಡಲು ₹ 20,000 ಲಂಚ ನೀಡುವಂತೆ ಕೃಷ್ಣೇಗೌಡ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಪ್ರದೀಪ್ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು.

2016ರ ಮೇ 11ರಂದು ₹20,000 ಲಂಚ ಪಡೆಯುತ್ತಿದ್ದ ಸಹಾಯಕ ಕಂದಾಯ ಅಧಿಕಾರಿಯನ್ನು ಎಸಿಬಿ ಅಧಿಕಾರಿಗಳು ಬಂಧಿಸಿದ್ದರು. ಬಳಿಕ ತನಿಖೆ ಪೂರ್ಣಗೊಳಿಸಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. 2017ರಿಂದ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ನಡೆಸಿತ್ತು.

ಗುರುವಾರ (ಜೂನ್ 15) ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, ‘ಲಂಚ ಪ್ರಕರಣದಲ್ಲಿ ಕೃಷ್ಣೇಗೌಡ ಅಪರಾಧಿ’ ಎಂದು ಸಾರಿದರು. ಅಪರಾಧಿಗೆ ಮೂರು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ₹ 40,000 ದಂಡ ವಿಧಿಸಿದರು.

ದಂಡ ಪಾವತಿಗೆ ತಪ್ಪಿದರೆ ಒಂದು ತಿಂಗಳ ಸಾಧಾರಣ ಜೈಲು ಶಿಕ್ಷೆಯನ್ನು ಹೆಚ್ಚುವರಿಯಾಗಿ ವಿಧಿಸುವಂತೆ ಆದೇಶಿಸಿದರು.

ನಗರದಲ್ಲಿ ಇಂದು

ಶಸ್ತ್ರಚಿಕಿತ್ಸಕರ ದಿನಾಚರಣೆ ಅಂಗವಾಗಿ ವಾಕಥಾನ್, ಆಯೋಜನೆ: ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು, ಸ್ಥಳ: ಸೇಂಟ್ ಮಾರ್ಥಸ್ ಆಸ್ಪತ್ರೆಯಿಂದ ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 6ರಿಂದ


ಯುವ ಸಂಗೀತೋತ್ಸವ: ಗಾಯನ: ಶ್ರೀಲಕ್ಷ್ಮಿ ಬೆಳ್ಮಣ್ಣು, ತಬಲಾ: ಸುಮಿತ್ ನಾಯಕ, ಹಾರ್ಮೋನಿಯಂ: ತೇಜಸ್ ಕಾಟೋಟಿ, ಗಾಯನ: ನಯನ ಯಾವಗಲ್, ತಬಲಾ: ದತ್ತಾತ್ರೇಯ ಜೋಶಿ, ಹಾರ್ಮೋನಿಯಂ: ಮಧುಸೂದನ ಭಟ್ಟ, ಆಯೋಜನೆ: ಸಪ್ತಕ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10



ಶ್ರೀಲಕ್ಷ್ಮಿ

‘ಚಂಪಾ ಸಿರಿಗನ್ನಡ’ ಪ್ರಶಸ್ತಿ ಪ್ರದಾನ: ಬಸವರಾಜ ಹೊರಟ್ಟಿ, ಪ್ರಶಸ್ತಿ ಪುರಸ್ಕೃತರು: ಕೆ.ಎಸ್. ಭಗವಾನ್, ಅತಿಥಿಗಳು: ಹೇಮಲತಾ ಮಹಿಷಿ, ಸಿ.ಕೆ. ರಾಮೇಗೌಡ, ಶಂಕರ್ ಹೂಗಾರ, ಅಧ್ಯಕ್ಷತೆ: ಧರಣೇಂದ್ರ ಕುರಕುರಿ, ಆಯೋಜನೆ: ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ಕಸಾಪ ಚಾಮರಾಜಪೇಟೆ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅನನ್ಯಾ ಅಂಬರೀಶ್ ಗಿಳಿಯಾರ್, ಅತಿಥಿ: ನಿರುಪಮಾ ರಾಜೇಂದ್ರ, ಆಯೋಜನೆ: ನಾಟ್ಯ ನಿಕೇತನ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಬೆಳಗ್ಗೆ 10.30



ಅನನ್ಯಾ

‘ಸ್ವಾಭಿಮಾನಿ ಕನ್ನಡಿಗರ ಪ್ರಜ್ಞಾ ದಿನ’: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಜ್ಞಾನಪ್ರಕಾಶ್ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಸೇವಾಲಾಲ್ ಸ್ವಾಮೀಜಿ, ಸಿದ್ಧರಾಮಚೈತನ್ಯ ಸ್ವಾಮೀಜಿ, ಅತಿಥಿಗಳು: ವಿ. ಗೋಪಾಲಗೌಡ, ಎಚ್.ಎನ್. ನಾಗಮೋಹನದಾಸ್, ಎಲ್. ಹನುಮಂತಯ್ಯ, ಸಿ.ಎಚ್. ಹನುಮಂತರಾಯ, ಕೆ. ಶರೀಫಾ, ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಜೆ.ಬಿ. ಪಾಟೀಲ, ಆಯೋಜನೆ: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ–ಕರ್ನಾಟಕ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಮೂಲ ಜಾನಪದ ಪರಿಕರಗಳ ಪ್ರದರ್ಶನ ಹಾಗೂ ಜಾನಪದ ಕಲೋತ್ಸವ–2023: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ದಿವ್ಯಕ್ಕ ಮಾತಾಜಿ, ಅಧ್ಯಕ್ಷತೆ: ನಾಗರತ್ನ ಕೆ.ಎಂ. ವೆಂಕಟೇಶ್, ಕುಮಾರ್ ಕೆ.ಎಚ್., ಆಯೋಜನೆ: ಮಲೈಮಹದೇಶ್ವ ಸಾಂಸ್ಕೃತಿಕ ಸೇವಾ ಟ್ರಸ್ಟ್, ಸ್ಥಳ: ಏಕತಾರಿ ರಾಮಯ್ಯ ರಸ್ತೆ, ಸಮುದಾಯ ಭವನ, ಬೆಳಿಗ್ಗೆ 10.30

‘ಎಚ್.ಎಸ್. ಸಚ್ಚಿದಾನಂದಮೂರ್ತಿ, ಎಸ್. ದತ್ತಾತ್ರಿ’ಗೆ ಅಭಿನಂದನೆ: ಅತಿಥಿಗಳು: ಎ.ವಿ. ಪ್ರಸನ್ನ, ಅಧ್ಯಕ್ಷತೆ: ಎನ್. ಕುಮಾರ್, ಉಪಸ್ಥಿತಿ: ಜಗದೀಶ್ ಹುನುಗುಂದ್, ಸುಬ್ರಾಯ ಹೆಗ್ಡೆ, ಜಗನ್ನಾಥ್ ಕುಲಕರ್ಣಿ, ಭಾನುಪ್ರಕಾಶ್ ಶರ್ಮ, ಸಿ.ವಿ. ಗೋಪಿನಾಥ್, ವತ್ಸಲ ನಾಗೇಶ್, ಪವನ್ ಕುಮಾರ್, ಸುದರ್ಶನ್ ಎಸ್., ಜಿ.ಆರ್. ನಾಗರಾಜ್, ಬಿ. ವಿ. ರವಿಶಂಕರ್, ಆಯೋಜನೆ: ವಿಶ್ವ ವಿಪ್ರತ್ರಯೀ ಪರಿಷತ್, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30

ಕರ್ನಾಟಕ ಶಾಸ್ತ್ರೀಯ ಸಂಗೀತ ಆಧಾರಿತ ಚಲನಚಿತ್ರ ಗೀತೆಗಳು: ಗಾಯನ: ಪಾವನಿ ಭಾರದ್ವಾಜ್, ಕೊಳಲು: ಭರತ್ ಅತ್ರೇಯಸ್, ಪಿಟೀಲು: ಜನಾರ್ದನ್ ಶ್ರೀನಾಥ್, ಮೃದಂಗ: ಆನೂರು ವಿನೋದ್ ಶ್ಯಾಮ್, ರಿದಮ್ ಪ್ಯಾಡ್ಸ್: ಅಮೋಘ ವರ್ಷ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಡಾ.ಎಚ್. ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಅಭ್ಯರ್ಥಿಗಳಿಗೆ ಸನ್ಮಾನ: ಸಾನ್ನಿಧ್ಯ: ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಸಿದ್ದರಾಮಯ್ಯ, ನಾಗಮೋಹನ ದಾಸ್,ಉಪಸ್ಥಿತಿ: ವಿನಯ್ ಕುಮಾರ್, ಆಯೋಜನೆ: ಇನ್‌ಸೈಟ್ಸ್ ಐಎಎಸ್, ಸ್ಥಳ:ಶೇರಾಟನ್ ಗ್ರ್ಯಾಂಡ್ ಹೋಟೆಲ್, ಬೆಳಿಗ್ಗೆ 11



ಶಿವಮೂರ್ತಿ ಸ್ವಾಮೀಜಿ

ಪ್ರೊ.ಕೆ.ಟಿ. ಪಾಂಡುರಂಗಿ, ಆರ್. ನರಸಿಂಹಾಚಾರ್ ಸ್ಮಾರಕ ದತ್ತಿ ಉಪನ್ಯಾಸ: ‘ಋಗ್ವೇದದಲ್ಲಿ ಧೂಮಕೇತುಗಳು’: ವೀರನಾರಾಯಣ ಎನ್.ಕೆ. ಪಾಂಡುರಂಗಿ, ‘ಭಾರತೀಯ ಮತ್ತು ಪಾಶ್ಚಾತ್ಯ ಇತಿಹಾಸ ಅಧ್ಯಯನದಲ್ಲಿ ಭೇದ ಅಭೇದಗಳು’: ಎಸ್. ನಾಗರಾಜು, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಡಿ.ಕೆ. ಶಿವಕುಮಾರ್‌ಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ರಾಮಲಿಂಗಾ ರೆಡ್ಡಿ, ಅಧ್ಯಕ್ಷತೆ: ಡಿ.ಕೆ. ಸುರೇಶ್, ಪುರಸ್ಕಾರ ವಿತರಣೆ: ಕುಸುಮಾ ಎಚ್., ಸನ್ಮಾನಿತರು: ದಿನೇಶ್ ಗುಂಡೂರಾವ್, ಟಿ.ಬಿ. ಜಯಚಂದ್ರ, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಮಧು ಬಂಗಾರಪ್ಪ, ಎನ್.ಎಸ್. ಭೋಸರಾಜು, ಎಚ್.ಸಿ. ಬಾಲಕೃಷ್ಣ, ಎಸ್. ಆರ್. ಶ್ರೀನಿವಾಸ್, ಎಚ್.ಡಿ. ರಂಗನಾಥ್, ಆಯೋಜನೆ: ಅರ್ಪಿತ ಸೇವಾ ಟ್ರಸ್ಟ್, ಸ್ಥಳ: ಬಿ. ಬೆಸ್ಟ್ ಶಾಲಾ ಆವರಣ, ಲಗ್ಗರೆ ಮುಖ್ಯರಸ್ತೆ, ಬೆಳಿಗ್ಗೆ 11

‘ಸ್ವಾತಂತ್ರ್ಯ ಉದ್ದೀಪಕ ಬೇಂದ್ರ ಕಾವ್ಯ’ ಕುರಿತು ಉಪನ್ಯಾಸ: ಜಿ. ಕೃಷ್ಣಪ್ಪ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ಪಾಂಚಜನ್ಯ ಸಭಾಂಗಣ, ವಿನಾಯಕ ದೇವಸ್ಥಾನ, ಆರ್.ಟಿ. ನಗರ, ಸಂಜೆ 4

ಕನ್ನಡದ ನಾಳೆಗಳಿಗಾಗಿ ಮಾತುಕತೆ ಮಾಲಿಕೆ–1: ಆನಂದ್, ಉಪಸ್ಥಿತಿ: ನವೀನ್ ಕೃಷಿ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಸ್ಥಳ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ, ಕೃಷ್ಣರಾಜ ಪರಿಷನ್ಮಂದಿರದ ಕಟ್ಟಡ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

‘ಸರ್ವಂ ವಿಷ್ಣು ಮಯಂ’ ಮೋಹಿನಿ ಅಟ್ಟಂ ನೃತ್ಯ ಪ್ರದರ್ಶನ: ಅರ್ಚನಾ ಹೆಗ್ಡೆ, ಭವ್ಯಾ ಬಿಜೋಯ್, ಜ್ಯೋತಿ ರಾಮಚಂದ್ರನ್, ಮಾಲಿನಿ ಪಿಳ್ಳೈ, ಮೇಘನಾ ಎಸ್. ಮಾಧವನ್, ಶ್ರುತಿ ರಿತೇಶ್, ಅತಿಥಿಗಳು: ಲಲಿತಾ ಶ್ರೀನಿವಾಸನ್, ಆರ್.ವಿ. ರಾಘವೇಂದ್ರ, ವೈಜಯಂತಿ ಕಾಶಿ, ಆಯೋಜನೆ: ನೃತ್ಯಾಂಗನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ‘ಅಣ್ಣನ ನೆನಪು’ ಸಾಕ್ಷ್ಯ ನಾಟಕದ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಂಗರೂಪಕ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ಬೆಳಕು: ಮಂಜು ನಾರಾಯಣ್, ನಿರ್ವಹಣೆ: ಅಜಯ್ ಕುಮಾರ್, ಪ್ರಚಾರ ಕಲೆ: ಭಟ್ ಕಾರ್ತಿಕೇಯ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

Furnished Office Space Available for Rent
I & II Floor 2400 sqft each, R V Road, Bangalore
Contact: 88841 01166

REAL ESTATE SELLING

Agricultural Land

Mysore Road

"MALAVAHALLI 2 Acre 12 guntas 3 side Chanel 28 Lakhs per acre fixed. 9845178335 (Owner)"

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Brokers excuse.
Genuine Party Contact
9108133206

Sites

Arkavathi Layout

ARKAVATHY LAYOUT 20x30, 30x30,30x40,Sites Sale, All Blocks, Genuine Buyer's. Call: USR-7019770736/ 8951614989.

Banashankari

AVAILABLE BDA Sites,Banashankari6th,Stage, Anjanapura Visweswaraiah Layout,JPNagar8th,9th,Phase 20x30,30x40 40x60, 50x80,Contact Genuine Buyers: 9945778333

BANASHANKARI 6TH Stage, 3rd Block,30x40, West Facing Near Park. Good Location, Genuine Buyers Contact: 9900097239

SALE BDA 1210, BSK III Stage 30x45 East Facing price 13000 per sqft. Contact: 98450-25776

Electronic City

ELECTRONIC CITY near KHB, Suriya Nagara 2nd pass Site Sale, C Sector 30x50 Bangalore. 9980816305.

HBR Layout

PREMIUM BDA Commercial sites for sale HBR Layout 80 Feet Road (Near BDA Complex) Contact 9844039482

Hesaraghatta

30X40 SITE Sale (2 side Road) Kirloskar Layout, Hesaraghatta Main Road, Opposite Sapthagiri College. 9620480363

Hebbal

TALAKAVERI LAYOUT Hebbal 40x60 North 40 Feet Road Excellent Location BDA Approved 13,500/- sft 7829203369

HRBR Layout

HRBR 2ND Block 40x80 N/F 50 Feet Road, Close to Main Road, Commercial/ Residential. Rs 21,000 Negotiable Call: 73493-22223

Jakkur

SITE SALE Jakkuru Judicial Layout 40x60 West Facing Prime Location Broker Excuse Genuine Buyer: 7090777677

Jalahalli

SITE FOR Sale Bagalgunte, DC Converted, Built to Suit Villas, Near by Nagasandra Metro: 7996656677

Jayanagar

JAYANAGAR 7th Block 38x52 Site excellent residential location, facing by north for sale contact -9341261231

JAYANAGAR 7TH block, 40x60 site excellent residential location, facing by north for sale contact-9341261231

"AVAILABLE 45X90 North facing Site for sale Jayanagar 4th T Block, Good location. Contact 9110228719"

J P Nagar

JPNAGAR 8TH Phase, Royal County BDA Site Sale,30x50, S/F, 9800/- Negotiable : 9538680364,9513004587

Kengeri

30'X40' WEST facing BBMP 'B' Katha Site for Sale in Krishnagiri Police Layout, 5900/ Sq.Feet Direct Owner Contact: 9448256608/ 7760990853

Kumaraswamy Layout

25X30 EAST Facing BDA Site Sale Kumaraswamy Layout Near Police Station, Clear Titles. Contact:- 9342197377

Kempegowda Layout

KEMPEGOWDA LAYOUT BDA Sites for Sale Commercial 40x60, 100ft Road Near BDA Complex Mysore Road Metro: 7899570235

PLOT SALE 30x40 WF BDA Rs. 5750/- NEW NADAPRABHU KEMPEGOWDA LAYOUT NEAR MAGADI ROAD: 9916826976

Magadi Road

SALE 30X40 EAST FACING, Government GROUP 'D' Employees' society, Block-4, Herohalli, Andrahalli Main Road, Bangalore 9873264644

Mysore Road

SALE 17000 to 87000sft Commercial/ Residential land in Bidadi Highway-Road frontage 525ft. 9620253180/ 9916310226. www. vernadevelopers.com

Nagarabhavi

"NAGARABHAVI BDA Complex 30x40 West 40 feet Road, 30x40 North 4BHK Duplex House. 9448432633"

Nelamangala

NELAMANGALA SITE For sale at E.K. Enclave just opp. to RTO Nelamangala. Contact Raju:- 9448082402.

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

2000 SQ.FEET Site for SALE, R.R. Nagar Channasandra Village, Dwarakanagar, Bangalore. Contact: 8431886960

'A' KHATA Property for Sale in RajarajeshwariNagar 30x40 and 40x60, East facing. Call: 9448288522

Uttarahalli

"BHARATH SOCIETY near TV club 40x60 site, Jayanagar society Gubbalalu 30x40, Poorna Pragna 40x60 House. 9845286505"

Vishweshwariah Layout

SALE BDA 2763 II Block SMV Layout 20x30 North Facing 40 Lakhs Contact: 99001-45768

BDA SITE for Sale in Vishweshwaria 9th Block 20X30 N/F Near Nagarabhavi Ring Road: 8217392686/ 9980433004

Yelahanka

30x40 Converted Plots
Each Plot @ **1,60,000/-**
133/- per sq.ft, 90 minutes Journey from Yelahanka
9343510635, 9010559539

Flat

Banashankari

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs3.20 Crores Bheeresh 9900471143, 9844888847 Shivakumar 9845875555

Bannerghatta Road

FORTUNA GEM 3 BHK Flat Vijaya Bank Layout, Bilekahalli Bannerghatta Road, Bangalore- 560076 for Sale/ Rent. Rs. 21000/-. 9535099555

Basavanagudi

GAVIPURAM EXTENSION SALE 2 BHK FLAT 1100 SQFT, ALL GENERAL AMENITIES 1.20CR NEGOTIABLE: 9886019240/ 26623994

Kammanahalli

FLAT SALE, renovated, covered carparking, VI Floor, SENAVIHAR, 2 BHK, 903 SQFT. Contact: 7483935020

Kumaraswamy Layout

3-BHK E/F Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

M G Road And Around

EMBASSY OASIS St John's Road 4BHK Furnished Flat, 4100Sft 3Carparks, Upper Floor, with Amenities: 9845022510

Nagarabhavi

MALLATHAHALLI RING Road near Bangalore University, 2 BHK new Flats 45,00,000/- near Jnanabharathi Metro Station -9113209655

Sadashiva Nagar

SALE 2 BHK Palace Guttahalli, LPO Sadashivanagar, 1250 sft 1.15 Cr. 12 year old: 7625049680

Uttarahalli

IMAGE GREENS Apartment 1st Floor, 1300 Sqft. 2 BHK SALE. Poornaprajna Layout, 13 Years old. Call:9945724472

BUILDING FOR RENT
DIAGNOSTIC CENTER
NEWLY Constructed, on Prime Location
JIGANI-BANNERGHATTA MAIN ROAD
ATTACHED 24+ ROOMS VERY WELL SUITABLE. LIFT GROUND, 1st, 2nd & 3rd FLOORS. BUILDING VERY GOOD FRONTAGE
Contact : OWNER **9886198399**

Commercial Building

Mysore Road

FOR SALE BUILTUP 7500SFT BUILDING WITH 65HP POWER IN INDUSTRIAL AREA MYSORE ROAD CALL: 9886080542

Commerical

Jayanagar

"JAYANAGAR 9TH Block" Commercial Building 40x70Corner 5 Floor Rental income 5.75 Lakhs,Price 9.5cr Contact.9945079777

R T Nagar

RT.NAGAR, KAVALBYRASANDRA, KEB Road, 60X40 Commercial Corner Site for Sale. Very Good Location, Price 13500/-sq.ft. 9845757731

Farm House/ Land/ Resorts

Multiple Locations

1/2 ACRE converted eKhata furnished 15 AC rooms resto cafe 6-9L income nandi hills rd connecting STRR 9.1Cr Ph 7019346409

Mysore Road

LANDS FOR sale 4 acre,15 acre,80 acre in yellow zone near Bidadi(Bangalore) housing board layout. Suitable for villas, Layout etc.Contact-9743978646

General

Multiple Locations

BUY, SELL, rent Residential, industrial and farm land, office space available for rent. Contact. 9380586105.

House

Banashankari

ITTAMADU HOUSE SALE. Ground 2 BHK, 1st, 2nd Duplex, Car Parking, Site- South, Door- East. 9945724472.

Hanumanthnagar

"NEAR VIDYAPEETA circle, Katriguppe 30x43 old demolition House A-katha East facing Full Cheque. 9845286505

Jayanagar

J.P.NAGAR 4TH Phase`30x40`old House West`2.5cr jayanagara 9th 30x40 3 Floor`House E/F 3.10cr & 8th`Black 3600sft`Duplex Flat5 crore: Call;9945310899

Kanakapura Road

VAKIL GARDEN CITY, 4BHK, INDEPENDENT HOUSE SALE 5.5CR PLOT 4200SFT 3500SFT BUILTUP 9845291967 9900734700

Rajajinagar

SALE INDEPENDENT House Corner, Behind Orion Mall, Opposite Park, Second Floor 425 Sqft Single BHK Two Bathrooms 34 Lakhs Owner: 9448313709

Yelahanka

HOUSE FOR SALE Bagalur Cross, Vinayaka Nagar, Yelahanka, Site Size 30x42, West Face B-Katha. 9845270659

Industrial & Factory

Electronic City

SALE INDUSTRIAL Converted Land 60,000sqft`Good Location Clear title Documents Madiwala Village Attibele Anekal Taluk`2Km From Jai`Temple Vaniestates 9845012548

General

SALE BANK auction KIADB Industrial sites and factories. Harohalli, Dobbaspet, Dhodballapur, Devanahalli Aerospace, Hoskote, Malur. Arun 9945699789

Out-Station

BUILD-TO-SUIT OR on sale 3 acre Industrial Converted Land at Magadi Singripalya attached STRR corner @ 495 psqf contact 9845851473.

Tumkur Road

SALE, INDUSTRIAL, Commercial Warehouse Land 5/ 6 / 8/ 18 around Nelamangala, Dabaspet, Kunigal- Road. 9141326819

Residential/ Commercial

Lalbagh

OLD BUILDING Facing South on 5th Cross, Gandhinagar, Bengaluru, Measuring 40x75 feet is for Sale. 9964746666

Villas/Bunglows

Thanisandra

SOBHA CITY Tanisandra Main Road, 5 BHK Row House villa for sale. Contact; Chandan: 9900665081

REAL ESTATE BUYING

Commerical

General

WE HAVE buyers for tenanted properties with an investment upto 20CR. Properties with clear titles, Mortgaged properties, Bank auction properties, NPA Loan Settlement. Arun 9845077299.

Farm House/ Land/ Resorts

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. "Refer genuine Buyers & Sellers, get attractive gifts. 0% Brokerage

General

General

WE DO Agricultural Land Conversions, Change of Land Use,Phodi Durasti, Survey, Khata, Revenue Department work. Verna Developers, MG-Road, BLR. 9916310226/ 9620253180.

Sites

Banashankari

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout.Contact: 9845062822, 8660751654

J P Nagar

FOR PURCHASE Sites JP Nagar 7 & 8 Phase 2400 Sqft above Somesh 7411129550

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted Contact: SAPTHAGIRI, 9900268073, 9448068073.

Mysore

WANTED SITE in MYSORE, Require site in Telecom layout MYSORE. Santhosh 98456-99488

Vishweshwariah Layout

"WANTED BDA allotty sites 20x30, 30x40, 4060, 50x80 Vishveshwaraiah, Nagarabhavi, Banashankari 6th Stsge, Surrounding. 9945309883"

BUILDERS ESSENTIAL

Interior/Exterior

WALLPAPERS, WALL pictures, Mosquito nets, colourful curtains, wooden flooring, Fixing free, Wall Decor. Phone 8660514834

Water Proofing Materials

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

CORNER BUILDING At Triveni Road Yeshwanthpur Suitable for Commercial Purpose Builtup Area 12600 Sqft Rent: 9945008451/ 9448670282

Godown

GODOWN SPACE Available for RENT, 30x45, 1350 sqft, at Raghavendra Block, Srinagar, Bangalore. Call: 9448167957

General

2100 SQFT Flat serpentine Road Seshadripuram, 3 BedRoom, Duplex House 60x40 , Mahalakshmipuram For Rent Call: 9845315124

RENT ONLY NH44 8 kms from Devanahalli, 1 acre land with service road No petrol bunk. 9845885487

House

"BANASHANKARI 2ND-STAGE 2BHK near BDA shopping Complex and Metro Station Rent-26000/-. 9845286505"

2 BHK, G floor shankar nagar north facing call 9945816092/ 9901467193.

MATRIMONIAL

Brides Wanted

Christian

A SYRIAN Catholic bridegroom, 36, 174 cm very fair, B.Tech MBA MNC Bangalore looking for a fair, good- looking qualified girl. Mobile 09972005190 email sebastian.joseph15@gmail.c om

Muslim

SUNNI MUSLIM Boy 32 Years Resident of BLR welloff Family Working in Abroad is looking for a suitable match 080-69072053

SUNNI MUSLIM 40 Years Boy 5'10 Divorced Affluent family of Bengalore is looking for a educated girl (080-69072053)

Matrimonial Bureaus

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES Personalised Services All Age Groups INDIA/ ABROAD,
9611919477 9886884291

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura Road NH-209 Highway Call:9035963540

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002

Shares

EARN DAILY one percent of your online-trading investment. We coach you personally, contact 7204070893

Upkar Developers is ready to Merge/Takeover with any Genuine Housing Society to develop bulk housing sites for its Members.
Contact or Pls mail details to:
"UPKAR TOWERS", No. 28, 9th Cross, 2nd Block, Jayanagar, Bangalore-560 011
Call: 91-98450 31515
E-mail: cmd@upkardevelopers.com
Website: www.upkardevelopers.com

BDA SITE FOR SALE
360 Sq.mtrs / 4000 Sq ft.
5th 'G' Block, North Facing, Anjanapura, Near Nice Road, Bengaluru.
Genuine Buyers. (Brokers Excuse)
Contact:
9448804191

Business Offers

Consultants

CONSULTANT
Eco-Flair HVAC&R Consultant Expertise service to reduce power Consumption, Carbon emission, maintain Sustainability in Chiller plant
Mob- 9794810309

Distributors

DISTRIBUTORS Wanted across Karnataka & Goa for a full range of foldable plastic trolleys mfd in Gujarat. Criteria: should have good network of exclusive industrial plastic products dealers | retailers. Expert in institutional sales an advantage. Investment only on stocks. Contact: 9379794873/ 6357425818/ marketing3@srp.co.in

Finance

SECURED UNSECURED Loans Business Projects NPA Agri Cheque basis available. Agents Welcome Direct Finance 7449150617

AUTOMOTIVE

Four Wheelers Selling

Toyota

LAND CRUISER CAR FOR SALE Year 2014, Top Model, 1.39 Lakh km done, Well Maintained Condition. All Accessories Intact. Asking Price Rs. 65 Lakh (Negotiable). Only Genuine Buyers Contact : 9310206323, 9310739099

EDUCATIONAL

Tuitions

NOW At Your DoorStep Best Home Tuitions: 9743095715 By T.S.Shivashankar DSc. PHD USA, Maths and Physics Expert Living In Mahalaxmi Layout, International Scientist & Prodigy, Fluent in English Hindi Kannada French Portuguese 40 Plus Yrs of International Experience. Any Maths Physics Chemistry French Hindi English Civil Aeronautical Mechanical Electrical & Electronics All Subjects at all & Different Levels Class 1st To 12th CBSE/ ICSE/ ISC IIT JEE Mains and Advance Big Special Push given for Maths Instant Results To Follow Enough Seats Available All Major Areas of Bangalore Including Yelahanka Peenya Kengeri & Metro Routes From Mahalaxmi Layout Educated In USA Brazil Canada England France Germany Holland Greece & Russia & Kendriya Vidyalaya I.I.T Kanpur, 1981, 12th Standard Pass out from K.V.I.I.T. Kanpur Contact Early for New Academic Year 23-24, Father Dr. T.K.Srikantaiah Former Professor Aeronautical Engg Department I.I.T Kanpur PhD Canada

PERSONAL

Change of Name

I, ARNOLD ASHISH KERKETTA resident of 416, 24th Main Road, 3rd Cross, Kuvempu Nagar, BTM Stage 2, Bengaluru 560076 have changed my name to ARNOLD ASHISH CORNELIUS KERKETTA Vide Affidavit dated 17.06.2023 sworn before advocate and notary C.N. Balasubramanyam, Bangalore

CHANGE OF NAME
I, A. ANITA MARY D/o Late. P. S Arputhasamy R/a House #11/4, Osborne Road, 1st Floor, Near Mudaliar Sangam, Hermit Colony, Sivanchetty Garden Post, Halasuru Lake, Bangalore-560042. Have Changed My Name to A. VARSHA vide Affidavit Dated 06.06.2023 Sworn Before Notary Guna Shekar, Bangalore

CHANGE OF NAME
I, TENZIN DELEK BHUTIA S/o Sonam Wangdi Bhutia R/a #44, 3rd floor, 34th cross road, near my home PG, Kumaraswamy Layout, J.P.Nagar, Bangalore- 560078. Declare that TENZIN DELEK BHUTIA and TENZIN DELECK above both names are one and the same person and belongs to me only. Henceforth I known as TENZIN DELECK BHUTIA only, vide affidavit dated 2.6.2023 sworn before VIIth Addl chief metropolitan magistrate, Bangalore

I, NIKHIL S/o.Prem Prakash Gautam R/o.F1, Emerald Enclave, Phase-II, C Block, Cauvery Layout, Kereguddadahalli, P.O.Chikkabanvara Bengaluru- 560090 have changed my name from NIKHIL to NIKHIL GAUTAM vide`affidavit Dated:24.4.2023 sworn before`notary A.R.Muneer Ahamed, Bengaluru

Lost

DOCUMENT LOST
I, Muniswamy Raju R/a Ramagondanahalli, Whitefield Post, Bangalore-66 have lost my property Gift Deed document bearing No. ANK-1-04174/2006-04 of Book-1, CD No. ANKD118 dated 04-05-2006 in favour of Mr. Govindaraju and registered in the office of the Sub-Registrar, Anekal, Bengaluru in respect of the property bearing No. 145/41, Junjaru No.145 situated at Masthenahalli Village, Rajapura Dhakhle, Jigani Hobli, Anekal Taluk, Bengaluru Rural District.
Finders please contact : 9845482022 or inform near by Police Station

PUBLIC NOTICE

PUBLIC NOTICE
Notice is hereby given to Public at large that I, Mr.Champalal Jain, aged about 59 years residing at No.8, Mathru Chaya, 3rd Cross, Kumarapark West, Bangalore - 560020, being a father of 4 children namely, Ms.Priti Kumari, aged about 38 years, Mrs.Sarika Kumari, aged about 37 years, Hitesh Kumar.C, aged about 36 years, and Ankit Kumar.C, aged about 34 years. I own two self-acquired properties. My youngest son Mr.Ankit Kumar. C has been borrowing loans from various banks and NBFC's and misusing the same money and there is a possibility of repayment of debts appears to be lying on me. Despite several efforts put forth by me he failed to obey my words and henceforth I have disowned and debarred my son Mr.ANKIT KUMAR.C aged about 34 years and he has no claim or title to any of the properties possessed or belonging to me, as the said properties are all my self-acquired properties. My said son has no power or authority to incur any debts on the security of my said properties and any person hereafter giving him any loan or advance or transacting any business shall be doing so entirely on his own risk and responsibility. I, nor my properties, shall in any way be responsible for such debts. I am no way connected to such debts, nor holding any responsibility to clear the same.
Sd/- A.C.Subbu Swamy, Advocate, #344, 4th Cross, 6th Main, K.S.Layout, 2nd Stage, Bengaluru-78
Date:12-06-2023 Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

MORE Classifieds Ads on Subsequent Pages

ಹೆಚ್ಚಿದ ಭ್ರಷ್ಟಾಚಾರ: ಬೆಸ್ಕಾಂನಲ್ಲಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ಕಚೇರಿಗಳಲ್ಲಿ ಭ್ರಷ್ಟಾಚಾರ ಪ್ರಕರಣಗಳು ಹೆಚ್ಚುತ್ತಿರುವ ಕಾರಣದಿಂದ ಕಂಪನಿಯ ಕೇಂದ್ರ ಕಚೇರಿಯಲ್ಲೇ ಶನಿವಾರ ಸಭೆ ನಡೆಸಿದ ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು, ಭ್ರಷ್ಟಾಚಾರ ನಿಯಂತ್ರಣದ ಕುರಿತು ಜಾಗೃತಿ ಮೂಡಿಸಿದರು.

ಆರು ತಿಂಗಳ ಅವಧಿಯಲ್ಲಿ ಲೋಕಾಯುಕ್ತದ ಬೆಂಗಳೂರು ನಗರ ಘಟಕದಲ್ಲಿ ದಾಖಲಾಗಿರುವ ಭ್ರಷ್ಟಾಚಾರ ಪ್ರಕರಣಗಳಲ್ಲಿ ಶೇಕಡ 30ಕ್ಕಿಂತಲೂ ಹೆಚ್ಚು ಬೆಸ್ಕಾಂಗೆ ಸೇರಿವೆ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್‌ಪಿ ಕೆ.ವಿ. ಅಶೋಕ್ ನೇತೃತ್ವದ ತಂಡವು ಬೆಸ್ಕಾಂ ಕೇಂದ್ರ ಕಚೇರಿಗೆ ತೆರಳಿ ಸಭೆ ನಡೆಸಿತು.

ಬೆಸ್ಕಾಂನ ಮುಖ್ಯ ಎಂಜಿನಿಯರ್‌ಗಳು, ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು, ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು. ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ತರುವುದು, ಕಡತಗಳ ತ್ವರಿತ ವಿಲೇವಾರಿ ತರುವ ಕುರಿತು ಸೂಚಿಸಲಾಗಿದೆ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಲುಕಿದರೆ ಭವಿಷ್ಯದಲ್ಲಿ ಎದುರಾಗುವ ಸವಾಲುಗಳ ಬಗ್ಗೆಯೂ ಮಾಹಿತಿ ನೀಡಲಾಗಿದೆ ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ತಿದ್ದೋಲೆ ಹೊರಡಿಸಿದ ಕರ್ನಾಟಕ ಪಠ್ಯ ಪುಸ್ತಕ ಸಂಘ

ಪಠ್ಯ: ಅಧಿಕೃತ ತಿದ್ದುಪಡಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಠ್ಯ ಪರಿಶೀಲನೆಗೆ ನೇಮಿಸಿದ್ದ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಸರ್ಕಾರದ ಅಧಿಕೃತ ಆದೇಶ ಇಲ್ಲದೇ ಪರಿಷ್ಕರಣೆ ಮಾಡಿದ್ದ 6 ರಿಂದ 9ನೇ ತರಗತಿಯ ಕನ್ನಡ ಹಾಗೂ ಸಮಾಜ ವಿಜ್ಞಾನ ವಿಷಯಗಳ ಪಠ್ಯಪುಸ್ತಕಗಳಿಗೆ ಬದಲಾವಣೆ ಸೂಚಿಸಿ, ಕರ್ನಾಟಕ ಪಠ್ಯ ಪುಸ್ತಕ ಸಂಘ ತಿದ್ದೋಲೆ ಪ್ರಕಟಣೆ ಹೊರಡಿಸಿದೆ.

ಕನ್ನಡ ಭಾಷಾ ವಿಷಯದ ಪಠ್ಯಗಳಲ್ಲಿ ಸಾವಿತ್ರಿಬಾಯಿ ಪುಲೆ ಅವರ ಕುರಿತ ರಮಾನಂದ ಆಚಾರ್ಯ ಅವರ ಗದ್ಯ 'ಸಾಮಾಜಿಕ ಕಳಕಳಿಯ ಮೊದಲ ಶಿಕ್ಷಕಿ' ಕೈಬಿಟ್ಟು, ಹಿಂದೆ ಇದ್ದ ಡಾ.ಎಚ್.ಎಸ್.ನಿರುಪಮಾ ಅವರ 'ಸಾವಿತ್ರಿಬಾಯಿ ಪುಲೆ' ಪಾಠವನ್ನು ಮರುಸೇರ್ಪಡೆ ಮಾಡಲಾಗಿದೆ. ನಿರ್ಮಲಾ ಸುರತ್ಕಲ್ ಅವರ ಪದ್ಯ 'ನಮ್ಮದೇನಿದೆ?' ಬದಲು ಚೆನ್ನಣ್ಣ ವಾಲಿಕಾರ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು ಬರೆದ 'ನೀ ಹೋದ ಮರು ದಿನ' ಸೇರ್ಪಡೆ ಮಾಡಲಾಗಿದೆ.

> **ಮಕ್ಕಳ ಅನುಕೂಲಕ್ಕೆ ಪಠ್ಯ ಪರಿಷ್ಕರಣೆ ಮಾಡಿದರೆ ತಪ್ಪೇನು? ಪಠ್ಯ ಪುಸ್ತಕಗಳಲ್ಲಿ ಒಳ್ಳೆಯ ವಿಚಾರಗಳಿರಬೇಕು. ಪರಿಷ್ಕರಣೆ ಒಳ್ಳೆಯದು**
> **ಗೀತಾ ಶಿವರಾಜ್ ಕುಮಾರ್,** ಚಿತ್ರ ನಿರ್ಮಾಪಕಿ

> **ಸಮಾಜ ಸುಧಾರಕರು ಹಾಗೂ ದೇಶಭಕ್ತರಾದ ಸಾವರ್ಕರ್ ಮತ್ತು ಹೆಡಗೇವಾರ್ ಅವರನ್ನು ಕುರಿತ ಪಠ್ಯವನ್ನು ಕರ್ನಾಟಕ ಸರ್ಕಾರ ಕೈಬಿಟ್ಟಿರುವುದು ದುರದೃಷ್ಟಕರ**
> **ನಿತಿನ್ ಗಡ್ಕರಿ** ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ

ಪಾರಂಪಳ್ಳಿ ನರಸಿಂಹ ಐತಾಳ ಅವರ 'ಭೂ ಕೈಲಾಸ' ಪೌರಾಣಿಕ ನಾಟಕದ ಬದಲು ತಿ.ತಾ ಶರ್ಮ, ಸಿದ್ಧನಹಳ್ಳಿ ಕೃಷ್ಣ ಶರ್ಮ ಅವರು ಅನುವಾದಿಸಿದ ಜವಾಹರ ಲಾಲ್ ನೆಹರೂ ಅವರ 'ಮಗಳಿಗೆ ಬರೆದ ಪತ್ರ' ಸೇರಿಸಲಾಗಿದೆ.

ಕೇಶವ ಬಲಿರಾಂ ಹೆಡಗೇವಾರ್ ಅವರ 'ನಿಜವಾದ ಆದರ್ಶಪುರುಷ ಯಾರಾಗಬೇಕು?' ಬದಲು ಶಿವಕೋಟ್ಯಾಚಾರ್ಯರ 'ಸುಕುಮಾರಸ್ವಾಮಿಯ ಕಥೆ', ಶತಾವಧಾನಿ ಡಾ.ಆರ್.ಗಣೇಶ್ ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ಬದಲಿಗೆ ಸಾ.ರಾ.ಅಬೂಬಕ್ಕರ್ ಅವರ 'ಯುದ್ಧ', ಕೆ.ಟಿ.ಗಟ್ಟಿ ಅವರ 'ಕಾಲವನ್ನು ಗೆದ್ದವರು' ಬದಲು ವಿಜಯಮಾಲಾ ರಂಗನಾಥ್ ಅವರ 'ಬ್ಲಡ್ ಗ್ರೂಪ್', ಪಿ.ಲಕ್ಷ್ಮಿನಾರಾಯಣ ಭಟ್ ಅವರ 'ಅಚ್ಚರಿಯಜೀವಿ ಇಂಬಳ' ಬದಲು ದಸ್ತಗೀರ ಅಲ್ಲೀಬಾಯಿ ಅವರ 'ಉರುಸುಗಳಲ್ಲಿ ಭಾವೈಕ್ಯತೆ' ಸೇರ್ಪಡೆ ಮಾಡಲಾಗಿದೆ. ಹಾಗೆಯೇ, ಚಕ್ರವರ್ತಿ ಸೂಲಿಬೆಲೆ ಅವರ 'ತಾಯಿ ಭಾರತಿಯ ಅಮರಪುತ್ರರು' ಪೂರ್ಣ ಪಾಠವನ್ನು ಕೈಬಿಡಲಾಗಿದೆ.

ಸಮಾಜ ವಿಜ್ಞಾನದಲ್ಲಿ 'ವೇದಗಳ ಕಾಲದ ಸಂಸ್ಕೃತಿ', 'ಹೊಸ ಧರ್ಮಗಳ ಉದಯ', 'ಮಹಿಳಾ ಸಮಾಜ ಸುಧಾರಕಿಯರು', 'ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು', 'ಮಾನವ ಹಕ್ಕುಗಳು' ಎಂಬ ಹೊಸ ಅಧ್ಯಾಯ ಸೇರಿಸಲಾಗಿದೆ. 'ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ', 'ಮೈಸೂರು ಮತ್ತು ಇತರೆ ಸಂಸ್ಥಾನಗಳು', 'ಭಾರತಕ್ಕಿರುವ ಸವಾಲುಗಳು ಮತ್ತು ಪರಿಹಾರೋಪಾಯಗಳು' ಅಧ್ಯಯನದಲ್ಲಿ ಕೆಲ ತಿದ್ದುಪಡಿಗಳನ್ನು ಸೂಚಿಸಲಾಗಿದೆ.

ವಾಹನ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಕನಕಪುರದ ಎಕ್ಸಿಟ್ ಟೋಲ್ ಬಳಿ ವಾಹನವೊಂದು ಶನಿವಾರ ಬೆಳಿಗ್ಗೆ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಂದಾಜು 45 ವರ್ಷದ ಮೃತ ಪುರುಷನ ಹೆಸರು ಮತ್ತು ಗುರುತು ಪತ್ತೆಯಾಗಿಲ್ಲ.

ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಅವರು ರಸ್ತೆಗೆ ಬಿದ್ದಿದ್ದರು. ಅವರ ತಲೆ ಮೇಲೆ ವಾಹನದ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಚಾಲಕ ವಾಹನ ಸಮೇತ ಪರಾರಿಯಾಗಿದ್ದಾನೆ. ತಲಘಟ್ಟಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹ 14.90 ಲಕ್ಷದ ವಿದೇಶಿ ಸಿಗರೇಟ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ದಾಳಿ ನಡೆಸಿ, ₹ 14.90 ಲಕ್ಷದ ನಿಷೇಧಿತ ವಿದೇಶಿ ಸಿಗರೇಟ್ ಪ್ಯಾಕ್ ಅನ್ನು ಜಪ್ತಿ ಮಾಡಿದ್ದಾರೆ.

ಗೋದಾಮಿನಲ್ಲಿ 4,650 ಪ್ಯಾಕ್‌ಗಳನ್ನು ದಾಸ್ತಾನು ಮಾಡಲಾಗಿತ್ತು. ಅವುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ ಆರೋಪಿ ನಿಷೇಧಿತ ಸಿಗರೇಟ್ ಅನ್ನು ವಿದೇಶದಿಂದ ಅಕ್ರಮವಾಗಿ ತಂದು ಮಾರಾಟ ಮಾಡುತ್ತಿದ್ದ.

ತಿಲಕ್‌ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪೂಮಾ ಕಂಪನಿಯ ಪ್ಯಾಂಟ್ಸ್ ಹಾಗೂ ಟಿ-ಶರ್ಟ್ ಅನ್ನು ನಕಲು ಮಾಡಿ ಕಳಪೆ ಗುಣಮಟ್ಟದ ಬಟ್ಟೆಗಳಿಗೆ ಪೂಮಾ ಕಂಪನಿಯ ಲೇಬಲ್ ಅಂಟಿಸಿ ಮಾರಾಟ ಮಾಡಲಾಗುತ್ತಿತ್ತು. ಪೂಮಾ ಕಂಪನಿಯದ್ದೇ ಬಟ್ಟೆಗಳೆಂದು ನಂಬಿಸಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿತ್ತು. ₹ 5 ಲಕ್ಷದ ಬಟ್ಟೆಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಸಿಬ್ಬಂದಿ ತಿಳಿಸಿದ್ದಾರೆ.

ಪ್ರಯಾಣಿಕನಿಗೆ ಆಟೊ ಗುದ್ದಿಸಿದ ಚಾಲಕ: ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಕ್ ಮಾಡಿದ ಟ್ರಿಪ್ ಅನ್ನು ರದ್ದು ಪಡಿಸದೇ ಇರುವುದಕ್ಕೆ ಚಾಲಕನೊಬ್ಬ ಪ್ರಯಾಣಿಕನಿಗೆ ಆಟೊ ಗುದ್ದಿಸಿದ ಘಟನೆ ನಡೆದಿದೆ. ಬಳಿಕ ಹಲ್ಲೆ ನಡೆಸಿದ್ದಾನೆ.

ಶುಕ್ರವಾರ ಬೆಳಿಗ್ಗೆ 6.30ರ ಸುಮಾರಿಗೆ ಜಯನಗರ 9ನೇ ಬ್ಲಾಕ್‌ನಿಂದ ಪ್ರಯಾಣಿಕನೊಬ್ಬ ಆನ್‌ಲೈನ್‌ನಲ್ಲಿ ಉಬರ್ ಆಟೊ ಬುಕ್ ಮಾಡಿದ್ದರು. ಪ್ರಯಾಣಿಕನಿದ್ದ ಸ್ಥಳಕ್ಕೆ ಬಂದ ಆಟೊ ಚಾಲಕ, ಬುಕಿಂಗ್ ರದ್ದು ಪಡಿಸಿ ಆಫ್‌ಲೈನ್‌ನಲ್ಲಿ ಬರುವಂತೆ ಕೇಳಿದ್ದಾನೆ. ಇದಕ್ಕೆ ಪ್ರಯಾಣಿಕ ಒಪ್ಪಲಿಲ್ಲ. ಆಗ ಇಬ್ಬರ ನಡುವೆ ವಾಗ್ವಾದ ನಡೆದಿದೆ. ಪ್ರಯಾಣಿಕನಿಗೆ ಚಾಲಕ ಆಟೊದಲ್ಲಿ ಗುದ್ದಿಸಿದ್ದಾನೆ. ಬಳಿಕ ಆತನ ತಾಯಿ ಎದುರೇ ಹಲ್ಲೆ ನಡೆಸಿರುವುದೂ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಟ್ವಿಟರ್ ಬಳಕೆದಾರರೊಬ್ಬರು ಟ್ವಿಟರ್ ಮೂಲಕ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯವನ್ನು ಶೇರ್ ಮಾಡಿ ಮತ್ತು ಆಟೊ ಸಂಖ್ಯೆ (ಕೆಎ03-ಎಎಚ್-7784) ಉಲ್ಲೇಖಿಸಿ ಬೆಂಗಳೂರು ನಗರ ಪೊಲೀಸರಿಗೆ ದೂರು ನೀಡಿದ್ದರು. ಜಯನಗರ ಪೊಲೀಸರು ಆಟೊ ಚಾಲಕ ಲಾಝರ್(36) ಎಂಬಾತನನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಚಾಲಕರ ಬೆದರಿಸಿ ಸುಲಿಗೆ: ಆರೋಪಿ ಬಂಧನ

ಬೆಂಗಳೂರು: ರಾಜ್ಯದ ಬೇರೆ ಬೇರೆ ಭಾಗಗಳಿಂದ ನಗರಕ್ಕೆ ಬಂದು ಓಲಾ ಹಾಗೂ ಉಬರ್ ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದವರನ್ನೇ ಬೆದರಿಸಿ ಹಣ ಹಾಗೂ ಚಿನ್ನಾಭರಣ ಸುಲಿಗೆ ಮಾಡುತ್ತಿದ್ದ ಆರೋಪಿಯನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ. ವಿನಯ್ ಬಂಧಿತ ಆರೋಪಿ.


ಪ್ರಯಾಣಿಕರ ಸೋಗಿನಲ್ಲಿ ಆರೋಪಿ ಕ್ಯಾಬ್‌ಗಳನ್ನು ಬುಕ್ ಮಾಡುತ್ತಿದ್ದ. ಬಳಿಕ ನಿರ್ಜನ ಪ್ರದೇಶಕ್ಕೆ ಚಾಲಕರನ್ನು ಕರೆದೊಯ್ದು ಅಲ್ಲಿ ಚಾಕು ತೋರಿಸಿ ಸುಲಿಗೆ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಎಚ್‌ಎಎಲ್, ಬಾಣಸವಾಡಿ, ಹೈಗ್ರೌಂಡ್ಸ್, ಎಂ.ಜಿ.ರಸ್ತೆಯಲ್ಲಿ ಆರೋಪಿ ಕ್ಯಾಬ್ ಬುಕ್ ಮಾಡುತ್ತಿದ್ದ. ಚಾಲಕನ ಮನೆಯವರಿಗೂ ಕರೆ ಮಾಡಿಸಿ ಫೋನ್ ಪೇ ಮೂಲಕ ಹಣ ಹಾಕಿಸಿಕೊಳ್ಳುತ್ತಿದ್ದ.

'ನಾನು ಆಸ್ಪತ್ರೆಗೆ ಸೇರಿದ್ದೇನೆ' ಎಂದು ಚಾಲಕರಿಂದಲೇ ಮನೆಯವರಿಗೆ ಕರೆ ಮಾಡಿಸುತ್ತಿದ್ದ ಎಂದು ಪೊಲೀಸರು ತಿಳಿಸಿದರು.

ಪ್ರೇಮಿಗಳ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಆತ್ಮಹತ್ಯೆ ಮಾಡಿಕೊಂಡ ಪ್ರೇಮಿಗಳು

ಅಪರಾಧ ಸುದ್ದಿ

ಬೆಂಗಳೂರು: ನಗರದ ಬೆಳ್ಳಂದೂರು ಬಳಿ ನೆಲೆಸಿದ್ದ ಪಶ್ಚಿಮ ಬಂಗಾಳದ ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿಪೇಂದ್ರ ಕುಮಾರ್ (21) ಹಾಗೂ ಧಾರಾ (21) ಆತ್ಮಹತ್ಯೆ ಮಾಡಿಕೊಂಡಿದ್ದು, ಮಾರತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಪೇಂದ್ರ ಕುಮಾರ್ ಗಾರೆ ಕೆಲಸ ಮಾಡಿಕೊಂಡು ಸ್ನೇಹಿತರೊಂದಿಗೆ ನೆಲೆಸಿದ್ದ. ಎರಡು ದಿನಗಳ ಹಿಂದೆ ಈತ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ. ಅದಾದ ಮರು ದಿನ ಧಾರಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದರು.

'ಆರಂಭದಲ್ಲಿ ಇವರು ಪ್ರೇಮಿಗಳು ಎಂಬುದು ತಿಳಿದಿರಲಿಲ್ಲ. ಬಿಪೇಂದ್ರ ಕುಮಾರ್ ಮೊಬೈಲ್ ಪರಿಶೀಲನೆ ವೇಳೆ ಲಭಿಸಿದ ಫೋಟೊದಿಂದ ಇಬ್ಬರೂ ಪ್ರೀತಿಸುತ್ತಿದ್ದರು ಎಂದು ತಿಳಿದುಬಂದಿದೆ. ಪಶ್ಚಿಮ ಬಂಗಾಳಕ್ಕೆ ಧಾರಾ ತೆರಳಿದ್ದಾಗ ಪೋಷಕರು ಆಕೆಗೆ ಬೇರೊಂದು ಹುಡುಗನ ಜೊತೆಗೆ ನಿಶ್ಚಿತಾರ್ಥ ಮಾಡಿದ್ದರು. ಆ ವಿಷಯ ತಿಳಿದು ಬಿಪೇಂದ್ರ ಕುಮಾರ್ ಆತ್ಮಹತ್ಯೆ ಮಾಡಿಕೊಂಡಿದ್ದ. ಬೆಂಗಳೂರಿಗೆ ವಾಪಸ್ ಬಂದು ಪ್ರೇಯಸಿಯೂ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಪೊಲೀಸರು ಹೇಳಿದರು.

'ಮೂರು ತಿಂಗಳೊಳಗೆ 108 ಆರೋಗ್ಯ ಸೇವೆಗೆ ಹೊಸ ರೂಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರು ತಿಂಗಳೊಳಗೆ 108 ಆರೋಗ್ಯ ಸೇವೆಗೆ ಹೊಸ ರೂಪ ನೀಡಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಸೌಧದಲ್ಲಿ ಅಧಿಕಾರಿಗಳ ಜತೆಗೆ ಶನಿವಾರ ಸಭೆ ನಡೆಸಿದ ಅವರು, '108' ಆರೋಗ್ಯ ಸೇವೆ ಸುಧಾರಣೆಗೆ ಹಾಗೂ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು.

ಸಭೆಗೂ ಮುನ್ನ ಇ.ಎಂ.ಆರ್.ಐ. ಗ್ರೀನ್ ಹೆಲ್ತ್ ಸರ್ವೀಸ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಕಾಲ್ ಸೆಂಟರ್‌ನ ತಂತ್ರಜ್ಞಾನ ಕುರಿತು ಮಾಹಿತಿ ಪಡೆದು ಪರಿಶೀಲನೆ ನಡೆಸಿದ ಅವರು, ತಂತ್ರಜ್ಞಾನದಲ್ಲಿ ಬದಲಾವಣೆ ತರುವಂತೆ ಸೂಚಿಸಿದರು. '108' ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಕರೆಗಳಿಗೆ ಸೂಕ್ತ ಸ್ಪಂದನೆ ಏಕೆ ಸಿಗುತ್ತಿಲ್ಲ ಎಂದು ಅಧಿಕಾರಿಗಳನ್ನ ಪ್ರಶ್ನಿಸಿ, ಆದಷ್ಟು ಬೇಗ ಸಮಸ್ಯೆಗಳನ್ನ ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಿದರು.

2017ರಿಂದ '108' ಆರೋಗ್ಯವಾಹಿನಿ ಹೊಸ ಟೆಂಡರ್ ಕರೆದಿಲ್ಲ. ಈ ಹಿಂದೆ ಗುತ್ತಿಗೆ ಪಡೆದವರೇ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಗರಂ ಆದ ಅವರು, 108 ಆರೋಗ್ಯ ವಾಹಿನಿ ಸೇವೆ ಜನರಿಗೆ ಸಮರ್ಪಕವಾಗಿ ತಲುಪಿಸಲು ಹೆಚ್ಚು ಗಮನ ವಹಿಸಬೇಕು ಎಂದು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

'ಮೂರು ತಿಂಗಳ ಒಳಗೆ ನನಗೆ ಉತ್ತಮ ಫಲಿತಾಂಶ ಬೇಕು' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ ಅವರು, 'ಜನರು 108 ಆರೋಗ್ಯ ಸೇವೆ ಪಡೆಯಲು ಪರಿತಪಿಸುವ ಪರಿಸ್ಥಿತಿ ನಿರ್ಮಾಣವಾದರೆ ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.



ವಿಜಯನಗರ ಮಾರುತಿ ಮೆಡಿಕಲ್ಸ್‌ನ ಮಹೇಂದ್ರ ಮನ್ನೋತ್ ಅವರು ತಮ್ಮ ತಂದೆ ಮೋತಿಲಾಲ್ ಮನ್ನೋತ್ ಜೈನ್ ಮತ್ತು ತಾಯಿ ವಿಮಲಾಬಾಯಿ ಮನ್ನೋತ್ ಜೈನ್ ಪುಣ್ಯತಿಥಿಯ ಸ್ಮರಣಾರ್ಥ ಸಸಿಗಳನ್ನು ನೆಟ್ಟು ವಿವಿಧ ಗೋಶಾಲೆಗಳಿಗೆ ಒಟ್ಟು ₹ 44 ಲಕ್ಷ ದೇಣಿಗೆ ನೀಡಿದರು. ವಿವಿಧ ಗೋಶಾಲೆಗಳ ಪ್ರಮುಖರು ಇದ್ದರು

ಮಠದಲ್ಲಿ ಸಮಾಧಿ ನಾಶ: ಉದ್ವಿಗ್ನ ಸ್ಥಿತಿ

ಪ್ರಜಾವಾಣಿ ವಾರ್ತೆ

ತುಮಕೂರು: ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಆವರಣದಲ್ಲಿದ್ದ ಸಮಾಧಿಗಳನ್ನು ತೆರವು ಮಾಡಿದ್ದಾರೆ ಎನ್ನುವ ಸುದ್ದಿ ಶನಿವಾರ ಹರಿದಾಡುತ್ತಿದ್ದು, ಮಠದ ಬಳಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ.

ಮಠಕ್ಕೆ ಭೂಮಿ ದಾನ ಮಾಡಿದ ವಂಶಸ್ಥರ ಅಂತ್ಯಸಂಸ್ಕಾರವನ್ನು ಮಠದ ಆವರಣದಲ್ಲಿ ಮಾಡುತ್ತಿದ್ದು, ಈ ಬಗ್ಗೆ ಹಲವು ವರ್ಷಗಳಿಂದ ಭೂಮಿ ನೀಡಿದವರು ಹಾಗೂ ಮಠದವರ ಮಧ್ಯೆ ಗಲಾಟೆ ನಡೆಯುತ್ತಿದೆ.

'ಇಲ್ಲಿ ಇರುವುದು ಭೂಮಿ ನೀಡಿದವರ ಸಮಾಧಿಗಳಲ್ಲ. ಮಠದಲ್ಲಿದ್ದ ಬಸವಗಳ (ಎತ್ತುಗಳ) ಸಮಾಧಿ. ಶಾಲೆ, ದೇವಾಲಯ ಇರುವುದರಿಂದ ಇಲ್ಲಿ ಅಂತ್ಯಕ್ರಿಯೆ ಮಾಡಲು ಅವಕಾಶ ನೀಡುವುದಿಲ್ಲ' ಎಂದು ಮಠದವರು ಹಾಗೂ ಭೂಮಿ ನೀಡಿದವರ ಮಧ್ಯೆ ಹಲವಾರು ಬಾರಿ ಗಲಾಟೆ ನಡೆದಿದೆ. ನಂತರ ಜಿಲ್ಲಾ ಆಡಳಿತ ಮಧ್ಯೆ ಪ್ರವೇಶಿಸಿ ಸಂಧಾನ ನಡೆಸಿ, ವಿವಾದ ತಣ್ಣಗೆ ಮಾಡಿತ್ತು.

ಶನಿವಾರ ಮತ್ತೆ ಸಮಾಧಿ ತೆರವಿನ ಸುದ್ದಿ ಹರಿದಾಡಿದ್ದು, ಮಠದ ಆವರಣಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿದೆ. ಸಮಾಧಿ ತೆರವು ಮಾಡಿರುವುದರ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ. ಎಸ್‌ಪಿ ರಾಹುಲ್‌ಕುಮಾರ್ ಶಹಪೂರವಾಡ್, ಹೆಚ್ಚುವರಿ ಎಸ್‌ಪಿ ವಿ.ಮರಿಯಪ್ಪ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಂದೋಬಸ್ತ್ ಹೆಚ್ಚಿಸಿದ್ದಾರೆ.

ಮೊದಲ ತಂಡದ 212 ಯೋಧರಿಗೆ ಕಠಿಣ ತರಬೇತಿ

ಅಗ್ನಿವೀರರ ನಿರ್ಗಮನ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿವೀರರ ಮೊದಲ ತಂಡದ ನಿರ್ಗಮನ ಪಥಸಂಚಲನ ಶನಿವಾರ ಪ್ಯಾರಾಚ್ಯೂಟ್ ರೆಜಿಮೆಂಟ್ ಕೇಂದ್ರದಲ್ಲಿ ನಡೆಯಿತು.

212 ಅಗ್ನಿವೀರರು ಈ ಕೇಂದ್ರದಲ್ಲಿ ತರಬೇತಿ ಪಡೆದಿದ್ದಾರೆ. ದೇಶದ ವಿವಿಧ ಭಾಗಗಳಿಂದ ಆಯ್ಕೆಯಾಗಿದ್ದ ಇವರಿಗೆ 24 ವಾರಗಳ ಕಠಿಣ ತರಬೇತಿಯನ್ನು ನೀಡಲಾಗಿದೆ. ಭಾರತೀಯ ಸೇನೆಯ ವಿವಿಧ ವಿಶೇಷ ಪಡೆಗಳ ಘಟಕಗಳಲ್ಲಿ ಇವರನ್ನು ನಿಯೋಜಿಸಲಾಗುತ್ತಿದೆ.

ಆಕರ್ಷಕ ಪಥಸಂಚಲನವನ್ನು ವಿಶೇಷ ಕಾರ್ಯಾಚರಣೆ ವಿಭಾಗದ ಮೇಜರ್ ಜನರಲ್ ಜೆ.ಎಸ್. ನಂದಾ ವೀಕ್ಷಿಸಿದರು.

ಅಗ್ನಿವೀರರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪ್ರಾಮಾಣಿಕತೆ, ಶೌರ್ಯ, ನಿಷ್ಠೆಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು. ಮಾದರಿ ಯೋಧರಾಗಿ ಬದುಕಬೇಕು. ಭಾರತೀಯ ಸೇನೆಯಲ್ಲಿಯೇ ಪ್ಯಾರಾಚ್ಯೂಟ್ ರೆಜಿಮೆಂಟ್ ಶ್ರೇಷ್ಠತೆಯನ್ನು ಹೊಂದಿದ್ದು, ಹಲವಾರು ಸಾಧನೆಗಳನ್ನು ಮಾಡಿದ ಕೀರ್ತಿ ಹೊಂದಿದೆ' ಎಂದರು.

ಮಹಾರಾಷ್ಟ್ರದ ದಿಯೊರ್ ಪ್ರತೀಕ್ ಬಾಬನ್‌ರಾವ್ ಅವರು ಪರೇಡ್‌ನ ನೇತೃತ್ವ ವಹಿಸಿದ್ದರು. ಅತ್ಯುತ್ತಮ ಸಾಧಕ ಅಭ್ಯರ್ಥಿಯಾಗಿ ಸುನೀಲ್ ಬಾದಲ್ ಅವರು 'ಗಿಲ್' ಪದಕ ಪಡೆದರು. ಕಮಾಂಡಂಟ್ ಸಹಿಷ್ಣುತೆ ಪದಕವನ್ನು ಮೊಹ್ಮದ್ ಫಿರೋಜ್ ಪಡೆದರು. ಅತ್ಯುತ್ತಮ ಶಸ್ತ್ರಾಸ್ತ್ರ ತರಬೇತಿಗಾಗಿ ನೀಡುವ ಘಾಡ್ಗೆ ಪದಕವನ್ನು ಅಂಕಿತ್, ದೈಹಿಕ ತರಬೇತಿ ವಿಭಾಗದಲ್ಲಿ ಅತ್ಯುತ್ತಮ ಅಭ್ಯರ್ಥಿಯಾಗಿ ಆಯ್ಕೆಯಾದ ಮುತ್ತುರಾಜ್ ದೊಡ್ಡಮನಿ ಅವರಿಗೆ 'ಚೀಮಾ' ಪದಕ ನೀಡಲಾಯಿತು. ಡ್ರಿಲ್ ವಿಭಾಗದಲ್ಲಿ ದಿಯೊರ್ ಪ್ರತೀಕ್ ಬಾಬನ್‌ರಾವ್ ಅವರು 'ಛೆತ್ರಿ' ಪದಕವನ್ನು ಪಡೆದರು.



ನಗರದ ಪ್ಯಾರಚ್ಯೂಟ್ ರೆಜಿಮೆಂಟ್ ತರಬೇತಿ ಕೇಂದ್ರದಲ್ಲಿ ಶನಿವಾರ ನಡೆದ ಅಗ್ನಿವೀರರ ಮೊದಲ ತಂಡದ ನಿರ್ಗಮನ ಪಥಸಂಚಲನ ನಡೆಯಿತು
—ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.



ಆದಾಯ ಕ್ಷೀಣ ಪ್ರಾಂಗಣ ಭಣಭಣ



ಹುಬ್ಬಳ್ಳಿಯ ಅಮರಗೋಳ ಎಪಿಎಂಸಿಯಲ್ಲಿ ಕೆಲಸವಿಲ್ಲದೆ ಕಾಲಕಳೆಯುತ್ತಿರುವ ದಿನಗೂಲಿ ಕಾರ್ಮಿಕರು
–ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಒಂದನೇ ಪುಟದಿಂದ..

ಕೆಲ ಪ್ರಕರಣಗಳು ಪೊಲೀಸ್ ಠಾಣೆ ಮೆಟ್ಟಿಲೇರಿ, ನಂತರ ಸಂಧಾನದ ಮೂಲಕ ಬಗೆಹರಿಸಿದ ಘಟನೆಗಳು ಜರುಗಿವೆ ಎಂದು ವಿವರಿಸುತ್ತಾರೆ. ಈ ರೀತಿ ಸಂಕಷ್ಟಕ್ಕೆ ಸಿಲುಕಿರುವ ರೈತರ ಅನೇಕ ಗೋಳಿನ ಕಥೆಗಳನ್ನು ರಾಜ್ಯದ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಗಳು ಹೇಳುತ್ತವೆ.

'ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ನೆರವು) ಕಾಯ್ದೆ-2020' ಕ್ಕೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿದ್ದೇ ಇಂಥ ಸಮಸ್ಯೆಗೆ ಕಾರಣ. ಕಾಯ್ದೆಗೆ ತಂದಿರುವ ತಿದ್ದುಪಡಿಯಿಂದಾಗಿ ರೈತರು ಮಾತ್ರವಲ್ಲ, ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಗಳು ಕೂಡ ಸೊರಗುತ್ತಿವೆ. ಅವುಗಳ ಆದಾಯ ಕುಸಿಯುತ್ತಿದೆ. ಪ್ರಾಂಗಣಗಳ ನಿರ್ವಹಣೆಗಾಗಿ ಸಮಿತಿಗಳು ಹೆಣಗಾಡುತ್ತಿವೆ.

ರೈತರ ಹೋರಾಟಕ್ಕೆ ಮಣಿದು ಕಾಯ್ದೆ ವಾಪಸ್: ಮೂರು ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತಂದ ಕೇಂದ್ರ ಸರ್ಕಾರ, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿತು. ಈ ಸಂಬಂಧ 2020ರ ಸೆಪ್ಟೆಂಬರ್ 27ರಂದು ಅಧಿಸೂಚನೆ ಹೊರಡಿಸಿತು. ರೈತರಿಗೆ ವಿಸ್ತೃತ ಮಾರುಕಟ್ಟೆ ಒದಗಿಸುವುದು ಹಾಗೂ ಅವರ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಸಿಗುವಂತೆ ಮಾಡುವುದು ತಿದ್ದುಪಡಿಯ ಉದ್ದೇಶ ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಆದರೆ, ಈ ತಿದ್ದುಪಡಿ ವಿರುದ್ಧ ದೇಶದಾದ್ಯಂತ ರೈತರಿಂದ ಭಾರಿ ಪ್ರತಿಭಟನೆ ನಡೆಯಿತು. ದೆಹಲಿಯ ಗಡಿಗಳನ್ನು ಬಂದ್ ಮಾಡಿದ್ದ ರೈತರು, ವರ್ಷಗಟ್ಟಲೆ ಮಳೆ-ಬಿಸಿಲು-ಚಳಿ ಎನ್ನದೇ ಪ್ರತಿರೋಧ ವ್ಯಕ್ತಪಡಿಸಿದರು. ಮೂರು ಕೃಷಿ ಕಾಯ್ದೆಗಳಿಗೆ ತಂದಿದ್ದ ತಿದ್ದುಪಡಿಯನ್ನು ಹಿಂಪಡೆಯುವಂತೆ ಹಿಡಿದ ಪಟ್ಟನ್ನು ಸಡಿಲಿಸಲಿಲ್ಲ. ವಿಶ್ವದ ಅನೇಕ ನಾಯಕರು, ಹೋರಾಟಗಾರರು, ಕೃಷಿತಜ್ಞರೂ ರೈತರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದ್ದರು. ಕೊನೆಗೆ, ರೈತರ ಪ್ರತಿಭಟನೆಗೆ ಮಣಿದ ಕೇಂದ್ರ ಸರ್ಕಾರ, ಈ ಕಾಯ್ದೆಗಳನ್ನು ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಮಾಡಿ 2021ರ ನವೆಂಬರ್ 19ರಂದು ಹಿಂಪಡೆಯಿತು. ಆದರೆ, ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿ ಮಾತ್ರ ಈ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆದಿಲ್ಲ. ಹೀಗಾಗಿ ರಾಜ್ಯದ 167 ಎಪಿಎಂಸಿಗಳ ಸಂಕಷ್ಟ ಮುಂದುವರಿದಿದೆ. ಇದೇ ವರ್ಷದ ಜೂನ್ 15ರ ಸಚಿವ ಸಂಪುಟ ಸಭೆಯಲ್ಲಿ ಈ ಕಾಯ್ದೆ ವಾಪಸ್ ಪಡೆಯುವ ನಿರ್ಧಾರವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಆದರೆ ಅಧಿವೇಶನದಲ್ಲಿ ಕಾಯ್ದೆಗೆ ತಿದ್ದುಪಡಿ ತಂದು, ಎಪಿಎಂಸಿ ಪುನಶ್ಚೇತನವಾಗಬೇಕು ಮತ್ತು ಹಣ ಕಳೆದುಕೊಂಡ ರೈತರಿಗೆ ನ್ಯಾಯ ಸಿಗಲು ಇನ್ನಷ್ಟು ದಿನ ಕಾಯಬೇಕಾಗುತ್ತದೆ.

ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಿರುವ ವ್ಯಾಪಾರಿಗಳು, ಹಣ ಸಂದಾಯ ಮಾಡಿಲ್ಲ ಎಂಬ ಆರೋಪಗಳು ವ್ಯಾಪಕವಾಗಿವೆ. 'ರೈತರನ್ನು ವಂಚಿಸಿದ್ದಾರೆ ಎನ್ನಲಾದ ವ್ಯಾಪಾರಿಗಳ ವಿರುದ್ಧ ಕೆಲ ಜಿಲ್ಲೆಗಳಲ್ಲಿ ಎಫ್‌ಐಆರ್‌ಗಳೂ ದಾಖಲಾಗಿವೆ. ಇಂತಹ ಪ್ರಕರಣಗಳ ಕುರಿತು ಪೊಲೀಸ್ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ರೈತರಿಗೆ ಹಣ ಸಿಗುವಂತೆ ಮಾಡಬೇಕು' ಎಂದು ರೈತ ಮುಖಂಡರು ಒತ್ತಾಯಿಸುತ್ತಾರೆ.

ಕಾಯ್ದೆ ಏನು ಹೇಳುತ್ತದೆ: 'ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ನೆರವು) ಕಾಯ್ದೆ–2020'ಕ್ಕೆ ತಿದ್ದುಪಡಿ ತರಲಾಗಿದ್ದು, ಇದರಡಿ ರೈತರಿಗೆ ಎಪಿಎಂಸಿಗಳ ಹೊರಗಡೆಯೂ ತಮ್ಮ ಉತ್ಪನ್ನ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಈ ಕಾಯ್ದೆಯ ಸೆಕ್ಷನ್ 3ರ ಪ್ರಕಾರ, ರೈತರು ತಮ್ಮ ಉತ್ಪನ್ನಗಳನ್ನು ರಾಜ್ಯದೊಳಗೆ ಹಾಗೂ ನೆರೆ ರಾಜ್ಯಗಳಲ್ಲಿ ಮಾರಾಟ ಮಾಡಬಹುದು. ಸೆಕ್ಷನ್ 4(3)ರ ಅನ್ವಯ, ರೈತರ ಜೊತೆ ವಹಿವಾಟು ನಡೆಸುವ ವ್ಯಾಪಾರಸ್ಥರು, ರೈತರಿಗೆ ಕೊಡಬೇಕಿರುವ ಹಣವನ್ನು ಅದೇ ದಿನ ಅಥವಾ ಗರಿಷ್ಠ ಮೂರು ಕೆಲಸದ ದಿನಗಳಲ್ಲಿ ಪಾವತಿಸಬೇಕು.

ಕಾಯ್ದೆಯ ತಿದ್ದುಪಡಿಗೂ ಮುನ್ನ, ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರವನ್ನು ಮಾರುಕಟ್ಟೆಯ ಪ್ರಾಂಗಣದಲ್ಲಿಯೇ ನಡೆಸಬೇಕು ಎಂದು ಕಾಯ್ದೆಯ ಕಲಂ 8(2)ರಡಿ ನಿರ್ಬಂಧ ಇತ್ತು. ತಾಲ್ಲೂಕಿನಾದ್ಯಂತ ಈ ಸಮಿತಿಗಳು ವ್ಯಾಪ್ತಿ ಹೊಂದಿದ್ದವು. ಅಲ್ಲದೇ, ಈ ನಿರ್ಬಂಧ ಉಲ್ಲಂಘಿಸಿದವರಿಗೆ ಕಲಂ 117ರಡಿ ದಂಡ ಹಾಗೂ ಸಜೆ ವಿಧಿಸಲು ಕೂಡ ಅವಕಾಶ ಇತ್ತು.

ತಿದ್ದುಪಡಿಯಿಂದಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿಯಂತ್ರಣವು ಆಯಾ ಪ್ರಾಂಗಣಗಳಿಗೆ ಸೀಮಿತಗೊಂಡಿದೆ. ಅದೇ ಪ್ರಾಂಗಣದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬೇಕು ಎಂಬ ನಿರ್ಬಂಧ ತೆರವುಗೊಂಡಿದೆ. ಕಾಯ್ದೆಯ ಕಲಂ 8(2) ಹಾಗೂ ಕಲಂ 117 ಅನ್ನು ಕೈಬಿಡಲಾಗಿದೆ. ಹೀಗಾಗಿ ಉಲ್ಲಂಘನೆಗೆ ವಿಧಿಸುತ್ತಿದ್ದ ದಂಡ ಹಾಗೂ ಸಜೆ ಈಗ ಇಲ್ಲ. ವ್ಯಾಪಾರಿಗಳಿಗೆ ಭಯವೂ ಇಲ್ಲ.

ಅಕ್ಕಿ, ಕೊಬ್ಬರಿ ವಹಿವಾಟು ಕುಸಿತ: ಈ ಹಿಂದೆ ಹೆಚ್ಚು ಭತ್ತ ಬೆಳೆಯುತ್ತಿದ್ದ ದಾವಣಗೆರೆ ಜಿಲ್ಲೆಯ ರೈತರು ಈಗ ಅಡಿಕೆಗೆ ಮಾರು ಹೋಗಿದ್ದಾರೆ. 'ಕಲ್ಪತರು ನಾಡು' ಎಂದು ಪ್ರಸಿದ್ಧಿಯಾಗಿರುವ ತುಮಕೂರು, ಕೊಬ್ಬರಿ ವಹಿವಾಟಿಗೂ ಖ್ಯಾತಿ. ಈಗ ಜಿಲ್ಲೆಯಲ್ಲಿನ ಎಪಿಎಂಸಿ ಪ್ರಾಂಗಣಗಳಲ್ಲಿ ಕೊಬ್ಬರಿ ವಹಿವಾಟು ಕುಸಿದಿದೆ.

ದಾವಣಗೆರೆ ಜಿಲ್ಲೆಯಲ್ಲಿ ರೈತರು ಎಪಿಎಂಸಿ ಪ್ರಾಂಗಣಕ್ಕೆ ಭತ್ತ ತರುವುದು ಕೂಡ ಕಡಿಮೆಯಾಗಿದೆ. ತಿದ್ದುಪಡಿ ಕಾಯ್ದೆ ಪರಿಣಾಮದಿಂದಾಗಿ ರೈತರು ನೇರವಾಗಿ ಅಕ್ಕಿ ಗಿರಣಿಗಳಿಗೆ ತಮ್ಮ ಕೃಷಿ ಉತ್ಪನ್ನ ಮಾರಾಟ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ವಿವರಿಸುತ್ತಾರೆ.

ರಾಯಚೂರು ಜಿಲ್ಲೆಯ ಹಾಗೂ ಗಂಗಾವತಿ ಪ್ರಾಂಗಣದ ಪರಿಸ್ಥಿತಿ ಭಿನ್ನವಾಗಿಲ್ಲ. ಎಪಿಎಂಸಿ ತಿದ್ದುಪಡಿ ಕಾಯ್ದೆಯಿಂದ ಅನೇಕ ದೊಡ್ಡ ರೈತರು ಭತ್ತವನ್ನು ನೇರವಾಗಿ ಮಿಲ್‌ಗಳಿಗೆ ಮಾರಾಟ ಮಾಡುತ್ತಿದ್ದಾರೆ. ಕೇವಲ 100ರಿಂದ 300 ಚೀಲ ಮಾರಾಟ ಮಾಡುವ ರೈತರು ಮಾತ್ರ ಎಪಿಎಂಸಿಯಲ್ಲಿ ಮಾರಾಟ ಮಾಡುತ್ತಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ತುಮಕೂರು ಎಪಿಎಂಸಿಗೆ ಕೊಬ್ಬರಿ, ಹುಣಸೆ ಹಣ್ಣು ಹಾಗೂ ಇತರೆ ಪದಾರ್ಥಗಳ ಆವಕ ಪ್ರಮಾಣ ಗಣನೀಯವಾಗಿ ಕುಸಿತ ಕಂಡಿದ್ದು, ದಿನಗೂಲಿ ಕಾರ್ಮಿಕರು, ಹಮಾಲಿಗಳಿಗೆ ಕೆಲಸ ಇಲ್ಲದಂತಾಗಿದೆ. ಬೇರೆ ಉದ್ಯೋಗದ ಕಡೆ ಮುಖ ಮಾಡುತ್ತಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ತೆಂಗನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದು ಹಿಂದಿನ ವರ್ಷಗಳಲ್ಲಿ ಕೊಬ್ಬರಿ ಮಾರಾಟಕ್ಕೆ ತಿಪಟೂರು ಎಪಿಎಂಸಿಯನ್ನೇ ರೈತರು ಅವಲಂಬಿಸಿದ್ದರು. ಜಿಲ್ಲೆಯಷ್ಟೇ ಅಲ್ಲದೆ ಪಕ್ಕದ ಮಂಡ್ಯ ಹಾಗೂ ಹಾಸನ ಜಿಲ್ಲೆಯ ರೈತರೂ ಕೊಬ್ಬರಿ ಹೊತ್ತು ಬರುತ್ತಿದ್ದರು. ಬುಧವಾರ, ಶನಿವಾರ ನಡೆಯುವ ಹರಾಜು ಸಮಯದಲ್ಲಿ ಕಾಲಿಡಲೂ ಜಾಗವಿಲ್ಲದಷ್ಟು ಮಾರುಕಟ್ಟೆ ತುಂಬಿ ತುಳುಕುತಿತ್ತು. ಹೊಸ ಕಾಯ್ದೆ ಜಾರಿ ನಂತರ ರೈತರು ಎಲ್ಲಿ ಬೇಕಾದರೂ ಕೊಬ್ಬರಿ ಮಾರಾಟ ಮಾಡಬಹುದಾಗಿದ್ದು, ಮಾರುಕಟ್ಟೆಯತ್ತ ಸುಳಿಯುತ್ತಿಲ್ಲ.

ಆದಾಯಕ್ಕೆ ಪೆಟ್ಟು: ಕಾಯ್ದೆಯ ತಿದ್ದುಪಡಿಗೂ ಮುನ್ನ, ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಮೊತ್ತದ ಮೇಲೆ ಖರೀದಿದಾರರಿಂದ ಶೇ 1.5ರಷ್ಟು ಶುಲ್ಕ ಸಂಗ್ರಹಿಸಲಾಗುತ್ತಿತ್ತು. ಹಣ್ಣು, ತರಕಾರಿ, ಹೂವಿನಂತಹ ಉತ್ಪನ್ನಗಳ ವಹಿವಾಟಿನ ಮೊತ್ತದ ಮೇಲೆ ಶೇ 1ರಷ್ಟು ಶುಲ್ಕ ಸಂಗ್ರಹಿಸಲು ಸಮಿತಿಗಳಿಗೆ ಅವಕಾಶ ಇತ್ತು.

ಕಾಯ್ದೆಗೆ ತಿದ್ದುಪಡಿ ತಂದ ನಂತರ ಈ ಶುಲ್ಕವನ್ನು ಶೇ 0.60ಕ್ಕೆ ನಿಗದಿ ಮಾಡಲಾಗಿದೆ. ಇದು ಪ್ರಾಂಗಣದಲ್ಲಿ ನಡೆಯುವ ವಹಿವಾಟಿಗೆ ಮಾತ್ರ ಅನ್ವಯವಾಗುತ್ತದೆ. ಇದರಿಂದಾಗಿ ಮಾರುಕಟ್ಟೆ ಸಮಿತಿಗಳ ಶುಲ್ಕ ಸಂಗ್ರಹಣೆ ಗಣನೀಯವಾಗಿ ಕಡಿಮೆಯಾಗಿದೆ. ಬಹಳಷ್ಟು ವಹಿವಾಟು ಹೊರಗೆ ನಡೆಯುತ್ತಿರುವುದೇ ಎಪಿಎಂಸಿಗಳ ಆದಾಯ ಕುಸಿಯಲು ಪ್ರಮುಖ ಕಾರಣವಾಗಿದೆ. ಇನ್ನು, ವರ್ತಕರು ಹೆಸರಿಗೆ ಮಾತ್ರ ಪ್ರಾಂಗಣದಲ್ಲಿ ಒಂದು ಅಂಗಡಿ ತೆರೆಯುತ್ತಾರೆ. ಕೃಷಿ ಉತ್ಪನ್ನಗಳ ಖರೀದಿಯನ್ನು ಹೊರಗೆ ನಡೆಸುತ್ತಾರೆ. ಇದು ಮತ್ತೊಂದು ರೀತಿಯಲ್ಲಿ ಎಪಿಎಂಸಿಗಳ ಆದಾಯಕ್ಕೆ ಪೆಟ್ಟು ನೀಡುತ್ತಿದೆ ಎಂದು ಮೂಲಗಳು ಹೇಳುತ್ತವೆ.

'ಇನ್ನೂ ಕೆಲ ಸಂದರ್ಭಗಳಲ್ಲಿ, ಕೆಲ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ತೆಗೆದುಕೊಂಡು ಎಪಿಎಂಸಿಗಳತ್ತ ಹೋಗುತ್ತಾರೆ. ಅವರು ಇನ್ನು ಪ್ರಾಂಗಣವನ್ನೇ ತಲುಪಿರುವುದಿಲ್ಲ, ಅವರನ್ನು ಹೊರಗಡೆ ಇರುವ ವರ್ತಕರತ್ತ ಕಳುಹಿಸುವ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿದೆ' ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸುತ್ತಾರೆ.

'ಕೆಲ ಅಡಿಕೆ ಬೆಳೆಗಾರರು ಜಿಎಸ್‌ಟಿ ತಪ್ಪಿಸುವ ಸಲುವಾಗಿ ಮುಕ್ತ ಮಾರುಕಟ್ಟೆ ಬೇಕು ಎಂಬ ವಾದ ಮಂಡಿಸುತ್ತಿದ್ದಾರೆ. ಹೊರಗಡೆ ವಹಿವಾಟು ನಡೆಸಿದರೆ, ಬಿಲ್‌ನಲ್ಲಿ ವ್ಯತ್ಯಾಸ ಮಾಡಿ, ಆ ಮೂಲಕ ಜಿಎಸ್‌ಟಿ ತಪ್ಪಿಸಬಹುದು ಎಂಬುದು ಅವರ ಲೆಕ್ಕಾಚಾರ' ಎಂದೂ ಈ ಅಧಿಕಾರಿ ಆರೋಪಿಸುತ್ತಾರೆ.

ನಿರ್ವಹಣೆ ಕಷ್ಟ: ಮೂರು ವರ್ಷಗಳಲ್ಲಿ ಎಪಿಎಂಸಿಗಳಿಗೆ ಕೃಷಿ ಉತ್ಪನ್ನಗಳ ಆವಕ ಇಳಿದಿದ್ದು, ಪರಿಣಾಮವಾಗಿ ಶುಲ್ಕ ಸಂಗ್ರಹಣೆಯೂ ಕಡಿಮೆಯಾಗಿದೆ. 100ಕ್ಕೂ ಹೆಚ್ಚು ಮಾರುಕಟ್ಟೆ ಸಮಿತಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಸ್ವಚ್ಛತೆ, ಭದ್ರತೆ ಸೇರಿದಂತೆ ಇತರ ಮೂಲಸೌಕರ್ಯಗಳ ನಿರ್ವಹಣೆಗೂ ತೊಂದರೆಯಾಗುತ್ತಿದೆ ಎಂದು ವಿವರಿಸುತ್ತಾರೆ.

ಈ ಮೊದಲು ರಾಯಚೂರು ಎಪಿಎಂಸಿಯ ವಾರ್ಷಿಕ ವರಮಾನ ₹ 8 ಕೋಟಿ ಇತ್ತು. ತಿದ್ದುಪಡಿ ಕಾಯ್ದೆ ಜಾರಿ ನಂತರ ₹ 3 ಕೋಟಿಗೆ ಇಳಿದಿದೆ. ಹುಬ್ಬಳ್ಳಿ ಎಪಿಎಂಸಿಯಲ್ಲಿ ವಾರ್ಷಿಕವಾಗಿ ₹ 10 ಕೋಟಿಯಿಂದ ₹ 11 ಕೋಟಿಯವರೆಗೆ ಸೆಸ್ ಸಂಗ್ರಹವಾಗುತ್ತಿತ್ತು. ಈಗ ₹ 6.5 ಕೋಟಿಯಿಂದ ₹ 7 ಕೋಟಿಯಷ್ಟು ಸಂಗ್ರಹವಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

'ಬೆಳಗಾವಿ ಜಿಲ್ಲೆಯ ಎಪಿಎಂಸಿಗಳ ಆದಾಯ 2019–20ರಲ್ಲಿ ₹15.16 ಕೋಟಿಯಷ್ಟಿತ್ತು. ಅದು ಈಗ ₹2.88 ಕೋಟಿಗೆ ಇಳಿದಿದೆ. ಕೆಲವು ಎಪಿಎಂಸಿಗಳಲ್ಲಿ ವಹಿವಾಟು ತೀರಾ ಕುಸಿದಿದೆ' ಎಂದು ಕೃಷಿ ಮಾರಾಟ ಇಲಾಖೆ ಉಪನಿರ್ದೇಶಕ ಬಿ.ಆರ್.ಜಾಲಿಬೇರಿ ಹೇಳುತ್ತಾರೆ.

ದಾವಣಗೆರೆ ಎಪಿಎಂಸಿಯಲ್ಲಿ ವರ್ಷಕ್ಕೆ ₹2 ಕೋಟಿ ಸಂಗ್ರಹವಾಗುತ್ತಿದ್ದು, ನಿರ್ವಹಣೆಗೆ ₹2.50 ಕೋಟಿ ಅಗತ್ಯವಿದೆ. ಜಗಳೂರು, ಹೊನ್ನಾಳಿ, ಹರಿಹರ ಎಪಿಎಂಸಿಗಳಲ್ಲಿ ಸಂಗ್ರಹವಾಗುತ್ತಿರುವ ಸೆಸ್ ಸಂಗ್ರಹವು ಅಲ್ಲಿನ ಭದ್ರತಾ ಸಿಬ್ಬಂದಿಗೆ ಸಂಬಳ ನೀಡುವುದಕ್ಕೂ ಸಾಲುತ್ತಿಲ್ಲ. ಚನ್ನಗಿರಿ ಎಪಿಎಂಸಿಯಲ್ಲಿ ತೋಟ ಉತ್ಪನ್ನಗಳ ಅಡಿಕೆ ಮಾರುಕಟ್ಟೆ ಸಂಘ (ತುಮ್ಕೋಸ್) ಹಾಗೂ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘಗಳು ಇರುವುದರಿಂದ ಅಲ್ಲಿ ಸಮಸ್ಯೆ ಇಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ರಾಯಚೂರು ಎಪಿಎಂಸಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳಿಲ್ಲ. ಶುದ್ಧ ಕುಡಿಯುವ ನೀರಿಲ್ಲ. ರೈತರು ಎಪಿಎಂಸಿಯಲ್ಲಿ ಉಳಿದುಕೊಳ್ಳಲು ವ್ಯವಸ್ಥೆಯಿಲ್ಲ. ರೈತ ಭವನ ನಿರ್ಮಿಸಿದರೂ ವಿಶ್ರಾಂತಿಗಾಗಿ ರೈತರಿಗೆ ನೀಡುತ್ತಿಲ್ಲ. ಈ ಅವ್ಯವಸ್ಥೆ ಬಗ್ಗೆ ಕೇಳಿದರೆ, ಈ ಕಟ್ಟಡ ಇನ್ನೂ ಉದ್ಘಾಟನೆಯಾಗಿಲ್ಲ ಎನ್ನುವ ಕುಂಟುನೆಪವನ್ನು ಅಧಿಕಾರಿಗಳು ಹೇಳುತ್ತಾರೆ.

ಹಾವೇರಿ ಜಿಲ್ಲೆಯ ಎಪಿಎಂಸಿಗಳ ಸ್ಥಿತಿ ಇನ್ನೂ ಚಿಂತಾಜನಕವಾಗಿದೆ. ಕಚೇರಿ ವಿದ್ಯುತ್ ಮತ್ತು ನೀರಿನ ಶುಲ್ಕ ಪಾವತಿಸಲು ಹಣವಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಗುತ್ತಿಗೆ ಆಧಾರದ ಮೇಲೆ ದುಡಿಯುವ ತೂಕದವರು, ಭದ್ರತಾ ಸಿಬ್ಬಂದಿ, ಕಸ ಗುಡಿಸುವವರಿಗೂ ಹಣ ಕೊಡಲು ಎಪಿಎಂಸಿಯಿಂದ ಆಗುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಹುಬ್ಬಳ್ಳಿ ಎಪಿಎಂಸಿ ಪ್ರಾಂಗಣದಲ್ಲಿ ರಸ್ತೆ ನಿರ್ಮಾಣ, ಕುಡಿಯುವ ನೀರು– ಶೌಚಾಲಯ ಸೇರಿದಂತೆ ವಿವಿಧ ಮೂಲಸೌಕರ್ಯಗಳ ಕಾಮಗಾರಿಗಳು ಕುಂಠಿತಗೊಂಡಿವೆ. ಹಮಾಲರಿಗೆ ರೂಪಿಸಿದ್ದ ಗೃಹ ನಿರ್ಮಾಣ ಯೋಜನೆ ನಿಂತುಹೋಗಿದೆ ಎಂದು ಹೇಳುವ ಮೂಲಕ ಅಧಿಕಾರಿಗಳು ಸಮಿತಿಯ ಆರ್ಥಿಕ ದುಃಸ್ಥಿತಿಯನ್ನು ತೆರೆದಿಡುತ್ತಾರೆ.

ತುಮಕೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಕುಡಿಯುವ ನೀರಿಗೆ ಹೋಟೆಲ್‌ಗಳ ಮೊರೆ ಹೋಗುತ್ತಿದ್ದಾರೆ. ಮಾರುಕಟ್ಟೆ ಆವರಣದಲ್ಲಿರುವ ಶೌಚಾಲಯಕ್ಕೆ ಬೀಗ ಹಾಕಲಾಗಿದೆ. ಇಲ್ಲಿಗೆ ಬರುವ ರೈತರ ವಿಶ್ರಾಂತಿಗೆ ಸೂಕ್ತ ಆಸನಗಳ ವ್ಯವಸ್ಥೆ ಇಲ್ಲ. ಖಾಲಿ ಸ್ಥಳಗಳು ಕಸದ ತೊಟ್ಟಿಗಳಾಗಿ ಬದಲಾಗಿವೆ. ಎಪಿಎಂಸಿ ಮಾರುಕಟ್ಟೆ ಅವ್ಯವಸ್ಥೆಯ ತಾಣವಾಗಿ ಮಾರ್ಪಟ್ಟಿದೆ.

ಎಪಿಎಂಸಿ ಸ್ವತ್ತುಗಳ ಮೇಲೆ ಕಣ್ಣು: ಕಾಯ್ದೆ ತಿದ್ದುಪಡಿಯಾಗಿರುವ ಕಾರಣ ಸಹಜವಾಗಿಯೇ ಎಪಿಎಂಸಿ ಪ್ರಾಂಗಣಕ್ಕೆ ಕೃಷಿ ಉತ್ಪನ್ನಗಳ ಆವಕದಲ್ಲಿ ಗಣನೀಯ ಇಳಿಕೆಯಾಗಿದೆ. ಈ ಎಲ್ಲ ವಿದ್ಯಮಾನಗಳು ಎಪಿಎಂಸಿಗಳಿಗೆ ಮತ್ತೊಂದು ರೀತಿಯ ಸಂಕಷ್ಟ ತಂದೊಡ್ಡಿವೆ. ಸಾಕಷ್ಟು ಎಪಿಎಂಸಿ ಪ್ರಾಂಗಣಗಳು ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿವೆ. ದೊಡ್ಡ ಪ್ರಾಂಗಣ ಹಾಗೂ ಖಾಲಿ ಜಾಗ ಹೊಂದಿವೆ. ಈಗ, ವಹಿವಾಟು ಕುಸಿದಿರುವ ಕಾರಣ, ಈ ಖಾಲಿ ಜಾಗ, ಉಗ್ರಾಣಗಳನ್ನು ತಮ್ಮ ಬಳಕೆಗೆ ನೀಡುವಂತೆ ಕೋರಿ ವಿವಿಧ ಇಲಾಖೆಗಳು ಒತ್ತಡ ಹೇರಲು ಆರಂಭಿಸಿವೆ ಎಂದು ಮೂಲಗಳು ಹೇಳುತ್ತವೆ.

ಕೋರ್ಟ್, ಕಚೇರಿ, ಆಸ್ಪತ್ರೆಗಳನ್ನು ನಿರ್ಮಿಸಲು ಜಾಗ ನೀಡಬೇಕು ಎಂಬ ಬೇಡಿಕೆಗಳು ಹೆಚ್ಚುತ್ತಿವೆ. ಒಂದೊಮ್ಮೆ ಈ ವಿಶಾಲ ಜಾಗ, ಕಟ್ಟಡಗಳು ಕೈಬಿಟ್ಟರೆ ಮತ್ತೆ ಅವುಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವುದೇ ಹೇಗೆ? ಒಂದು ವೇಳೆ, ತಿದ್ದುಪಡಿ ಕಾಯ್ದೆ ಅಧಿಕೃತವಾಗಿ ರದ್ದಾದ ನಂತರ ಮತ್ತೆ ಎಪಿಎಂಸಿಗಳಲ್ಲಿ ವಹಿವಾಟು ಚೇತರಿಸಿಕೊಳ್ಳುತ್ತದೆ. ಆಗ ಜಾಗದ ಅಭಾವ ಎದುರಾಗುತ್ತದೆ ಎಂದು ಇವೇ ಮೂಲಗಳು ಹೇಳುತ್ತವೆ.

ಇನ್ನೊಂದು ಅಪಾಯವನ್ನೂ ಅಲಕ್ಷಿಸುವಂತಿಲ್ಲ. ಒಂದು ವೇಳೆ, ಕಾರ್ಪೊರೇಟ್ ಕಂಪನಿಗಳ ಒತ್ತಡಕ್ಕೆ ಒಳಗಾಗಿ, ಎಪಿಎಂಸಿ ಪ್ರಾಂಗಣಗಳಲ್ಲಿನ ಉಗ್ರಾಣಗಳನ್ನು, ಖಾಲಿ ಇರುವ ಜಾಗಗಳನ್ನು ಅವುಗಳಿಗೆ ನೀಡಿದ್ದೇ ಆದಲ್ಲಿ ಸಂಕಷ್ಟ ಮತ್ತಷ್ಟೂ ಹೆಚ್ಚುತ್ತದೆ ಎಂಬ ಆತಂಕವನ್ನೂ ಅಧಿಕಾರಿಗಳು ವ್ಯಕ್ತಪಡಿಸುತ್ತಾರೆ.

ದಿನಗೂಲಿಗಳಿಗೂ ಸಂಕಷ್ಟ: ಈ ಕೃಷಿ ಕಾಯ್ದೆಗೆ ತಿದ್ದುಪಡಿ ತಂದಿರುವುದು ದಿನಗೂಲಿಗಳ ದುಡಿಮೆ ಮೇಲೆಯೂ ಪರಿಣಾಮವನ್ನುಂಟು ಮಾಡಿದೆ.

'ವಹಿವಾಟು ಕುಸಿದಿರುವುದರಿಂದ ದಿನಗೂಲಿ/ ಹಮಾಲರಿಗೆ ಮೊದಲಿನಷ್ಟು ಕೆಲಸ ಇಲ್ಲದಂತಾಗಿದೆ. ಮುಂಚೆ ದಿನವೊಂದಕ್ಕೆ ₹ 500ರಿಂದ ₹ 700ವರೆಗೆ ಗಳಿಸುತ್ತಿದ್ದವರಿಗೆ ಇವತ್ತು ₹ 100 ಕೂಡ ಸಿಗುತ್ತಿಲ್ಲ. ಕೆಲವರು ಕೆಲಸ ಹುಡುಕಿಕೊಂಡು ಪಕ್ಕದ ಮಹಾರಾಷ್ಟ್ರದ ಸೊಲ್ಲಾಪುರ, ಪುಣೆ, ಮುಂಬೈಗೆ ಹೋಗಿದ್ದಾರೆ' ಎಂದು ಹುಬ್ಬಳ್ಳಿ ಎಪಿಎಂಸಿಯ ಅಧಿಕಾರಿಯೊಬ್ಬರು ಹೇಳುತ್ತಾರೆ. ಇತರ ಎಪಿಎಂಸಿಗಳಲ್ಲಿರುವ ದಿನಗೂಲಿಗಳ ಸ್ಥಿತಿ ಇದಕ್ಕಿಂತ ಭಿನ್ನವೇನಿಲ್ಲ.

ಕಾಯ್ದೆ ತಿದ್ದುಪಡಿಯನ್ನು ಸರ್ಕಾರ ವಾಪಸ್ ಪಡೆದರೂ ಎಪಿಎಂಸಿಗೆ ಆದಾಯ ಹೆಚ್ಚಿ, ಅಲ್ಲಿನ ಪ್ರಾಂಗಣಗಳಿಗೆ ಉತ್ತಮ ಮೂಲಸೌಕರ್ಯಗಳು ಸಿಗುವಂತಾಗಬೇಕು. ಎಪಿಎಂಸಿ ಹೊರಗೆ ವ್ಯಾಪಾರ ಮಾಡಿ ಹಣ ನೀಡದೆ ಮೋಸ ಮಾಡಿದ ವ್ಯಾಪಾರಿಗಳಿಗೆ ಶಿಕ್ಷೆಯಾಗುವ ಜೊತೆಯಲ್ಲಿ ಹಣ ಕಳೆದುಕೊಂಡ ರೈತರಿಗೆ ನ್ಯಾಯ ಸಹ ಸಿಗಬೇಕು ಎನ್ನುವುದು ಹಲವು ರೈತರ ಬಲವಾದ ಬೇಡಿಕೆ. ಈ ಪ್ರಕ್ರಿಯೆಗೆ ಸರ್ಕಾರದ ವಿವಿಧ ಇಲಾಖೆಗಳು ಮನಸ್ಸು ಮಾಡಬೇಕು.

(ಮಾಹಿತಿ ವಿವಿಧ ಬ್ಯೂರೊಗಳಿಂದ)

ಏಜೆಂಟರ ಮೂಲಕ ಖರೀದಿ ಮಾಡಲಾಗುತ್ತದೆ

ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಮೇಲೆ ರಾಜ್ಯ ಸರ್ಕಾರಕ್ಕೆ ಎಪಿಎಂಸಿಯಿಂದ ಹೊರಗಿರುವ ವ್ಯಾಪಾರಸ್ಥರ ಮೇಲೆ ಯಾವುದೇ ನಿಯಂತ್ರಣ ಇಲ್ಲ. ದೊಡ್ಡ ದೊಡ್ಡ ಖರೀದಿದಾರರು ಎಪಿಎಂಸಿಗೆ ಬರುತ್ತಿಲ್ಲ. ಬರೀ ಏಜೆಂಟರ ಮೂಲಕ ಉತ್ಪನ್ನ ಖರೀದಿ ಮಾಡಲಾಗುತ್ತಿದೆ. ಏಜೆಂಟರು ಒಂದೆರಡು ಬಾರಿ ಹಣ ಕೊಟ್ಟಂತೆ ಮಾಡಿ, ರೈತರಿಗೆ ಮೋಸ ಮಾಡುತ್ತಿದ್ದಾರೆ

ರವೀಂದ್ರಗೌಡ ಪಾಟೀಲ, ರೈತ ಮುಖಂಡ, ಹಾವೇರಿ

ಸ್ಪರ್ಧಾತ್ಮಕ ಬೆಲೆ ಸಿಗದೇ ರೈತರಿಗೆ ನಷ್ಟ



ಮನೆ ಬಾಗಿಲಿಗೆ ವರ್ತಕರು ಬಂದು ಖರೀದಿ ಮಾಡುವುದರಿಂದ ರೈತರಿಗೆ ಸ್ಪರ್ಧಾತ್ಮಕ ಬೆಲೆ ಸಿಗುತ್ತಿಲ್ಲ. ಮಾರುಕಟ್ಟೆಯಲ್ಲಿ ಯಾವ ದರವಿದೆ ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ. ಎಪಿಎಂಸಿಯಲ್ಲಾದರೆ ಹರಾಜು ಪ್ರಕ್ರಿಯೆಯಲ್ಲಿ ಹೆಚ್ಚಿನ ಬೆಲೆ ಸಿಗುವ ಸಾಧ್ಯತೆ ಇರುತ್ತದೆ. ಸಾಗಾಟ ವೆಚ್ಚ ಕಡಿತ ಮಾಡುವುದಾಗಿ ಹಾಗೂ ಉತ್ಪನ್ನಗಳ ಗುಣಮಟ್ಟ ಚೆನ್ನಾಗಿಲ್ಲವೆಂದು ವ್ಯಾಪಾರಸ್ಥರು ಕಡಿಮೆ ಬೆಲೆಗೆ ಖರೀದಿಸುತ್ತಿದ್ದಾರೆ. ಇದರಿಂದ ರೈತರಿಗೆ ನಷ್ಟ ಉಂಟಾಗುತ್ತಿದೆ

ಸುರೇಶ ಕಿರೇಸೂರು, ಮಾಜಿ ಅಧ್ಯಕ್ಷ, ಹುಬ್ಬಳ್ಳಿ ಎಪಿಎಂಸಿ

ಹಳೇ ಕಾಯ್ದೆಯನ್ನೇ ಬೇಗ ಜಾರಿಗೊಳಿಸಬೇಕು



ತಿದ್ದುಪಡಿ ಕಾಯ್ದೆ ಪ್ರಕಾರ ಮಾರುಕಟ್ಟೆ ಪ್ರಾಂಗಣದ ಹೊರಗೂ ವ್ಯಾಪಾರಸ್ಥರು ಕೊಬ್ಬರಿ ಖರೀದಿಸಬಹುದಾಗಿದೆ. ಇದರಿಂದ ಸೂಕ್ತ ಬೆಲೆ ಸಿಗುತ್ತಿಲ್ಲ. ಸರ್ಕಾರ ಹಳೆ ಕಾಯ್ದೆ ಜಾರಿಗೊಳಿಸಿ ಎಲ್ಲ ಕೊಬ್ಬರಿಯು ಮಾರುಕಟ್ಟೆ ಪ್ರಾಂಗಣದಲ್ಲೇ ವ್ಯಾಪಾರವಾಗುವಂತೆ ಮಾಡಿದರೆ ಕೊಬ್ಬರಿಗೆ ನ್ಯಾಯಯುತವಾದ ಬೆಲೆ ಸಿಗುತ್ತದೆ

ಶ್ರೀಕಾಂತ್ ಕೆಳಹಟ್ಟಿ, ಬೆಲೆ ಕಾವಲು ಸಮಿತಿ ಕಾರ್ಯದರ್ಶಿ, ತಿಪಟೂರು

ಭೂತಬಂಗಲೆಯಂತಾಗಿದೆ ಬೈಕಂಪಾಡಿ ಎಪಿಎಂಸಿ ಪ್ರಾಂಗಣ!

ಮಂಗಳೂರು ನಗರದಲ್ಲಿರುವ ಎಪಿಎಂಸಿ ಪ್ರಾಂಗಣ ಬೇರೆ ರೀತಿಯ ಸಮಸ್ಯೆ ಎದುರಿಸುತ್ತಿದೆ. ಪ್ರಾಂಗಣ ನಿರ್ಮಾಣವಾಗಿ ಎರಡು ದಶಕಗಳೇ ಕಳೆದಿದ್ದರೂ, ಅದರ ಬಹುತೇಕ ಉಗ್ರಾಣಗಳು ಖಾಲಿ ಬಿದ್ದಿವೆ.

ಬೈಕಂಪಾಡಿಯಲ್ಲಿ ₹30 ಕೋಟಿ ವೆಚ್ಚದಲ್ಲಿ ಸುಮಾರು 83 ಎಕರೆಯಲ್ಲಿ ನಿರ್ಮಿಸಿರುವ ಎಪಿಎಂಸಿ ಪ್ರಾಂಗಣಕ್ಕೆ ಸುಸಜ್ಜಿತ ಸೌಕರ್ಯಗಳನ್ನು ಕಲ್ಪಿಸಲಾಗಿದ್ದರೂ ಅದರ ಬಳಕೆಗೆ ಸಗಟು ವರ್ತಕರು ಆಸಕ್ತಿಯನ್ನೇ ತೋರಿಲ್ಲ.

ಈ ಎಪಿಎಂಸಿ ಪ್ರಾಂಗಣ ರಾಷ್ಟ್ರೀಯ ಹೆದ್ದಾರಿ 166ರ ಪಕ್ಕದಲ್ಲೇ ಇದೆ. ನವಮಂಗಳೂರು ಬಂದರಿನಿಂದ ಕೇವಲ 5 ಕಿ.ಮೀ ದೂರದಲ್ಲಿದೆ. ಇಲ್ಲಿಂದ ಬಜಪೆಯ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹೆಚ್ಚೆಂದರೆ 20 ಕಿ.ಮೀ. ದೂರವಿರಬಹುದು ಅಷ್ಟೇ. ನವಮಂಗಳೂರು ಬಂದರಿಗೆ ಸಂಪರ್ಕ ಕಲ್ಪಿಸುವ ಸರಕು ಸಾಗಣೆ ರೈಲು ಮಾರ್ಗವೂ ಈ ಪ್ರಾಂಗಣದ ಪಕ್ಕದಲ್ಲೇ ಹಾದುಹೋಗಿದೆ. ನಾಲ್ಕು ವಿಧಗಳ ಸಾರಿಗೆ ಸಂಪರ್ಕ ಹೊಂದಿರುವ ಈ ಎಪಿಎಂಸಿ ಪ್ರಾಂಗಣ ಈಗ ಅಕ್ಷರಶಃ ಭೂತಬಂಗಲೆಯಂತಾಗಿದೆ.

ಜಿಲ್ಲೆಯ ಅಡಿಕೆ ವ್ಯಾಪಾರ ನಗರದ ಬಂದರು ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು. ಬಂದರಿನ ಅಡಿಕೆ ಮಂಡಿಗಳ ವರ್ತಕರು ಬೈಕಂಪಾಡಿಯ ಎಪಿಎಂಸಿಗೆ ಸ್ಥಳಾಂತರಗೊಳ್ಳಲು ಬಿಲ್‌ಕುಲ್ ಒಪ್ಪಲಿಲ್ಲ. ಉಗ್ರಾಣಗಳನ್ನು ಕ್ಯಾಂಪ್ಕೊ ಸಂಸ್ಥೆ ಹಾಗೂ ಬೆರಳೆಣಿಕೆಯ ಅಡಿಕೆ ವರ್ತಕರು ಮಾತ್ರ ಇದನ್ನು ಬಳಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಎಪಿಎಂಸಿ ಪ್ರಾಂಗಣ ನಿರ್ಮಾಣವಾದ ಬಳಿಕ ಅಡಿಕೆ ವ್ಯಾಪಾರ ಅಲ್ಲಿಗೆ ಸ್ಥಳಾಂತರವಾಗಿದೆ.




ಚಿತ್ರ: ಫಕ್ರುದ್ದೀನ್ ಎಚ್.

ಬೈಕಂಪಾಡಿ ಎಪಿಎಂಸಿ ಪ್ರಾಂಗಣ ಈಗ ಅಡಿಕೆ ವ್ಯಾಪಾರಕ್ಕೂ ಬಳಕೆಯಾಗುತ್ತಿಲ್ಲ.

ಕೋವಿಡ್ ಸಂದರ್ಭದಲ್ಲಿ ನಗರದಲ್ಲಿ ಕೇಂದ್ರೀಯ ಮಾರುಕಟ್ಟೆಯಲ್ಲಿ ಜನಸಂದಣಿ ಉಂಟಾಗುತ್ತಿತ್ತು. ಅದನ್ನು ತಪ್ಪಿಸುವ ಸಲುವಾಗಿ ಕೇಂದ್ರೀಯ ಮಾರುಕಟ್ಟೆಯಲ್ಲಿದ್ದ ಹಣ್ಣು–ತರಕಾರಿ ಮಳಿಗೆಗಳನ್ನು ಬೈಕಂಪಾಡಿಯ ಎಪಿಎಂಸಿ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿತ್ತು. ಕ್ರಮೇಣ ವರ್ತಕರಲ್ಲಿ ಬಹುತೇಕರು ತೊಕ್ಕೊಟ್ಟು ಸಮೀಪದ ಕಲ್ಲಾಪು ಎಂಬಲ್ಲಿ ನಿರ್ಮಾಣವಾದ ಖಾಸಗಿ ಮಾರುಕಟ್ಟೆಗೆ ಸ್ಥಳಾಂತರಗೊಂಡರು.

'ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದಾಗಿಯೇ ಈ ಪ್ರಾಂಗಣ ಪಾಳುಬಿದ್ದಿದೆ. ರಾಜ್ಯದ ಬೇರೆ ಬೇರೆ ಎಪಿಎಂಸಿಗಳ ಜೊತೆ ಸಂಪರ್ಕ ಸಾಧಿಸಿದ್ದೇ ಆದರೆ, ಇಲ್ಲಿಂದ ರಾಜ್ಯದ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಬಹುದು. ಕೃಷಿ ಉತ್ಪನ್ನಗಳನ್ನು ಬೇರೆ ರಾಜ್ಯಗಳಿಗೆ ರವಾನಿಸುವುದಕ್ಕೂ ಇದನ್ನು ಬಳಸಿಕೊಳ್ಳಬಹುದು' ಎನ್ನುತ್ತಾರೆ ದಕ್ಷಿಣ ಕನ್ನಡ ಜಿಲ್ಲಾ ಎಪಿಎಂಸಿಯ ಮಾಜಿ ಅಧ್ಯಕ್ಷ ಎ.ಕೃಷ್ಣರಾಜ ಹೆಗ್ಡೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 18-6-1998

● ದಳ ಬಿಕ್ಕಟ್ಟು ಶಮನಕ್ಕೆ ಇಂದು ಐವರು ವರಿಷ್ಠ ನಾಯಕರ ಸಭೆ

ಬೆಂಗಳೂರು, ಜೂನ್ 17– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ನಾಯಕತ್ವ ಬದಲಾವಣೆಗೆ ಬಿಗಿಪಟ್ಟು ಹಿಡಿದಿರುವ ಭಿನ್ನಮತೀಯರು ತಮ್ಮ ನಿಲುವನ್ನು ಬದಲಾಯಿಸದ ಕಾರಣ ಜನತಾದಳದಲ್ಲಿನ ಬಿಕ್ಕಟ್ಟು ಮುಂದುವರಿದಿದ್ದು ಪರಿಸ್ಥಿತಿ ಇತ್ಯರ್ಥ್ಯಕ್ಕಾಗಿ ನಾಳೆ ದಳದ ಐವರು ನಾಯಕರ ಸಭೆ ನಡೆಯಲಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರದ ಮಾಜಿ ಸಚಿವ ಎಸ್.ಆರ್. ಬೊಮ್ಮಾಯಿ, ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ಅಧ್ಯಕ್ಷ ಬಿ.ಎಲ್. ಶಂಕರ್ ಅವರನ್ನು ಒಳಗೊಂಡ ಐವರು ಮುಖಂಡರ ಸಭೆ ಇಂದು ರಾತ್ರಿ ನಡೆಯಬೇಕಿತ್ತು. ಆದರೆ, ಅನಿವಾರ್ಯ ಕಾರಣಗಳಿಂದಾಗಿ ಅದು ನಾಳೆ ಬೆಳಿಗ್ಗೆ 8.30ಕ್ಕೆ ಸೇರಲಿದೆ.

50 ವರ್ಷಗಳ ಹಿಂದೆ

ಸೋಮವಾರ, 18-6-1973

● ಈ ವರ್ಷ ಆರು ಲಕ್ಷ ಸುಶಿಕ್ಷಿತರಿಗೆ ಉದ್ಯೋಗ

ನವದೆಹಲಿ, ಜೂನ್ 17– ಈ ವರ್ಷ (1973–74) ಸುಮಾರು ಆರು ಲಕ್ಷ ಮಂದಿ ಸುಶಿಕ್ಷಿತ ಜನರಿಗೆ ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರಾಡಳಿತ ಪ್ರದೇಶಗಳು ರೂಪಿಸಿವೆ.

ಯೋಜನಾ ಆಯೋಗದ ವಿಶೇಷ ಉದ್ಯೋಗ ವಿಭಾಗವು ಈ ಯೋಜನೆಗಳಿಗೆ ಒಪ್ಪಿಗೆ ಕೊಟ್ಟಿದೆ. '5 ಲಕ್ಷ ಉದ್ಯೋಗ ಸೃಷ್ಟಿ ಕಾರ್ಯಕ್ರಮ'ದ ಮೇರೆಗೆ ಈ ಯೋಜನೆಗಳನ್ನು ರೂಪಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜೂನ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಮಾವಾಸ್ಯೆ ಗಂ. 10-07 ನಕ್ಷತ್ರ: ಮೃಗಶಿರಾ ಗಂ. 18-07 ಯೋಗ: ಗಂಡ 24-59 ಕರಣ: ನಾಗ ಗಂ. 10-07, ಮಿಥುನ ಮಾಸದ 03 ನೇ ದಿನ, ಮಳೆನಕ್ಷತ್ರ: ಮೃಗಶಿರ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ: 06-08 ಸೂರ್ಯಾಸ್ತ: 06-55
ಮುಸ್ಲಿಂ ದಿನಾಂಕ: 29 ಜುಲ್ಕಾಯದ್,
ಅದೃಷ್ಟ ಸಂಖ್ಯೆ : 3, 11

ಮೇಷ: ಜಾಹಿರಾತು ಸಂಸ್ಥೆಯವರಿಗೆ ವಿಶೇಷ ಆದಾಯ. ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ ಹಾಗೂ ಹೆಚ್ಚಿನ ಹಣ ಗಳಿಸುವಿರಿ. ನಿಮ್ಮೆಲ್ಲ ಆಕಾಂಕ್ಷೆಗಳ ಸಿದ್ಧಿಯಾಗಿ, ಧಾರ್ಮಿಕ ಪ್ರವೃತ್ತಿಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ.

ವೃಷಭ: ದಂತ ವೈದ್ಯರಿಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ವೃತ್ತಿಯಲ್ಲಿ ಅತೀವವಾದ ಗಮನವಿರಬೇಕಾಗುತ್ತದೆ. ಕಾರ್ಯರಂಗದಲ್ಲಿ ನಿಮ್ಮ ನಿರ್ಧಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಲಿದೆ. ಶತ್ರುಗಳ ವಿರುದ್ಧ ಜಯ ಸಾಧಿಸಬಹುದು.

ಮಿಥುನ: ಶಿಕ್ಷಣ ವೃತ್ತಿಯಲ್ಲಿರುವವರಿಗೆ ಒತ್ತಡ ವೃದ್ಧಿಯಾಗುತ್ತದೆ ಹಾಗೂ ಶೈಕ್ಷಣಿಕ ರಂಗದಲ್ಲಿನ ನಿಮ್ಮ ಚಟುವಟಿಕೆಗಳಿಂದ ಉತ್ತಮ ಹೆಸರು ಸಂಪಾದಿಸುವಿರಿ. ಮಿತ್ರರ ಜೊತೆಗೂಡಿ ಮಾಡುವ ಸಾಹಸ ಕಾರ್ಯಗಳಿಂದ ಜಯ.

ಕರ್ಕಾಟಕ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ದೊರೆಯಲಿದೆ. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಲಿದ್ದೀರಿ. ನಿಮ್ಮಲ್ಲಿದ್ದ ದುಡುಕು ಬುದ್ಧಿ ಕಡಿಮೆಯಾಗುವಂಥ ಲಕ್ಷಣ ಕಾಣುತ್ತದೆ.

ಸಿಂಹ: ಷೇರು ಮಾರುಕಟ್ಟೆ ಹಾಗೂ ಕಮಿಶನ್ ವ್ಯಾಪಾರಿಗಳು ಮುಂತಾದವರಿಗೆ ಲಾಭಾಂಶ ವೃದ್ಧಿಯಾಗಿ ಹೆಚ್ಚಿನ ಬೆಳವಣಿಗೆ ಕಾಣಬಹುದು. ಮನೆ ಕಟ್ಟುವ ನಿಮ್ಮ ಆಸೆಗೆ ಸಹೋದರರಿಂದ ಹೆಚ್ಚಿನ ಪ್ರೋತ್ಸಾಹ ಸಿಗುವುದು.

ಕನ್ಯಾ: ಹಿಂದಿನಿಂದ ಬಂದಂಥ ಆಸ್ತಿ ಸಮಸ್ಯೆಗಳು ಮಾತುಕತೆಯಿಂದ ಇತ್ಯರ್ಥವಾಗುವುದು. ಕೆಲಸದ ಹೊರೆ ಹೆಚ್ಚಾಗಿ ಮಡದಿ ಮಕ್ಕಳಿಂದ ಸಹಕಾರ ಯಾಚಿಸಬೇಕಾಗುವುದು. ಶ್ರೀ ವಿಷ್ಣುಸಹಸ್ರಮಾನ ಸ್ತೋತ್ರ ಪಠಣೆಯಿಂದ ಶ್ರೇಯಸ್ಕರ.

ತುಲಾ: ಮದುವೆಯ ವಿಚಾರದ ತೀರ್ಮಾನದ ನಂತರದಲ್ಲಿ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡಬೇಡಿ. ಹಣ್ಣುತರಕಾರಿ ವ್ಯಾಪಾರಿಗಳಿಗೆ ಉತ್ತಮ ಆದಾಯ. ರಫ್ತು ಮಾರಾಟಗಳಿಂದ ಆದಾಯ ಹೆಚ್ಚಳ.

ವೃಶ್ಚಿಕ: ಸಾಮಾಜಿಕವಾಗಿ ವರ್ತನೆಯಲ್ಲಿ ಸ್ಥಿರತೆ ಹಾಗೂ ಸಮತೋಲನ ಕಾಯ್ದುಕೊಳ್ಳಿ. ನಿಮ್ಮ ಉದ್ಯೋಗ ಬದಲಾಗುವ ಸಂಭವವಿದೆ. ರಾಜಕೀಯ ರಂಗ ಪ್ರವೇಶಿಸುವ ಇಚ್ಛೆಯನ್ನು ಸ್ನೇಹಿತರಲ್ಲಿ ವ್ಯಕ್ತಪಡಿಸಿ ಸಲಹೆ ಪಡೆದುಕೊಳ್ಳಿ.

ಧನು: ದೇಹದ ಶ್ರಮಕ್ಕೆ ತಕ್ಕಂಥ ಸಂಪಾದನೆ ಇಲ್ಲವಾದರೂ ನೆಮ್ಮದಿ ಇರಲಿದೆ. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ಸಿಗುವುದು. ಆಹಾರದಲ್ಲಿ ಗುಣಮಟ್ಟ ಮತ್ತು ಶುಚಿತ್ವವನ್ನು ಕಾಪಾಡಿ.

ಮಕರ: ಆರ್ಥಿಕ ರಂಗದಲ್ಲಿ ನೂತನವಾಗಿ ಹೂಡಿಕೆ ಮಾಡುವುದು ಉತ್ತಮವಲ್ಲ. ವಿದ್ಯುತ್ ಗುತ್ತಿಗೆದಾರರಿಗೆ ಲಾಭದಾಯಕ ಕಾಮಗಾರಿಗಳು ದೊರೆಯಲಿವೆ. ಬಂಧುಗಳಲ್ಲಿನ ಮಾತಿನ ಚಕಮಕಿ ಗೊಂದಲ ತಂದೀತು.

ಕುಂಭ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಹಾಗೂ ಅನುಭವಸ್ಥರ ಸಲಹೆ ಲಭ್ಯವಾಗಲಿದೆ. ಕೆಲವೊಂದು ಪ್ರತಿಕೂಲ ಫಲಗಳೇ ಕಾರ್ಯಕ್ಷೇತ್ರದಲ್ಲಿದ್ದರೂ ಚಿಂತಿಸುವ ಅವಶ್ಯಕತೆ ಇಲ್ಲ. ಶಾರೀರಿಕ ಆರೋಗ್ಯ ಉತ್ತಮವಾಗುವುದು.

ಮೀನ: ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಶೀಘ್ರ ಸಂಪನ್ನಗೊಳ್ಳಲಿವೆ. ಆಲಂಕಾರಿಕ ವಸ್ತುಗಳ ಮಾರಾಟದಿಂದ ಲಾಭ. ಯಂತ್ರಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಅವಕಾಶಗಳು ದೊರಕಲಿದೆ.

ಪದಬಂಧ 5353

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೈಲಿನಲ್ಲಿ ಬಂಧಿಯಾಗಿರುವುದು (4)
3.ಇತರರಿಗೆ ತಿಳಿಯಲಾಗದ ಬರಹ (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪ್ಪನ ಈ ರೂಪ ಬಲು ವಿರಳ! (4)
7.ಜರೂರಾಗಿ ಜನರು ಒಪ್ಪಿಸಿದ ಕಾಣಿಕೆ! (3)
9.ವಶಕ್ಕೆ ಸಿಕ್ಕಿರುವ ಹೆಣ! (2)
10.ನಾಗರೀಕರು ಹಿಡಿದಿರುವ ಗುಂಜು (2)
11.ಬೀಜವನ್ನು ಬಿತ್ತುವುದು (3)
13.ವೃಕ್ಷದ ಬಳಿಯಿರುವ ಪಚ್ಚೆ (4)
14. ತಿರುಗಿಸಿ ನೋಡಿದರೂ ಇದು ಹೊಸತು! (3)
15.ಸುವಾಸನೆ ಇಲ್ಲಿದೆ (4)
16.ಜಯವನ್ನು ಬಯಸುವವನು (4)

ಮೇಲಿಂದ ಕೆಳಕ್ಕೆ
2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಮುದುಡುವಿಕೆಯು ಉಲ್ಟಾ ಆಗಿಬಿಟ್ಟಿದೆಯಲ್ಲಾ? (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ದುಃಖಾಂತವಾದ ನಾಟಕ (5)
12.ಒನಪು ತೋರಿದಾಗ ಬಂದಿರುವ ಸ್ಮರಣೆ (3)
13.ಮನದಿಂದ ಮಾಡಿಕೊಂಡಿರುವ ಅರಿಕೆ (3)

1			2	■	3			
■	■	■	4			■	■	■
5	6			■	7		8	■
■		■	■	■	■	■		■
9		■	■	■	■	■	10	
■		■	■	■	■	■		■
■	11		12	■	13			
■	■	■	14			■	■	■
15				■	16			

5352ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಭವ 3.ಇಂಚರ
5.ಜನಾನುರಾಗಿ 6.ಕಡಿ
8.ಮಾಸ 9.ಹಾವು
10.ಕಸು 14.ಮರ್ಮಭೇದಕ
15.ಡಬರಿ 16.ವಕ್ತಾರ

ಮೇಲಿಂದ ಕೆಳಕ್ಕೆ:
1.ಪ್ರವರ್ತಕ 2.ವಜನು
3.ಇಂಗಿತ 4.ರಸಾಭಾಸ
7.ಡಿಕಾವು 8.ಮಾಪಕ
9.ಹಾಯಿಗಡ 11.ಸುಕುಮಾರ
12.ಕಮರಿ 13.ಕಕವ

ಸುಡೊಕು 5739

				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5738 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್: ಬಿಪೊರ್‌ಜಾಯ್ ದುರ್ಬಲ ● 4 ಜಿಲ್ಲೆಗಳಲ್ಲಿ ಹೆಚ್ಚು ಹಾನಿ ● ಪರಿಹಾರ ಕಾರ್ಯದಲ್ಲಿ 1,127 ತಂಡ

ಚುರುಕುಗೊಂಡ ಪರಿಹಾರ ಕಾರ್ಯ

ಭುಜ್ (ಪಿಟಿಐ): ಚಂಡಮಾರುತ ಬಿಪೊರ್‌ಜಾಯ್‌ನ ತೀವ್ರ ಪರಿಣಾಮಕ್ಕೆ ಗುರಿಯಾಗಿರುವ ಕಛ್ ಜಿಲ್ಲೆ ಸೇರಿದಂತೆ ಗುಜರಾತ್‌ನ ಕರಾವಳಿ ಜಿಲ್ಲೆಗಳಲ್ಲಿ ಜನಜೀವನ ಸಹಜಸ್ಥಿತಿಗೆ ಮರಳುತ್ತಿದೆ. ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಪಡಿಸುವ ಕೆಲಸ ಭರದಿಂದ ಸಾಗಿದೆ.

ಜಖೌ ಬಂದರಿನ ಬಳಿ ಮೊದಲಿಗೆ ಚಂಡಮಾರುತ ಭೂಸ್ಪರ್ಶ ಮಾಡಿದ್ದು, ಕ್ರಮೇಣ ದುರ್ಬಲಗೊಳ್ಳುತ್ತಿದೆ. ಆದರೂ, ಉತ್ತರ ಭಾಗದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಮುಂದುವರಿಯಬಹುದು ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಕಛ್ ಜಿಲ್ಲೆಯಲ್ಲಿ ಮಳೆ ಬಹುತೇಕ ನಿಂತಿದೆ. ಗಾಳಿಯ ವೇಗವೂ ಕುಗ್ಗಿದೆ. ಚಂಡಮಾರುತದಿಂದ ಉರುಳಿದ್ದ ಮರಗಳ ತೆರವು ಹಾಗೂ ತೀವ್ರ ಹಾನಿಯಾಗಿದ್ದ ಭುಜ್, ಮಾಂಡ್ವಿ ಪಟ್ಟಣಗಳಲ್ಲಿ ವಿದ್ಯುತ್ ಸಂಪರ್ಕ ಸರಿಪಡಿಸುವ ಕಾರ್ಯ ಭರದಿಂದ ನಡೆದಿದೆ.

ಕಛ್, ದೇವ್‌ಭೂಮಿ ದ್ವಾರಕಾ, ಜಾಮ್‌ನಗರ, ಮೊರ್ಬಿ, ಜುನಾಗಢ, ಗಿರ್ ಸೋಮನಾಥ್, ರಾಜಕೋಟ್, ಪೋರಬಂದರ್ ಜಿಲ್ಲೆಗಳಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಪಡಿಸುವ ಕಾರ್ಯದಲ್ಲಿ ಸುಮಾರು 1,127 ತಂಡಗಳು ಕಾರ್ಯನಿರತವಾಗಿವೆ.

ಕಛ್ ಜಿಲ್ಲೆಯಲ್ಲಿ ವ್ಯಾಪಾರ ವಹಿವಾಟು ಚಟುವಟಿಕೆಯು ಶನಿವಾರ ಪುನರಾರಂಭವಾಗಿದೆ. ಕಛ್ ಹೊರತುಪಡಿಸಿದರೆ ದೇವ್‌ಭೂಮಿ ದ್ವಾರಕಾ, ಬನಾಸ್‌ಕಾಂತಾ, ಪಠಾಣ್‌ನಲ್ಲಿ ಅಧಿಕ ಹಾನಿಯಾಗಿದೆ. ಬನಾಸ್‌ಕಾಂತಾ, ಪಠಾಣ್‌ನಲ್ಲಿ ಶನಿವಾರವು ಉತ್ತಮ ಮಳೆಯಾಗಿದೆ. ಭಾನುವಾರ ಬೆಳಿಗ್ಗೆಯವರೆಗೂ ಕಛ್, ಮೆಹ್‌ಸಾನಾ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಬಹುದು ಎಂದೂ ಹವಾಮಾನ ಇಲಾಖೆಯು ತಿಳಿಸಿದೆ.

ಚಂಡಮಾರುತ ಭೀತಿ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ 1.09 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿತ್ತು. ಇವರಲ್ಲಿ 10,918 ಮಕ್ಕಳು, 1,152 ಗರ್ಭಿಣಿಯರು ಸೇರಿದ್ದರು ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.


ಭಾರಿ ಮಳೆ ಬಿಡುವು ನೀಡಿದ ಬಳಿಕ ಗುವಾಹಟಿಯಲ್ಲಿ ನೀರು ತುಂಬಿದ್ದ ರಸ್ತೆಯಲ್ಲೇ ಜನರು ಸಂಚರಿಸಿದರು —ಪಿಟಿಐ ಚಿತ್ರ

ಗೃಹ ಸಚಿವರಿಂದ ವೈಮಾನಿಕ ಸಮೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಜಖೌ ಬಂದರು ಸೇರಿದಂತೆ ಕಛ್ ಜಿಲ್ಲೆಯ ವಿವಿಧೆಡೆ ಚಂಡಮಾರುತ ಹಾನಿಯನ್ನು ಪರಿಶೀಲಿಸಿದರು.

ಅಲ್ಲದೆ, ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಹಿರಿಯ ಅಧಿಕಾರಿಗಳ ಜೊತೆಗೂ ಚರ್ಚಿಸಿ, ಹಾನಿಯ ವಿವರಗಳನ್ನು ಪಡೆದರು.

ಚಂಡಮಾರುತದಿಂದ ಜೀವಹಾನಿಯಾಗಿಲ್ಲ. ಇದು, ಕೇಂದ್ರ, ರಾಜ್ಯ ಸರ್ಕಾರದ ದೊಡ್ಡ ಸಾಧನೆ. ಬಾಧಿತ ಪ್ರದೇಶಗಳಲ್ಲಿ ಜೂನ್ 20ರ ಒಳಗೆ ವಿದ್ಯುತ್ ಸಂಪರ್ಕ ವ್ಯವಸ್ಥೆ ಸರಿಪಡಿಸಲಾಗುತ್ತದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಮೊದಲಿಗೆ ವೈಮಾನಿಕ ಸಮೀಕ್ಷೆ ನಡೆಸಿದ ಅವರು, ಬಳಿಕ ತಾತ್ಕಾಲಿಕ ಶಿಬಿರಗಳಿಗೂ ಭೇಟಿ ನೀಡಿದ್ದು, ಜನರಿಂದ ಸೌಲಭ್ಯಗಳ ಕುರಿತು ಮಾಹಿತಿ ಪಡೆದರು. ಸ್ವಾಮಿ ನಾರಾಯಣ ದೇವಸ್ಥಾನಕ್ಕೂ ಭೇಟಿ ನೀಡಿದ್ದರು.


ಉತ್ತರ ಸಿಕ್ಕಿಂನಲ್ಲಿ 2,400 ಪ್ರವಾಸಿಗರು ಅತಂತ್ರ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯ ಪರಿಣಾಮ ರಸ್ತೆ ತಡೆಯುಂಟಾಗಿ ಉತ್ತರ ಸಿಕ್ಕಿಂನ ಲಾಚೆನ್ ಮತ್ತು ಲಾಚುಂಗ್ ಪ್ರದೇಶದಲ್ಲಿ 60 ಮಂದಿ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ 2,400ಕ್ಕೂ ಹೆಚ್ಚು ಪ್ರವಾಸಿಗರು ಸಿಲುಕಿಕೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಈ ಪ್ರದೇಶದಲ್ಲಿ ಮೂರು ದಿನಗಳಿಂದ ಭಾರಿ ಮಳೆಯಾಗುತ್ತಿದ್ದು, ಪ್ರವಾಸಿಗರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಜಿಲ್ಲಾಡಳಿತವು 19 ಬಸ್‌ಗಳನ್ನು ಮತ್ತು 70 ಇತರ ವಾಹನಗಳನ್ನು ಕಳುಹಿಸಿದೆ' ಎಂದೂ ವಿವರಿಸಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಸಿಕ್ಕಿಂ ಪೊಲೀಸರು, ಐಟಿಬಿಪಿ ಮತ್ತು ಸೇನೆಯ ಯೋಧರು ಪ್ರವಾಸಿಗರ ಸ್ಥಳಾಂತರಕ್ಕೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಈಗಾಗಲೇ ಮೂರು ಬಸ್‌ಗಳಲ್ಲಿ ಮತ್ತು ಇತರ ಎರಡು ವಾಹನಗಳಲ್ಲಿ 123 ಪ್ರವಾಸಿಗರನ್ನು ಗ್ಯಾಂಗ್ಟಕ್‌ಗೆ ಕರೆತರಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚುಂಗ್‌ತಾಂಗ್‌ನಲ್ಲಿ ಕಡಿತಗೊಂಡ ರಸ್ತೆಯಲ್ಲಿ ವಿವಿಧ ವಾಹನ ಸಂಚಾರಕ್ಕೆ ತಡೆಯುಂಟಾಗಿದ್ದು, ಮಳೆ ನಿಂತ ಬಳಿಕವಷ್ಟೇ ದುರಸ್ತಿ ಕಾರ್ಯ ನಡೆಯಲಿದೆ ಎಂದಿದ್ದಾರೆ.


ಸಿಕ್ಕಿಂನ ಚುಂಗ್‌ತಾಂಗ್‌ನಲ್ಲಿ ಸಿಲುಕಿದ್ದ ಪ್ರವಾಸಿಗರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲು ಯೋಧರು ನೆರವಾದರು —ಪಿಟಿಐ ಚಿತ್ರ

ಮೇಘಾಲಯದಲ್ಲಿ ಭೂಕುಸಿತ: ಸಹೋದರಿಯರ ಸಾವು

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಪಶ್ಚಿಮ ಖಾಸಿ ಹಿಲ್ ಜಿಲ್ಲೆಯಾದ್ಯಂತ ಸುರಿದ ಭಾರಿ ಮಳೆ, ಭೂಕುಸಿತದಿಂದಾಗಿ ನಂಗ್‌ಸ್ಟೊಯಿನ್ ಪ್ರದೇಶದ ಮವಿಯಾಂಗ್ ಹಿಂಡೆನ್‌ಗ್ರಿಯಲ್ಲಿನ ಮನೆಯೊಂದರೊಳಗೆ ಸಿಲುಕಿದ್ದ 15 ಹಾಗೂ 10 ವರ್ಷದ ಸಹೋದರಿಯರಿಬ್ಬರು ಶನಿವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಪೂರ್ವ ಖಾಸಿ ಹಿಲ್ ಜಿಲ್ಲೆಯ ಶಿಲ್ಲಾಂಗ್ ಹೊರವಲಯದ ಹಳ್ಳಿಯ ಬಳಿಯಿರುವ ಆಳದ ಕಮರಿಗೆ ಮಂಗಳವಾರ ಸಂಜೆ ಟ್ರಕ್‌ವೊಂದು ಬಿದ್ದಿದ್ದು, ಇದರಲ್ಲಿದ್ದ ಆರು ಜನರಲ್ಲಿ ನಾಲ್ವರ ಮೃತದೇಹವನ್ನು ಹೊರ ತೆಗೆಯಲಾಗಿದೆ ಎಂದು ಸ್ಥಳೀಯ ಪೊಲೀಸರು ಹೇಳಿದ್ದಾರೆ.

ಪೂರ್ವ ಜೈಂತಿಯಾ ಹಿಲ್ ಜಿಲ್ಲೆಯಲ್ಲಿ ಮಣ್ಣು ಕುಸಿದಿದ್ದು, ಮೇಘಾಲಯದಿಂದ ಅಸ್ಸಾಂನ ಪೂರ್ವ ಭಾಗ, ಮಿಜೋರಾಂ, ತ್ರಿಪುರಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 6ರ ಸಂಪರ್ಕ ಕಡಿತಗೊಂಡಿದೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಎಂಎ) ಪೂರ್ವ ಖಾಸಿ ಹಿಲ್ಸ್ ಜಿಲ್ಲೆಯೂ ಸೇರಿದಂತೆ 7 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂಬ ಮುನ್ಸೂಚನೆ ನೀಡಿದೆ. ಸತತ 9 ದಿನಗಳಿಂದಲೂ ಭೂ ಕುಸಿತ, ಮಣ್ಣು ಕುಸಿತ, ಭಾರಿ ಮಳೆಯ ವರದಿ ದಾಖಲಾಗುತ್ತಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಂ.ವಾರ್ ತಿಳಿಸಿದ್ದಾರೆ.

ಬಿಸಿಗಾಳಿ: 34 ಸಾವು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಎರಡು ದಿನದಿಂದ ತೀವ್ರ ಬಿಸಿ ಗಾಳಿಯ ವಾತಾವರಣವಿದ್ದು 34 ಮಂದಿ ಮೃತಪಟ್ಟಿದ್ದಾರೆ. ಈ ಎಲ್ಲರೂ ಬಿಸಿಗಾಳಿ ವಾತಾವರಣದ ಕಾರಣದಿಂದಲೇ ಬಲಿಯಾ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ಹೇಳಲಾಗಿದೆ.

ವರದಿಗಳ ಪ್ರಕಾರ, ಗುರುವಾರ 23 ಜನರು ಮತ್ತು ಶುಕ್ರವಾರ 11 ಜನ ಮೃತಪಟ್ಟಿದ್ದಾರೆ. ಈ ಎಲ್ಲರೂ 50 ರಿಂದ 60 ವರ್ಷ ವಯೋಮಾನದವರು.

ಬಲಿಯಾ ಜಿಲ್ಲಾ ಮುಖ್ಯ ವೈದ್ಯಾಧಿಕಾರಿ ಡಾ. ಜಯಂತ್ ಕುಮಾರ್ ಅವರು, ಬಿಸಿಗಾಳಿಯಿಂದಲೇ ಈ ಸಾವುಗಳು ಸಂಭವಿಸಿವೆ ಎಂಬ ವರದಿಗಳನ್ನು ನಿರಾಕರಿಸಿದ್ದಾರೆ. '50–60 ವರ್ಷ ವಯಸ್ಸಿನ ಈ ಎಲ್ಲರಿಗೂ ಭಿನ್ನ ಅನಾರೋಗ್ಯ ಸಮಸ್ಯೆಗಳಿದ್ದವು. ಅವರಿಗೆ ಉತ್ತಮ ಚಿಕಿತ್ಸೆ ಒದಗಿಸಿದ್ದರೂ, ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ಹೇಳಿದರು.

ಆಸ್ಪತ್ರೆ ಸೂಪರಿಂಟೆಂಡೆಂಟ್ ಡಾ.ದಿವಾಕರ್ ಸಿಂಗ್ ಅವರು, 'ಎಲ್ಲರೂ ಅನಾರೋಗ್ಯದಿಂದ ಬಳಲುತ್ತಿದ್ದರು. ಬಿಸಿಗಾಳಿಯಿಂದ ಆರೋಗ್ಯ ಇನ್ನಷ್ಟು ಹದಗೆಟ್ಟಿತು. ರೋಗಿಗಳಿಗೆ ನೆರವಾಗುವಂತೆ ಆಸ್ಪತ್ರೆಯಲ್ಲಿ ಹವಾ ನಿಯಂತ್ರಿತ ವ್ಯವಸ್ಥೆ, ಫ್ಯಾನ್, ಕೂಲರ್ ಅನ್ನು ಒದಗಿಸಲಾಗಿತ್ತು' ಎಂದರು.

ಉತ್ತರಪ್ರದೇಶದ ಹಲವು ಜಿಲ್ಲೆಗಳಲ್ಲಿ ಕಳೆದ ಕೆಲ ದಿನಗಳಿಂದ ಬಿಸಿಗಾಳಿಯ ವಾತಾವರಣವಿದೆ. ದಿನದ ಗರಿಷ್ಠ ಉಷ್ಣಾಂಶ 42–43 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಿದೆ. ವಿದ್ಯುತ್ ಕಡಿತದ ಕಾರಣ ಗ್ರಾಮೀಣ ಭಾಗದಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.

ಜೈಸಿಂಘಾನಿ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): 2015ರ ಐಪಿಎಲ್ ಬೆಟ್ಟಿಂಗ್ ದಂಧೆ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಶಂಕಿತ ಬುಕ್ಕಿ ಅನಿಲ್ ಜೈಸಿಂಘಾನಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ತಿಳಿಸಿದೆ.

ಜೈಸಿಂಘಾನಿ ಅವರನ್ನು ಕಳೆದ ಏಪ್ರಿಲ್‌ನಲ್ಲಿ ಇ.ಡಿ ಬಂಧಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 2015ರಲ್ಲಿ ನ್ಯಾಯಾಲಯವು ಜಾಮೀನು ರಹಿತ ವಾರಂಟ್ ಜಾರಿ ಮಾಡಿತ್ತು. ಅನಂತರ ಜೈಸಿಂಘಾನಿ ವಿಚಾರಣೆ ಸಹಕರಿಸುತ್ತಿರಲಿಲ್ಲ ಎಂದು ಇ.ಡಿ ತಿಳಿಸಿದೆ.

'25ಕ್ಕೆ ಸಾಂಗ್ಲಿಯಲ್ಲಿ ಸಮಾವೇಶ: ಸಿದ್ದರಾಮಯ್ಯ ಭಾಗಿ'

ಪ್ರಜಾವಾಣಿ ವಾರ್ತೆ

ಮುಂಬೈ: 'ಸಾಂಗ್ಲಿಯಲ್ಲಿ ಇದೇ 25ರಂದು ನಡೆಯಲಿರುವ ಕಾಂಗ್ರೆಸ್‌ನ ಸಮಾವೇಶದಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳುವರು' ಎಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾನಾ ಪಟೋಲೆ ತಿಳಿಸಿದರು.

'ಸಮಾವೇಶಕ್ಕೂ ಮುನ್ನ ರ‍್ಯಾಲಿ ನಡೆಸಲು ರೂಪುರೇಷೆ ಸಿದ್ಧಪಡಿಸಿಕೊಳ್ಳುತ್ತಿದ್ದೇವೆ. ಸಭೆಯ ಬಳಿಕ ಅವರು ಪುಣೆ ಜಿಲ್ಲೆಯ ಬಾರಾಮತಿಗೂ ಭೇಟಿ ನೀಡುವ ನಿರೀಕ್ಷೆಯಿದೆ' ಎಂದು ಹೇಳಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರಲ್ಲಿ ಸಿದ್ದರಾಮಯ್ಯ ಪ್ರಮುಖರು. 2024ರಲ್ಲಿ ಮಹಾರಾಷ್ಟ್ರದಲ್ಲಿ ನಡೆಯಲಿರುವ ಲೋಕಸಭೆ ಹಾಗೂ ವಿಧಾನಸಭಾ ಚುನಾವಣಾ ಸಮಾವೇಶಗಳಲ್ಲಿ ಅವರು ಭಾಗಿಯಾಗಿ ಮಾತನಾಡಬೇಕು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಪೇಕ್ಷಿಸಿದೆ. ಈ ವಿಷಯ ಪಟೋಲೆ ನೇತೃತ್ವದಲ್ಲಿ ಶುಕ್ರವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಯಾಗಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳ ಸಾಹೇಬ್ ಥೋರಟ್, ಮಾಜಿ ಮುಖ್ಯಮಂತ್ರಿಗಳಾದ ಪೃಥ್ವಿರಾಜ್ ಚವ್ಹಾಣ್, ಅಶೋಕ್ ಚವ್ಹಾಣ್, ಸುಶೀಲ್ ಕುಮಾರ್ ಶಿಂಧೆ, ಕಾರ್ಯಾಧ್ಯಕ್ಷ ನಾಸೀಂ ಖಾನ್, ಮಾಜಿ ಅಧ್ಯಕ್ಷ ಮಾಣಿಕ್‌ರಾವ್ ಠಾಕ್ರೆ ಸಭೆಯಲ್ಲಿದ್ದರು.

ಪುರಿ: 20ರಿಂದ ಜಗನ್ನಾಥ ಉತ್ಸವ

ಪುರಿ, ಒಡಿಶಾ (ಪಿಟಿಐ): ಇಲ್ಲಿನ ಜಗನ್ನಾಥ ರಥಯಾತ್ರೆಯ ಉತ್ಸವ ಕಾರ್ಯಕ್ರಮಗಳು ಇದೇ 20ರಂದು ಆರಂಭವಾಗಲಿದ್ದು, ಸುಮಾರು 25 ಲಕ್ಷ ಭಕ್ತರು ಭೇಟಿ ನೀಡಬಹುದು ಎಂದು ದೇಗುಲ ಆಡಳಿತ ಮಂಡಳಿ ನಿರೀಕ್ಷಿಸಿದೆ.

'ರಥಯಾತ್ರೆ ಉತ್ಸವವನ್ನು ಸುವ್ಯವಸ್ಥಿತವಾಗಿ ಆಯೋಜಿಸುವ ವಿಶ್ವಾಸವನ್ನು ಮಂಡಳಿಯ ಆಡಳಿತಾಧಿಕಾರಿ ರಂಜನ್ ಕುಮಾರ್ ದಾಸ್ ವ್ಯಕ್ತಪಡಿಸಿದ್ದಾರೆ.

ನೀಟ್: ಸಮಾನ ಅಂಕವಿದ್ದರೆ ರ‍್ಯಾಂಕಿಂಗ್ ಪಟ್ಟಿ ಪರಿಷ್ಕರಣೆ


ನವದೆಹಲಿ (ಪಿಟಿಐ): ನೀಟ್‌ನಲ್ಲಿ ಸಮಾನ ಅಂಕ ಪಡೆದಿರುವ ಅಭ್ಯರ್ಥಿಗಳಿಗೆ ಅನ್ವಯಿಸುವಂತೆ ರ‍್ಯಾಂಕಿಂಗ್ ಪಟ್ಟಿ ಪರಿಷ್ಕರಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ನಿರ್ಧರಿಸಿದೆ. ಪರಿಷ್ಕರಣೆಯಲ್ಲಿ ಮೊದಲಿಗೆ ಭೌತವಿಜ್ಞಾನ ಹಾಗೂ ನಂತರ ರಸಾಯನವಿಜ್ಞಾನ, ಜೀವವಿಜ್ಞಾನ ವಿಷಯದ ಅಂಕ ಪರಿಗಣಿಸಲಾಗುತ್ತದೆ.

ಸದ್ಯದ ಮಾನದಂಡದ ಅನುಸಾರ ಮೊದಲಿಗೆ ಜೀವವಿಜ್ಞಾನ ಅಂಕ ಪರಿಗಣಿಸಿ, ನಂತರ ರಸಾಯನವಿಜ್ಞಾನ, ಭೌತವಿಜ್ಞಾನ ವಿಷಯದ ಅಂಕಗಳನ್ನು ಪರಿಗಣಿಸಲಾಗುತ್ತಿತ್ತು.

ಈ ಸಂಬಂಧ 'ಪದವಿ ವೈದ್ಯ ಶಿಕ್ಷಣ ನಿಯಮಗಳು 2023' ಕುರಿತು ಜೂನ್ 2ರಂದು ಅಧಿಸೂಚನೆ ಹೊರಡಿಸಿದ್ದು, ಮುಂದಿನ ವರ್ಷದಿಂದ ಜಾರಿಗೆ ಬರುವ ಸಾಧ್ಯತೆ ಇದೆ.

ಪರಿಷ್ಕರಣೆಯ ವೇಳೆಯು ಸಮಾನ ಅಂಕವೇ ಉಳಿದಿದ್ದ ಸಂದರ್ಭದಲ್ಲಿ ಕಂಪ್ಯೂಟರ್ ಬಳಸಿ ಡ್ರಾ ಮೂಲಕ ಮೆರಿಟ್ ನಿರ್ಧರಿಸಲಾಗುತ್ತದೆ. ಡ್ರಾ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಮಾನವನ ಹಸ್ತಕ್ಷೇಪಕ್ಕೆ ಅವಕಾಶ ಇರುವುದಿಲ್ಲ ಎಂದು ತಿಳಿಸಲಾಗಿದೆ. ಈ ವರ್ಷದ ನೀಟ್ ಪರೀಕ್ಷೆ ಫಲಿತಾಂಶವು ಜೂನ್ 13ರಂದು ಪ್ರಕಟವಾಗಿದೆ.

'ಮೋದಿ ಸರ್ಕಾರ ಸಾರ್ವಜನಿಕ ಉದ್ಯಮಗಳನ್ನು ಹಾಳುಗೆಡವಿದೆ'


ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಾರ್ವಜನಿಕ ವಲಯದ ಉದ್ಯಮಗಳನ್ನು(ಪಿಎಸ್‌ಯು) ಹಾಳುಗೆಡುವುತ್ತಿದೆ. ಆ ಮೂಲಕ ಲಕ್ಷಾಂತರ ಸರ್ಕಾರಿ ಉದ್ಯೋಗಗಳನ್ನು ಜನರಿಂದ ಕಸಿದುಕೊಳ್ಳುವ ಕೆಲಸ ಮಾಡುತ್ತಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಖರ್ಗೆ, ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. 'ಲಕ್ಷಾಂತರ ಉದ್ಯೋಗಗಳನ್ನು ಕಸಿದುಕೊಳ್ಳುವ, ಸಾರ್ವಜನಿಕ ವಲಯದ ಉದ್ಯಮಗಳನ್ನು ಹಾಳುಗೆಡವಿರುವುದು ಯಾವ ಟೂಲ್ ಕಿಟ್‌ನ ಭಾಗವಾಗಿದೆ ಎಂಬುದನ್ನು ಮೋದಿ ಹೇಳಬೇಕು' ಎಂದು ಆಗ್ರಹಿಸಿದ್ದಾರೆ.

'ಸಾರ್ವಜನಿಕ ವಲಯದ ಉದ್ಯಮಗಳು ದೇಶದ ಆರ್ಥಿಕತೆಯ ಪ್ರಮುಖ ಭಾಗವೆಂಬುವುದರಲ್ಲಿ ಮೋದಿ ಸರ್ಕಾರಕ್ಕೆ ನಂಬಿಕೆಯಿಲ್ಲ. ಕೇಂದ್ರ ಸರ್ಕಾರದ ವರ್ಚಸ್ಸು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ 'ಮೇಕ್ ಇನ್ ಇಂಡಿಯಾ' ಯೋಜನೆಯನ್ನು ತರಲಾಯಿತು. ಇದರಿಂದ ದೇಶ ಏನು ಪಡೆಯಿತು?' ಎಂದು ಪ್ರಶ್ನಿಸಿದ್ದಾರೆ.

'ಮೋದಿ ನೇತೃತ್ವದ ಸರ್ಕಾರ ಏಳು ಸಾರ್ವಜನಿಕ ವಲಯ ಉದ್ಯಮಗಳಿಂದ ಸುಮಾರು 3.84 ಲಕ್ಷ ಉದ್ಯೋಗಗಳನ್ನು ಕಸಿದುಕೊಂಡಿರುವುದು ಏಕೆ? ಕೇಂದ್ರ ಸರ್ಕಾರದಲ್ಲಿ ಮಹಿಳೆಯರ ಉದ್ಯೋಗಗಳು ಶೇ 42ರಷ್ಟು ಕಡಿಮೆಯಾಗಿರುವುದು ಯಾಕೆ? ಗುತ್ತಿಗೆ ಆಧಾರದ ಉದ್ಯೋಗಗಳು ಶೇ 88ರಷ್ಟು ಹೆಚ್ಚಳವಾಗಿರುವುದು ಹೇಗೆ' ಎಂಬ ಪ್ರಶ್ನೆಗಳನ್ನು ಅವರು ಕೇಳಿದ್ದಾರೆ.

ಟ್ವೀಟ್ ಜೊತೆಗೆ ಒಂದೂವರೆ ನಿಮಿಷಗಳ ವಿಡಿಯೊ ಹಂಚಿಕೊಂಡಿರುವ ಮಲ್ಲಿಕಾರ್ಜುನ ಖರ್ಗೆ, 2013ರಿಂದ 2022ರವರೆಗೆ ಹಲವಾರು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಆಗಿರುವ ಉದ್ಯೋಗ ನಷ್ಟದ ವಿವರಗಳನ್ನು ವಿಡಿಯೊದಲ್ಲಿ ನೀಡಿದ್ದಾರೆ.

ತಮಿಳುನಾಡು ಬಿಜೆಪಿ ಕಾರ್ಯದರ್ಶಿ ಬಂಧನ

ಮದುರೈ(ಪಿಟಿಐ): ಬಿಜೆಪಿಯ ತಮಿಳುನಾಡು ಘಟಕದ ಕಾರ್ಯದರ್ಶಿ ಎಸ್.ಜಿ.ಸೂರ್ಯ ಅವರನ್ನು ಶುಕ್ರವಾರ ತಡರಾತ್ರಿ ಪೊಲೀಸರು ಚೆನ್ನೈನಲ್ಲಿ ಬಂಧಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್‌ಗೆ ಸಂಬಂಧಿಸಿ ಸಿಪಿಎಂ ದಾಖಲಿಸಿದ್ದ ದೂರಿನನ್ವಯ ಸೂರ್ಯ ಅವರನ್ನು ಬಂಧಿಸಲಾಗಿದೆ. ಅವರ ವಿರುದ್ಧ ಐಪಿಸಿ ಹಾಗೂ ಐಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಸೂರ್ಯ ಬಂಧನವನ್ನು ಖಂಡಿಸಿದ್ದಾರೆ.

'ಡಿಎಂಕೆಯ ಮಿತ್ರರಾದ ಕಮ್ಯುನಿಸ್ಟರ ದ್ವಂದ್ವ ನಿಲುವುಗಳನ್ನು ಬಹಿರಂಗ ಮಾಡಿದ್ದಕ್ಕಾಗಿ ಸೂರ್ಯ ಅವರನ್ನು ಬಂಧಿಸಲಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

ರಾಜೀವ್ ಚಂದ್ರಶೇಖರ್ ಟೀಕೆ (ಪಣಜಿ ವರದಿ): 'ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ರಷ್ಯಾದ ಸರ್ವಾಧಿಕಾರಿ ಸ್ಟಾಲಿನ್‌ರಂತೆ ವರ್ತಿಸುತ್ತಿದ್ದಾರೆ. ಆತನಂತೆ ಈ ಸ್ಟಾಲಿನ್ ಅವರಿಗೂ ಜನರ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಬಗ್ಗೆ ಗೌರವ ಇಲ್ಲ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಟೀಕಿಸಿದ್ದಾರೆ.

ಪರೀಕ್ಷೆಗೆ ಗೈರು, ಉತ್ತರ ಪತ್ರಿಕೆ ಪ್ರತ್ಯಕ್ಷ!

ಒಂದನೇ ಪುಟದಿಂದ

ಹೊರಗಿನಿಂದ ಉತ್ತರ ಬರೆಸಿ, ನಂತರ ಸೇರ್ಪಡೆ ಮಾಡಿರುವ ಸಾಧ್ಯತೆ ಇದೆ ಎಂಬ ಶಂಕೆಯನ್ನು ಮಂಡಳಿ ವ್ಯಕ್ತಪಡಿಸಿದೆ.

‘ಪ್ರಕರಣದ ಆಂತರಿಕ ವಿಚಾರಣೆ ನಡೆದಿದೆ. ವಿಚಾರಣೆಗೆ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ನೋಟಿಸ್ ನೀಡಲಾಗಿದೆ. ಪ್ರಾಥಮಿಕ ವರದಿ ಸಿದ್ಧಪಡಿಸಿದ ನಂತರ ಮುಂದಿನ ನಡೆ ನಿರ್ಧರಿಸಲಾಗುತ್ತದೆ. ಈ ಕುರಿತು ರಾಜ್ಯ ಔಷಧ ನಿಯಂತ್ರಣ ಇಲಾಖೆಯ ಔಷಧ ನಿಯಂತ್ರಕರಿಗೂ ಪತ್ರ ಬರೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ದ್ವಿತೀಯ ಪಿಯು ವಿಜ್ಞಾನ ವಿಷಯದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಎರಡು ವರ್ಷಗಳ ಡಿ.ಫಾರ್ಮಾಕ್ಕೆ ಪ್ರವೇಶ ಪಡೆಯಬಹುದು. ಕೋರ್ಸ್ ಮುಗಿಸಿದ ನಂತರ ಸಾಮಾನ್ಯವಾಗಿ ಆಸ್ಪತ್ರೆಗಳು, ಔಷಧಾಲಯಗಳಲ್ಲಿ ಔಷಧ ಮೇಲ್ವಿಚಾರಕರಾಗಿ (ಫಾರ್ಮಸಿಸ್ಟ್) ಉದ್ಯೋಗಾವಕಾಶ ಗಿಟ್ಟಿಸುತ್ತಾರೆ.

ಇದೇ ವರ್ಷದ ಜನವರಿಯಲ್ಲಿ ಡಿ. ಫಾರ್ಮಾದ ಮೊದಲ ವರ್ಷದ ಪರೀಕ್ಷೆಗಳು ನಡೆದಿದ್ದವು. ರಾಜ್ಯದ 350 ಫಾರ್ಮಸಿ ಕಾಲೇಜುಗಳ ಸುಮಾರು 20 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಔಷಧ ನಿಯಂತ್ರಣ ಇಲಾಖೆಯ ಅಧೀನದಲ್ಲಿರುವ ಪರೀಕ್ಷಾ ಪ್ರಾಧಿಕಾರ ಮಂಡಳಿಯು ಡಿ. ಫಾರ್ಮಾ ಕಾಲೇಜುಗಳ ಮಾನ್ಯತೆ, ಪ್ರವೇಶ ಪ್ರಕ್ರಿಯೆ, ಪರೀಕ್ಷೆಯ ಮೇಲುಸ್ತುವಾರಿ ನಡೆಸುತ್ತದೆ.

ಡಿಜಿಟಲ್ ವ್ಯವಸ್ಥೆಯಿಂದ ಹಗರಣ ಪತ್ತೆ

ಪರೀಕ್ಷಾ ವಿಭಾಗವನ್ನು ಮಂಡಳಿ ಸಂಪೂರ್ಣ ಡಿಜಿಟಲೀಕರಣಗೊಳಿಸಿದೆ. ಪರೀಕ್ಷೆಗಳು ಆರಂಭವಾದ ಒಂದು ಗಂಟೆ ಒಳಗೆ ಗೈರಾದವರ ವಿವರಗಳನ್ನು ಅಪ್‌ಲೋಡ್ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಸಿ.ಸಿ. ಟಿ.ವಿ ಕ್ಯಾಮೆರಾ ಇರುವುದರಿಂದ ಪರೀಕ್ಷಾ ಕೊಠಡಿಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ನಿಖರವಾಗಿ ಸಿಗುತ್ತದೆ. ಅಷ್ಟೇ ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ. ನಂತರ ಮಾರ್ಪಾಡು ಮಾಡಲು ಅವಕಾಶ ಇರುವುದಿಲ್ಲ. ಹಾಗಾಗಿ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉತ್ತರ ಪತ್ರಿಕೆಗಳು ಹೊಂದಾಣಿಕೆಯಾಗಬೇಕು. ಮೌಲ್ಯಮಾಪನದ ಸಮಯದಲ್ಲಿ ಹೆಚ್ಚುವರಿ ಉತ್ತರ ಪತ್ರಿಕೆಗಳು ಲಭ್ಯವಾದ ಕಾರಣ ಹಗರಣ ಪತ್ತೆಯಾಗಿದೆ ಎಂದು ಮಂಡಳಿಯ ಮೂಲಗಳು ವಿವರಿಸಿವೆ.

ಖಾಲಿಸ್ತಾನ ಪರ ದಾಂದಲೆ: ಎನ್‌ಐಎ ತನಿಖೆ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಕೆನಡಾದಲ್ಲಿ ಭಾರತೀಯ ರಾಯಭಾರ ಕಚೇರಿಗಳ ಮೇಲೆ ಖಾಲಿಸ್ತಾನ ಬೆಂಬಲಿಗರು ನಡೆಸಿದ್ದ ದಾಂದಲೆ ಪ್ರಕರಣದ ತನಿಖೆ ಹೊಣೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಲಾಗಿದೆ.

ಅಲ್ಲದೆ, ಲಂಡನ್‌ನ ಭಾರತೀಯ ರಾಯಭಾರ ಕಚೇರಿ ಬಳಿ ನಡೆದಿದ್ದ ಹಿಂಸಾಕೃತ್ಯ, ದಾಂದಲೆ ಕೃತ್ಯವನ್ನೂ ಎನ್‌ಐಎ ತನಿಖೆಗೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ದೆಹಲಿ ಪೊಲೀಸ್ ವಿಶೇಷ ಘಟಕವು ಈ ಕೃತ್ಯಗಳ ಬಗ್ಗೆ ಯುಎಪಿಎ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿತ್ತು. ಖಾಲಿಸ್ತಾನ್ ಪರ ಪ್ರತಿಭಟನಕಾರರ ಗುಂಪು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿರುವ ಭಾರತದ ಕಾನ್ಸುಲೇಟ್ ಕಚೇರಿ ಮೇಲೆ ಮಾರ್ಚ್‌ನಲ್ಲಿ ದಾಳಿ ಮಾಡಿ, ಹಾನಿಗೊಳಿಸಿತ್ತು.

ರೊಬಸ್ಟಾ ಕಾಫಿಗೆ ದಾಖಲೆ ಬೆಲೆ

ದಾಸ್ತಾನು ಇಲ್ಲದೆ ನಿರಾಸೆ • ಪ್ರತಿಕೂಲ ಹವಾಮಾನ; ತಗ್ಗುತ್ತಿದೆ ಇಳುವರಿ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): ರೊಬಸ್ಟಾ ಕಾಫಿ ಪ್ರತಿ ಕೆ.ಜಿಗೆ ₹ 250 ಇದ್ದು, 28 ಕೆ.ಜಿ ಓಟಿ ಇರುವ ರೊಬಸ್ಟಾ ಕಾಫಿ ಪ್ರತಿ ಮೂಟೆಗೆ ₹ 7 ಸಾವಿರ ದರ ಲಭಿಸಿದೆ. ಇದು ಕಾಫಿ ಬೆಳೆಯ ಇತಿಹಾಸದಲ್ಲೇ ಗರಿಷ್ಠ ಬೆಲೆ ಆಗಿದೆ. ಆದರೆ ಬಹುತೇಕ ಬೆಳೆಗಾರರು ತಮ್ಮ ಫಸಲನ್ನು ಈಗಾಗಲೇ ಮಾರಾಟ ಮಾಡಿದ್ದು ನಿರಾಸೆ ಅನುಭವಿಸುತ್ತಿದ್ದಾರೆ.

ಜನವರಿ, ಫೆಬ್ರುವರಿಯಲ್ಲಿ ಕಾಫಿ ಕೊಯ್ಲು ನಡೆದಿದ್ದಾಗಲೇ ಕಾಫಿ ಬೆಲೆಯು ಮೂಟೆಗೆ ₹ 5 ಸಾವಿರಕ್ಕೆ ಏರಿಕೆ ಆಗಿತ್ತು. ಇದರಿಂದ ಬಹುತೇಕ ಬೆಳೆಗಾರರು ತಮ್ಮ ಮಾಲನ್ನು ಮಾರಾಟ ಮಾಡಿದ್ದರು. ಆಗಲೂ ಫಸಲು ಮಾರಾಟ ಮಾಡದೆ ಉಳಿಸಿಕೊಂಡಿದ್ದ ಕೆಲ ಬೆಳೆಗಾರರು ಮೇ ತಿಂಗಳಲ್ಲಿ ಧಾರಣೆಯು ₹ 6 ಸಾವಿರಕ್ಕೆ ಏರಿಕೆ ಆದಾಗ ಮಾರಾಟ ಮಾಡಿದ್ದರು.

ಆನಂತರ ಮೇ ತಿಂಗಳ ಅಂತ್ಯದಲ್ಲಿ ಪ್ರತಿ ಚೀಲಕ್ಕೆ ₹ 6,500 ಮಟ್ಟಕ್ಕೆ ಏರಿಕೆ ಆಗಿದ್ದ ಕಾಫಿ ಧಾರಣೆಯು ಇದೀಗ ₹ 7 ಸಾವಿರದವರೆಗೆ ಇದೆ. ಆದರೆ ಶೇ 5ರಷ್ಟು ಕಾಫಿ ಕೂಡ ಬೆಳೆಗಾರರ ಬಳಿ ಇಲ್ಲ ಎಂದು ವ್ಯಾಪಾರಿಗಳು ಹೇಳುತ್ತಾರೆ.



ಹೆಚ್ಚಿದ ತಾಪಮಾನದ ಕಾರಣಕ್ಕೆ ಕಳಸ ತಾಲ್ಲೂಕಿನ ರೊಬಸ್ಟಾ ತೋಟದಲ್ಲಿ ಪ್ರತಿ ಗೊಂಚಲಿನಲ್ಲಿ ಕಾಯಿಗಳ ಸಂಖ್ಯೆ ಕಡಿಮೆ ಆಗಿರುವುದು

ಕಳೆದ ವರ್ಷ ಕನಿಷ್ಠ ಫಸಲು ಪಡೆದಿದ್ದ ಬೆಳೆಗಾರರು ಸಹಜವಾಗಿಯೇ ಬೆಲೆ ಏರಿಕೆಯ ನಿರೀಕ್ಷೆ ಹೊಂದಿದ್ದರು. ಅದರ ಜೊತೆಗೆ ಬ್ರೆಜಿಲ್, ವಿಯೆಟ್ನಾಂ, ಇಂಡೊನೇಷ್ಯಾದಲ್ಲಿ ಕೂಡ ಕಾಫಿ ಫಸಲು ಕನಿಷ್ಠ ಮಟ್ಟದಲ್ಲಿ ಬಂದಿದ್ದರಿಂದ ಬೆಲೆ ಏರಿಕೆಯ ನಾಗಾಲೋಟ ಮುಂದುವರೆದಿದೆ.

ಈ ಬಾರಿಯ ಬೇಸಿಗೆಯಲ್ಲಿ ತಾಪಮಾನ ಹೆಚ್ಚಿತ್ತು. ಮಳೆ ಕೊರತೆ ಆಗಿದ್ದು, ಕಾಫಿ ಹೂವು ಅರಳಲು ಮತ್ತು ಕಾಯಿ ಕಟ್ಟಲು ಅಡ್ಡಿ ಆಗಿದೆ. ಇದರಿಂದ ಮುಂದಿನ ಸಾಲಿನಲ್ಲೂ ಕಾಫಿ ಫಸಲು ಕಡಿಮೆ ಆಗುವ ಆತಂಕ ಇದೆ ಎನ್ನುತ್ತಾರೆ ಬೆಳೆಗಾರ ಎಡೂರಿನ ಓಸ್ವಾಲ್ಡ್ ಪಿರೇರಾ.

‘ಪ್ರತಿಕೂಲ ಹವಾಮಾನದ ಕಾರಣಕ್ಕೆ ಇಳುವರಿ ಕಡಿಮೆಯಾಗುತ್ತಿದೆ. ಬೆಲೆ ಏರಿಕೆಯ ಪ್ರಯೋಜನ ನಮಗೆ ಸಿಗುತ್ತಿಲ್ಲ’ ಎಂದು ಬೆಳೆಗಾರ ಮಕ್ಕಿಮನೆ ವಜ್ರಕುಮಾರ್ ಹೇಳಿದರು.

2nd Year Remembrance



Sri K.S. RAMEGOWDA
Ret. Asst. Registrar Co-Operative Societies
Founder Secretary
Rajarajeshwari Educational Association
Deeply mourned by: FAMILY & FRIENDS

ನಿಧನ



ಶ್ರೀಮತಿ ಕುಸುಮಾ ರಾಮಚಂದ್ರ
ಜನನ: 20-4-1960 ಮರಣ: 16-6-2023
ಅಂತ್ಯಕ್ರಿಯೆಯನ್ನು ದಿನಾಂಕ: 19-6-2023 ರಂದು 11:00 ಗಂಟೆಗೆ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು:
ಪತಿ: ಕೆ. ರಾಮಚಂದ್ರಪ್ಪ,
ತಂದೆ: ಎಚ್.ಟಿ. ವೇಣುಗೋಪಾಲ್,
ಮಗಳು: ಚೈತ್ರ, ದೀಪಿಕಾ,
ಅಳಿಯಂದಿರು: ಗೋವರ್ಧನ್, ಚಂದ್ರು,
ಮೊಮ್ಮಕ್ಕಳು: ರಕ್ಷಿತ್, ಚಿರಂತ್, ಕಿಯರಾ, ಸಹೋದರರು, ಸಹೋದರಿಯರು ಮತ್ತು ಕೋ-ಬರ್ದರ್ಸ

ಎರಡನೇ ವರ್ಷದ ಸವಿನೆನಪು



ಶ್ರೀ ಹೆಚ್. ಮುನಿರೆಡ್ಡಿ
ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ. ಸದಾ ನಿಮ್ಮ ನೆನಪಿನಲ್ಲಿ
ಹೆಚ್.ಎಮ್.ಆರ್ ಕುಟುಂಬದವರು, ಬೆಳ್ಳಂದೂರು.

ಭಾವಪೂರ್ಣ ಶ್ರದ್ಧಾಂಜಲಿ




ವಂದನೀಯ ಫಾ. ಸ್ಟ್ಯಾನಿ ವೇಗಾಸ್
ಜನನ : 11.05.1931
ಯಾಜಕ ದೀಕ್ಷೆ : 06.04.1957
ಮರಣ : 16.06.2023
ದಿನಾಂಕ: 16.06.2023 ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಅವರ ಪಾರ್ಥಿವ ಶರೀರವನ್ನು 19.06.2023 ಸೋಮವಾರ ಬೆಳಿಗ್ಗೆ 8 ರಿಂದ 9.45 ಗಂಟೆಯವರೆಗೆ ಬೆಂಗಳೂರು ಮಹಾಧರ್ಮಕ್ಷೇತ್ರದ ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು.
ತದನಂತರ ಬೆಳಿಗ್ಗೆ 10.00 ಗಂಟೆಗೆ ಬಲಿಪೂಜೆಯನ್ನು ನೆರವೇರಿಸಿ, ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.
ದಯಾಮಯ ದೇವರು ದಿವಂಗತರಿಗೆ ಚಿರಶಾಂತಿಯನ್ನು ದಯಪಾಲಿಸಲಿ!
ಬೆಂಗಳೂರು ಮಹಾಧರ್ಮಕ್ಷೇತ್ರ

ಪ್ರಥಮ ವರ್ಷದ ಚಿರಸ್ಮರಣೆ



ಡಾ. ಎಲ್. ಶಿವಲಿಂಗಯ್ಯ ರವರು ಬಿ.ಇ, ಎಫ್.ಐ.ಇ
13-05-1930 18-06-2022
ನಿವೃತ್ತ ಮುಖ್ಯ ಇಂಜನಿಯರ್ ಮತ್ತು ವಿಶೇಷ ಕಾರ್ಯದರ್ಶಿಗಳು
ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ
ಸಂಸ್ಥಾಪಕ ಧರ್ಮದರ್ಶಿಗಳು: ಆನಂದ ಸಾಮಾಜಿಕ ಮತ್ತು ಶೈಕ್ಷಣಿಕ ದತ್ತಿ, ಡಾ. ಬಿ.ಆರ್ ಅಂಬೇಡ್ಕರ್ ಮೆಡಿಕಲ್, ಡೆಂಟಲ್ ಮತ್ತು ನರ್ಸಿಂಗ್ ಕಾಲೇಜುಗಳು ಪಾಂಚಜನ್ಯ ವಿದ್ಯಾಪೀಠ ವೆಲ್ ಫೇರ್ ಟ್ರಸ್ಟ್, ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ
ಸಂಸ್ಥಾಪಕ ಅಧ್ಯಕ್ಷರು: ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ)
ಆನಂದ ಕೋ. ಆಪರೇಟಿವ್ ಬ್ಯಾಂಕ್. ಅಧ್ಯಕ್ಷರು: ದೀನ ಸೇವಾ ಸಂಘ ವಿದ್ಯಾಸಂಸ್ಥೆಗಳು
ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ... ನಿಮ್ಮ ನೆನಪುಗಳು ಮಾತ್ರ ನಮ್ಮ ಹೃದಯದಲ್ಲಿ ಸದಾ ಚಿರಸ್ಮರಣೀಯವಾಗಿದೆ.
ಸದಾ ಸ್ಮರಿಸುವವರು:
ಮೆಲ್ಲಂಡ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ
ಡಾ. ರವಿಪ್ರಕಾಶ್, ಸಚೀನ, ರೂಪಾಲಿ, ಶಿಫಾಲಿ ಹಾಗೂ ಬಂಧು ಮಿತ್ರರು

Soul is immortal
1ST DEATH ANNIVERSARY



12.05.1940-18.06.2022
SRI M. RAGHUPATHY
Former Minister, Govt. of Karnataka
You are in our thoughts always
Family, Relatives & Friends

ಎಲ್‌ನಿನೊ: ಸಾಂಸ್ಥಿಕ ಹೂಡಿಕೆಗೆ ಅಡ್ಡಿ?

ಅಲ್ಪಾವಧಿಯಲ್ಲಿ ಲಾಭ ಗಳಿಕೆ ವಹಿವಾಟು ನಡೆಯುವ ಸಾಧ್ಯತೆ

• ವಿಶ್ವನಾಥ ಎಸ್.

ಬೆಂಗಳೂರು: ಮುಂಗಾರಿನ ಮೇಲೆ ಎಲ್‌ನಿನೊ ಪರಿಣಾಮ ಬೀರುವ ಆತಂಕ ಎದುರಾಗಿದೆ. ಹೀಗಾದಲ್ಲಿ ಮುಂದಿನ ದಿನಗಳಲ್ಲಿ ಷೇರುಪೇಟೆಗಳಲ್ಲಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿನ ತಾಪಮಾನದಲ್ಲಿ ಆಗುವ ಬದಲಾವಣೆಯನ್ನು ಎಲ್‌ನಿನೊ ಎಂದು ಕರೆಯುತ್ತಾರೆ.

ಇದು ಮುಂಗಾರಿನ ಆರಂಭದ ದಿನಗಳಷ್ಟೇ. ಮುಂಬರುವ ವಾರಗಳಲ್ಲಿ ಮತ್ತು ತಿಂಗಳುಗಳಲ್ಲಿ ಮಳೆ ಕೊರತೆ ಸರಿಹೋಗಬಹುದು. ಆದರೆ, ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) 36 ವಿಭಾಗಗಳ ಪೈಕಿ 29 ವಿಭಾಗಗಳು ಮುಂಗಾರು ಕಡಿಮೆಯಾಗುವ ಆತಂಕ ವ್ಯಕ್ತಪಡಿಸಿವೆ. ಹಾಗಾದಲ್ಲಿ ಕೃಷಿ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದ್ದು, ಹಣದುಬ್ಬರಕ್ಕೆ ಕಾರಣವಾಗಲಿದೆ. ಅದರಿಂದಾಗಿ ಬಂಡವಾಳ ಹಿಂತೆಗೆತ ಕಂಡುಬರಲಿದೆ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಎಲ್‌ನಿನೊದ ಪರಿಣಾಮವು ಸೆಪ್ಟೆಂಬರ್ ವೇಳೆಗೆ ಸ್ಪಷ್ಟವಾಗಲಿದ್ದು, ಅಲ್ಲಿಯವರೆಗೂ ಷೇರುಪೇಟೆಯಲ್ಲಿ ಅನಿಶ್ಚಿತತೆ ಇರಲಿದೆ. ಕೃಷಿ, ಎಫ್‌ಎಂಸಿಜಿ ಮತ್ತು ಉಪಭೋಗ ವಲಯಗಳು ಹೆಚ್ಚಿನ ಪರಿಣಾಮ ಎದುರಿಸಲಿವೆ. ದೀರ್ಘಾವಧಿಗೆ ಹೂಡಿಕೆ ಮಾಡುವವರಿಗೆ ಅಸ್ಥಿರ ವಹಿವಾಟಿನ ಅವಧಿಯಲ್ಲಿ ಷೇರುಗಳನ್ನು ಖರೀದಿಸಿ ಇಟ್ಟುಕೊಳ್ಳುವುದು ಉತ್ತಮ ನಡೆಯಾಗಲಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಶ್ಲೇಷಕ ವಿನ್ಸಂಟ್ ಕೆ.ಎ. ಸಲಹೆ ನೀಡಿದ್ದಾರೆ.

ಮುಖ್ಯಾಂಶಗಳು

- ಹಣಕಾಸು, ಆಟೊಮೊಬೈಲ್ ವಲಯಗಳಲ್ಲಿ ಮುಂದುವರಿದ ಹೂಡಿಕೆ
- ಐ.ಟಿ., ಲೋಹ, ವಿದ್ಯುತ್ ವಲಯಗಳಿಂದ ಬಂಡವಾಳ ಹಿಂತೆಗೆತ

ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ) (ಕೋಟಿಗಳಲ್ಲಿ)

ಜೂ.12	ಜೂ.13	ಜೂ.14	ಜೂ.15	ಜೂ.16
₹627	₹1,678	₹1,715	₹3,085	₹795

ಮಾಹಿತಿ: ಪಿಟಿಐ

ಎಫ್‌ಪಿಐ ಒಳಹರಿವು: ಜೂನ್ ತಿಂಗಳಿನಲ್ಲಿಯೂ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಖರೀದಿಯನ್ನು ಮುಂದುವರಿಸಿದ್ದಾರೆ.

ಜೂನ್ 16ರವರೆಗೆ ಒಟ್ಟು ₹16,405 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಮೇ ತಿಂಗಳಿನಲ್ಲಿ ದಾಖಲೆಯ ₹43,838 ಕೋಟಿ ಹೂಡಿಕೆ ಮಾಡಿದ್ದರು. ಭಾರತದ ಆರ್ಥಿಕತೆ ಮತ್ತು ಕಾರ್ಪೊರೇಟ್ ಗಳಿಕೆಯ ಕುರಿತು ವಿದೇಶಿ ಹೂಡಿಕೆದಾರರು ಹೊಂದಿರುವ ವಿಶ್ವಾಸವನ್ನು ಈ ಹೂಡಿಕೆಯು ಸೂಚಿಸುತ್ತಿದೆ ಎಂದು ವಿಜಯಕುಮಾರ್ ತಿಳಿಸಿದರು.

ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕತೆಗಳಲ್ಲಿ ಭಾರತವು ಉತ್ತಮ ಬೆಳವಣಿಗೆ ಮತ್ತು ಗಳಿಕೆ ಕಂಡುಕೊಳ್ಳುತ್ತಿದೆ ಎನ್ನುವ ಅಭಿಪ್ರಾಯವನ್ನು ವಿದೇಶಿ ಹೂಡಿಕೆದಾರರ ಸಮುದಾಯವು ಹೊಂದಿದೆ. ಭಾರತದ ಈ ಸಾಮರ್ಥ್ಯದ ಲಾಭವನ್ನು ಪಡೆದುಕೊಳ್ಳಲು ಹೂಡಿಕೆ ಮಾಡುತ್ತಿದ್ದಾರೆ. ಹಣಕಾಸು, ವಾಹನ ಮತ್ತು ವಾಹನ ಬಿಡಿಭಾಗಗಳು, ಬಂಡವಾಳ ಸರಕುಗಳು ಮತ್ತು ನಿರ್ಮಾಣ ವಲಯದ ಷೇರುಗಳಲ್ಲಿ ಹೆಚ್ಚಿನ ಹಣ ತೊಡಗಿಸುತ್ತಿದ್ದಾರೆ. ಐ.ಟಿ., ಲೋಹ, ವಿದ್ಯುತ್ ಮತ್ತು ಜವಳಿ ವಲಯಗಳಿಂದ ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಷೇರುಪೇಟೆಗಳು ದಾಖಲೆ ಮಟ್ಟದಲ್ಲಿ ವಹಿವಾಟ ನಡೆಸುತ್ತಿದ್ದು, ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇದೆ. ಹೀಗಾಗಿ, ಅಲ್ಪಾವಧಿಯಲ್ಲಿ ಲಾಭ ಗಳಿಕೆಯ ವಹಿವಾಟು ನಡೆಯುವ ಸಾಧ್ಯತೆ ಇದೆ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹950 (945)
ಸೂರ್ಯಕಾಂತಿ (ರಿಫೈನ್ಡ್)	₹950 (940)
ಪಾಮೋಲಿನ್	₹860 (860)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹585
12 ಮೊಟ್ಟೆಗೆ	₹78

ಮೈಸೂರು

100 ಮೊಟ್ಟೆಗೆ	₹590

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹15300
ಎಸಿ	₹7980
ಆರ್‌ಪಿ	₹10800
ಆರ್‌ಸಿ	₹6360

ಅಕ್ಕಿ ಖರೀದಿ: ಇನ್ನೂ ಕಗ್ಗಂಟು

ಒಂದನೇ ಪುಟದಿಂದ

ಅಕ್ಕಿ ಖರೀದಿಗೆ ಎದುರಾಗಿರುವ ತೊಡಕು ನಿವಾರಣೆ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹಾಗೂ ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಶನಿವಾರ ಸಂಜೆ ಸಭೆ ನಡೆಸಿದ ಮುಖ್ಯಮಂತ್ರಿ, ಈವರೆಗಿನ ಬೆಳವಣಿಗೆಗಳ ಮಾಹಿತಿ ಪಡೆದರು. ಛತ್ತೀಸಗಢ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಖರೀದಿಗೆ ಲಭ್ಯವಿರುವ ಅಕ್ಕಿಯ ಪ್ರಮಾಣದ ಕುರಿತು ಖಚಿತ ಮಾಹಿತಿ ಸಂಗ್ರಹಿಸುವಂತೆ ಸೂಚನೆ ನೀಡಿದ್ದಾರೆ.

ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟ (ಎನ್‌ಸಿಸಿಎಫ್) ಸೇರಿದಂತೆ ಪರ್ಯಾಯ ಸಂಸ್ಥೆಗಳ ಮೂಲಕವೂ ಅಕ್ಕಿ ಖರೀದಿ ಸಾಧ್ಯತೆಯ ಬಗ್ಗೆ ಆಹಾರ ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿಗೆ ಮಾಹಿತಿ ನೀಡಿದ್ದಾರೆ. ಮೂರು ಮಾರ್ಗಗಳಲ್ಲಿ ಅಗತ್ಯ ಅಕ್ಕಿ ದಾಸ್ತಾನು ಮಾಡಲು ಅವಕಾಶ ಇರುವ ಬಗ್ಗೆ ಚರ್ಚಿಸಲಾಗಿದೆ. ಛತ್ತೀಸಗಢ ಸೇರಿದಂತೆ ವಿವಿಧ ರಾಜ್ಯಗಳ ಸರ್ಕಾರಗಳಿಂದ ಸ್ಪಷ್ಟ ಪ್ರತಿಕ್ರಿಯೆ ಪಡೆದು, ಸೋಮವಾರ ಅಂತಿಮ ನಿರ್ಧಾರಕ್ಕೆ ಬರಲು ಮುಖ್ಯಮಂತ್ರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಛತ್ತೀಸಗಢದಿಂದ ಖರೀದಿಗೆ ಮಾತುಕತೆ’

ಛತ್ತೀಸಗಢದಲ್ಲಿ 1.50 ಲಕ್ಷ ಟನ್ ಅಕ್ಕಿ ಲಭ್ಯವಿದ್ದು, ಇತರೆ ರಾಜ್ಯಗಳ ಜತೆಗೂ ಮಾತುಕತೆ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ತೆಲಂಗಾಣದಲ್ಲಿ ಅಕ್ಕಿಯ ದಾಸ್ತಾನಿಲ್ಲ ಎಂದು ಅಲ್ಲಿನ ಮುಖ್ಯಮಂತ್ರಿ ಹೇಳಿದ್ದಾರೆ. ಆಂಧ್ರಪ್ರದೇಶ ಸರ್ಕಾರದ ಜತೆಗೆ ಮುಖ್ಯ ಕಾರ್ಯದರ್ಶಿ ಮಾತುಕತೆ ನಡೆಸಿದ್ದಾರೆ. ಎಷ್ಟೇ ಸವಾಲುಗಳು ಎದುರಾದರೂ, ಜುಲೈನಿಂದಲೇ ಅನ್ನಭಾಗ್ಯ ಯೋಜನೆ ಜಾರಿಗೆ ಸರ್ಕಾರ ಬದ್ಧವಾಗಿದೆ’ ಎಂದರು.

‘ರಾಜ್ಯದಲ್ಲಿ ಅಕ್ಕಿ ಲಭ್ಯವಿದ್ದರೂ, ಕಮಿಷನ್ ಆಸೆಗಾಗಿ ಬೇರೆ ರಾಜ್ಯದಿಂದ ಅಕ್ಕಿ ತರಿಸಲಾಗುತ್ತಿದೆ’ ಎಂಬ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ರಾಜ್ಯದಲ್ಲೇ ಅಕ್ಕಿ ಸಿಕ್ಕರೆ ವಿಜಯೇಂದ್ರಗೆ ಕೊಡಿಸಲು ಹೇಳಿ, ಅವರ ಮಿಲ್‌ನಲ್ಲಿ ಅಕ್ಕಿ ಇದೆಯಾ ಕೇಳಿ’ ಎಂದು ಮರುಪ್ರಶ್ನೆ ಹಾಕಿದರು.

‘ಮುಖ್ಯ ಕಾರ್ಯದರ್ಶಿಗೆ ಹೊಣೆ’

‘ಛತ್ತೀಸಗಢ ಸೇರಿದಂತೆ ಅನ್ಯ ರಾಜ್ಯಗಳ ಜತೆ ಮಾತುಕತೆ ನಡೆಸಿ, ಅಕ್ಕಿ ಖರೀದಿಸುವ ಹೊಣೆಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೀಡಲಾಗಿದೆ. ಅಕ್ಕಿ ಖರೀದಿಗಾಗಿ ನಾನು ಹೊರ ರಾಜ್ಯಗಳಿಗೆ ಪ್ರವಾಸ ಮಾಡಬೇಕಾದ ಪರಿಸ್ಥಿತಿ ಉದ್ಭವಿಸುವುದಿಲ್ಲ’ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

‘ಅಂತ್ಯೋದಯ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಎಲ್ಲ ಸದಸ್ಯರಿಗೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿ ವಿತರಿಸುವುದು ನಿಶ್ಚಿತ. ಅಕ್ಕಿ ಖರೀದಿಯ ಸಮಸ್ಯೆಗಳನ್ನು ಅಧಿಕಾರಿಗಳು ಸಂಪೂರ್ಣವಾಗಿ ಪರಿಹರಿಸುತ್ತಾರೆ. ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸುವ ಪ್ರಶ್ನೆಯೇ ಇಲ್ಲ’ ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ರಾಶಿ	52299-53269		33721-36869
ಬಂಟ್ವಾಳ		**ಬೆಂಗಳೂರು**		ರಾಶಿ	46399-50499
ಕೋಕ	12500-25000	ಇತರೆ	5500-60000	**ತುಮಕೂರು**	
ಹೊಸತು	27500-40500	**ಪುತ್ತೂರು**		ರಾಶಿ	51000-52100
ಹಳತು	48000-53000	ಕೋಕ	11000-25000	**ಕೊಬ್ಬರಿ**	
ಕಾರ್ಕಳ		ಹೊಸತು	33500-40500	ಕೆ.ಆರ್.ಪೇಟೆ	7900-7900
ಹೊಸತು	30000-40500	**ಶಿರಸಿ**		ಪುತ್ತೂರು	4500-7300
ಹಳತು	40000-53000	ಬೆಟ್ಟೆ	36799-45669	ತಿಪಟೂರು	7500-8100
ಚನ್ನಗಿರಿ		ಬಿಳಿಗೋಟು	28099-33939	ತುಮಕೂರು	8050-8500
ರಾಶಿ	52299-53269	ಚಾಲಿ	37589-40519	ತುರುವೇಕೆರೆ	8000-8000
ದಾವಣಗೆರೆ		ಕೆಂಪುಗೋಟು			

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹290-520
ದ್ವಿತಳಿ (ಬಿ.ವಿ)	₹300-665

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,300
ಒಡವೆ ಚಿನ್ನ 1ಗ್ರಾಂ	₹5,640
ಬೆಳ್ಳಿ ಕೆ.ಜಿಗೆ	₹74,700

ಮುಂಬೈ ಧಾರಣೆ

ಶೇಂಗಾ

17-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1690)
ಒಂದು ವಾರದ ಡೆಲಿವರಿ	1685(1685)
ಸೋಯಾ ಕಚ್ಚಾ	900 (900)
ಪಾಮ್ ವಾರದ ಡೆಲಿವರಿ	858 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,200 (59,250)
ಬೆಳ್ಳಿ ಕೆ.ಜಿ 72,500 (72,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಹೆಸರಾಂತ ಕಂಪನಿಗೆ (Luxury Cars) ಅನುಭವವುಳ್ಳ ಡ್ರೈವರ್ಸ್ ಬೇಕಾಗಿದ್ದಾರೆ ವಯಸ್ಸು 30-ವರ್ಷಕ್ಕಿಂತ ಕಡಿಮೆ, ಸಂಬಳ: 24000/-ಜೊತೆಗೆ ಕಂಪನಿಯ ಸೌಲಭ್ಯ, ಸದಾಶಿವ ನಗರದ ಸುತ್ತಮುತ್ತ ವಾಸಿಸುವವರಿಗೆ ಆದ್ಯತೆ. ಸಂಪರ್ಕಿಸಿ: 9844018900

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9886683188/ 9738421001

General

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಕಚೇರಿ ಸಹಾಯಕ (M), ಪದ್ಮನಾಭನಗರ, ಸಂಬಳ- 10,000 + ಬೋನಸ್, ಫೋನ್- 9886402232'

Wanted

ವಸತಿಗೃಹಕ್ಕೆ ಇಂಗ್ಲೀಷ್ ತಿಳಿದಿರುವ ಸ್ವಾಗತಕಾರರು(Receptionist) ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ : ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ,ಮೈಸೂರುಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080-22215903

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18 ವರ್ಷ ಮೇಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 13000 ರಿಂದ 16000 ವರೆಗೆ ಸಂಬಳ. ದೂರವಾಣಿ: 8139962883

ಭವಿಷ್ಯ

Astrology

ಕೇರಳ ಮಂತ್ರವಾದಿ ಶ್ರೀನಿವಾಸ್ ಎಂ. ಮುಗ್ಗೋಳ್, ತೀರ್ಥಹಳ್ಳಿ. 9632545506, 7892446291 ನಿಮ್ಮೆಲ್ಲಾ ಕಠಿಣ ಗುಪ್ತ ಸಮಸ್ಯೆಗೆ ಪರಿಹಾರ ಮಾಡುತ್ತಾರೆ.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business to Business

Others

ಉಜ್ವಲ್ ಬಿಲ್ಡಿಂಗ್ ಮೆಟಿರಿಯಲ್, 559, 1ನೇ ಮುಖ್ಯರಸ್ತೆ, ಕೆಂಗೇರಿ ಉಪನಗರ-560060. ಅಂಗಡಿಯನ್ನು ಖಾಲಿ ಮಾಡಿದ್ದು, ಹಣದ ವ್ಯವಹಾರ ಇದ್ದಲ್ಲಿ (7676688999) 7ದಿನಗಳ ಒಳಗೆ ಸಂಪರ್ಕಿಸಬಹುದು.

ವೈವಾಹಿಕ

Brides Wanted

Kannada

HANDSOME BOY 1991 Born from Bangalore 5'10 / M.Tech Working as a Senior Software Engineer / 70 LPA is looking for a suitable match Caste No Bar 080-69070600

Grooms Wanted

Kannada

BEAUTIFUL GIRL from a Very Affluent Family 1997 Born Resident of Bangalore Working is looking for a suitable match 080-69070600

ಪ್ರವಾಸ

Travel

★13.07.2023 8/13ದಿನ★ ದೆಹಲಿ,ಆಗ್ರಾ,ಪ್ರಯಾಗ, ಗಯ,ಕಾಶಿ ಪ್ರವಾಸ., 15.08.2023 10ದಿನ ಗುಜರಾತ್,ಉಜ್ಜಯಿನಿ, ಓಂಕಾರೇಶ್ವರ.31.08.2023 16ದಿನ 95ದಿವ್ಯದೇಶ ಪ್ರವಾಸ, 29.07.2023 ತಮಿಳುನಾಡು 12ದಿನ 36ಸುಬ್ರಹ್ಮಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

20.09.2023 12 ದಿನಗಳು ಚಾರ್ ಧಾಮ್. 05.12.2023 9 ದಿನಗಳು ಕಾಶಿ,ಅಯೋಧ್ಯಾ, ಗಯಾ,ಕೋಲ್ಕತಾ ಪುರಿಜಗನ್ನಾಥ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 05.07.2023 03.09.2023 ರಿಂದ 12 ದಿನಗಳ ಕಾಶಿ,ಗಯಾ,ಹರಿದ್ವಾರ್. 20.09.2023 06.10.2023 16.10.2023 ರಿಂದ 15 ದಿನಗಳ ಚಾರ್‌ಧಾಮ್. 03.09.2023 ರಿಂದ 11 ದಿನಗಳ ಕಾಶಿ,ನೇಪಾಳ. 04.10.2023 17.11.2023 ರಿಂದ 8/11 ದಿನಗಳ ಗುಜರಾತ್,ರಾಜಸ್ಥಾನ್. 21.09.2023 ರಿಂದ 11 ದಿನಗಳ ಮಧ್ಯಪ್ರದೇಶ. 04.10.2023 16.10.2023 ರಿಂದ 12 ದಿನಗಳ ಶ್ರೀನಗರ ವೈಷ್ಣೋದೇವಿ 03.10.2023 12.10.2023 ರಿಂದ 8/12 ದಿನಗಳ ಶಿಮ್ಲಾ,ಮನಾಲಿ ವೈಷ್ಣೋದೇವಿ. 23.07.2023 ರಿಂದ 7/11 ದಿನಗಳ ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ ದುಬೈ,ಅಬುದಾಬಿ ಯುರೋಪ್ (ಆಗಸ್ಟ್ ಸೆಪ್ಟೆಂಬರ್) ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

6.7.2023ರಿಂದ 10ದಿನಗಳು. ವೈಷ್ಣವಿದೇವಿ, ಕುಲುಮನಾಲಿ, ದೆಹಲಿ, ಶಿಮ್ಲಾ, ಅಮೃತಸರ, ವಾಘಾ ಬಾರ್ಡರ್17.7.2023ರಿಂದ 12ದಿನಗಳು. ಚಾರದಾಮ ಪ್ರವಾಸ ಕೇದಾರನಾಥ, ಗಂಗೋತ್ರಿ, ಬದರಿನಾಥ, ಯಮನೋತ್ರಿ, ದೆಹಲಿ23.7.2023ರಿಂದ 7ದಿನಗಳು. ಭದ್ರಾಚಲಂ, ಹೈದ್ರಾಬಾದ್, ಶ್ರೀಶೈಲ, ವಿಜಯವಾಡ, ಯಾದಗಿರಿಗುಡ್ಡ, ಸುರೇಂದ್ರಪುರಿ, ಅಮರಾವತಿ ಶ್ರೀ ಗುರುರಾಜ ಟ್ರಾವೆಲ್ಸ್, ಕೋಲಾರ- 9900124333, 9611082432, 8123099913

ನರೇಂದ್ರ ಮೋದಿ ಮೌನ ಪ್ರಶ್ನಿಸಿದ ಹತ್ತು ಪಕ್ಷಗಳ ನಾಯಕರು • 2001ರಲ್ಲೂ ಹೊತ್ತಿ ಉರಿದಿದ್ದ ಕಣಿವೆ ರಾಜ್ಯ

ಪ್ರಧಾನಿ ಜೊತೆ ಮಾತುಕತೆಗೆ ವಿಪಕ್ಷ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರ ಹಿಂಸಾಚಾರದ ಬಗ್ಗೆ ಮೌನವಹಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಡೆಯನ್ನು ಪ್ರಶ್ನಿಸಿರುವ ಸರ್ವಪಕ್ಷಗಳ ನಾಯಕರು, ಮಾತುಕತೆಗೆ ಸಮಯಾವಕಾಶ ನಿಗದಿಪಡಿಸುವಂತೆ ಪಟ್ಟು ಹಿಡಿದಿದ್ದಾರೆ.

ಕಾಂಗ್ರೆಸ್, ಜೆಡಿ(ಯು), ಎಎಪಿ, ಸಿಪಿಐ, ಟಿಎಂಸಿ, ಸಿಪಿಎಂ, ಫಾರ್ವಡ್ ಬ್ಲಾಕ್, ಆರ್‌ಎಸ್‌ಪಿ, ಶಿವಸೇನಾ(ಯುಬಿಟಿ) ಮತ್ತು ಎನ್‌ಸಿಪಿ ನಾಯಕರು ಜೂನ್ 10ರಂದು ಮಾತುಕತೆಗೆ ಸಮಯಾವಕಾಶ ಕೋರಿ ಪ್ರಧಾನಿ ಕಚೇರಿಗೆ ಇಮೇಲ್ ಕಳುಹಿಸಿದ್ದರು. ಜೂನ್ 12ರಂದು ಮನವಿ ಪತ್ರವನ್ನೂ ಸಲ್ಲಿಸಿದ್ದರು. ಆದರೆ, ಮೋದಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ನಾಯಕರು, ‘2001ರ ಜೂನ್18ರಂದು ಕಣಿವೆ ರಾಜ್ಯ ಹೊತ್ತಿ ಉರಿದಿತ್ತು. ಆಗ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಮಣಿಪುರದ ಸರ್ವಪಕ್ಷಗಳ ನಿಯೋಗದ ಜೊತೆಗೆ ಮಾತನಾಡಿದ್ದರು. ಅವರ ಹಾದಿಯನ್ನೇ ಮೋದಿ ಕೂಡ ತುಳಿಯಬೇಕಿದೆ’ ಎಂದು ಸಲಹೆ ನೀಡಿದ್ದಾರೆ.



ಇಂಫಾಲ್‌ದಲ್ಲಿ ಶುಕ್ರವಾರ ರಾತ್ರಿ ಕಿಡಿಗೇಡಿಗಳು ಟೈರ್‌ಗೆ ಬೆಂಕಿ ಹಚ್ಚಿದ್ದರು –ಪಿಟಿಐ ಚಿತ್ರ

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ(ಸಂವಹನ) ಜೈರಾಮ್ ರಮೇಶ್, ‘ಅಮೆರಿಕಕ್ಕೆ ತೆರಳುವ ಮೊದಲು ಮೋದಿ ಅವರು ಮಾತುಕತೆಗೆ ಆಹ್ವಾನಿಸಲಿದ್ದಾರೆ ಎಂಬ ವಿಶ್ವಾಸ ಸರ್ವಪಕ್ಷಗಳ ನಿಯೋಗಕ್ಕಿದೆ’ ಎಂದರು.

‘ಮೋದಿ ಎಲ್ಲ ವಿಷಯಗಳ ಬಗ್ಗೆ ಮಾತನಾಡುತ್ತಾರೆ. ಜೂನ್ 21ರಂದು ಯೋಗ ದಿನಾಚರಣೆ ಮೂಲಕ ವಿಶ್ವವನ್ನು ಮುನ್ನಡೆಸಲು ಸಜ್ಜಾಗಿದ್ದಾರೆ. ಆದರೆ, ಮಣಿಪುರ ಹಿಂಸಾಚಾರದ ಬಗ್ಗೆ ಮಾತುಕತೆ ನಡೆಸಲು ಅಥವಾ ಮಾತನಾಡಲು ಅವರಿಗೆ ಸಮಯವೇ ಇಲ್ಲ. ಇದು ಕೇಂದ್ರ ಸರ್ಕಾರದ ವೈಫಲ್ಯ ಮತ್ತು ವಿಕೃತ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ’ ಎಂದು ಟೀಕಿಸಿದರು.

ಪರಿಸ್ಥಿತಿ ನಿಯಂತ್ರಿಸುವಲ್ಲಿ ಮಣಿಪುರ ಸರ್ಕಾರ ಸೋತಿದೆ. ಅಲ್ಲಿಗೆ ಅಮಿತ್ ಶಾ ಭೇಟಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಮಣಿಪುರದ ಮಾಜಿ ಮುಖ್ಯಮಂತ್ರಿ ಓ ಇಬೋಬಿ ಸಿಂಗ್ ಮಾತನಾಡಿ, ‘ಜನರಿಗೆ ಶಾಂತಿ ಕಾಪಾಡುವಂತೆ ಟ್ವೀಟ್ ಮೂಲಕವಾದರೂ ಮೋದಿ ಮನವಿ ಮಾಡಬೇಕು’ ಎಂದು ಆಗ್ರಹಿಸಿದರು.

‘ನಾವು ಶಾಂತಿಯನ್ನಷ್ಟೇ ಬಯಸುತ್ತೇವೆ. ರಾಜಕೀಯ ಲಾಭ ಅಥವಾ ರಾಜಕಾರಣದ ಬಗ್ಗೆ ಮಾತನಾಡಲು ದೆಹಲಿಗೆ ಬಂದಿಲ್ಲ. ಸಂಘರ್ಷದ ನೆಲದಲ್ಲಿ ಶಾಂತಿ ಪುನರ್ ಸ್ಥಾಪನೆಯಾಗಬೇಕಿದೆ. ಅದಕ್ಕಾಗಿ ವಾಜಪೇಯಿ ನಡೆಯನ್ನು ಮೋದಿಯೂ ಪಾಲಿಸಬೇಕಿದೆ’ ಎಂದು ಹೇಳಿದರು.

ಡಬಲ್ ಎಂಜಿನ್ ವಿಫಲ: ಶಿವಸೇನಾ ಟೀಕೆ: (ಮುಂಬೈ ವರದಿ/ ಪಿಟಿಐ) ರಾಜ್ಯದಲ್ಲಿ ಪರಿಸ್ಥಿತಿ ನಿಯಂತ್ರಿಸುವಲ್ಲಿ ಡಬಲ್ ಎಂಜಿನ್ ಸರ್ಕಾರವು ಸಂಪೂರ್ಣ ವಿಫಲವಾಗಿದೆ ಎಂದು ಶಿವಸೇನಾ(ಯುಬಿಟಿ) ಟೀಕಿಸಿದೆ.

‘ಸಂಘಟಿತ ಕುಕಿ ಬಂಡುಕೋರರ ದಾಳಿಗೆ ಸಿಲುಕಿ ಮಣಿಪುರದಲ್ಲಿರುವ ಹಿಂದೂಗಳು ಸಾಯುತ್ತಿದ್ದಾರೆ. ಆದರೆ, ತಥಾಕಥಿತ ಹಿಂದುತ್ವ ಪ್ರತಿಪಾದಕರು (ಬಿಜೆಪಿ) ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ಅಲ್ಲಿ ಇರುವವರು ಹಿಂದೂಗಳಲ್ಲವೇ’ ಎಂದು ಶಿವಸೇನಾ ಮುಖವಾಣಿಯಾದ ‘ಸಾಮ್ನಾ’ದಲ್ಲಿ ಬರೆದಿರುವ ಸಂಪಾದಕೀಯದಲ್ಲಿ ಪ್ರಶ್ನಿಸಲಾಗಿದೆ. ಕುಕಿ ಬಂಡುಕೋರರಿಗೆ ಶಸ್ತ್ರಾಸ್ತ್ರಗಳು ಎಲ್ಲಿಂದ ಪೂರೈಕೆಯಾಗುತ್ತವೆ ಎಂಬ ಬಗ್ಗೆ ಅಮಿತ್ ಶಾ ಅವರೇ ಬಹಿರಂಗಪಡಿಸಬೇಕಿದೆ ಎಂದು ಆಗ್ರಹಿಸಲಾಗಿದೆ.

ಮಿಜೋರಾಂ: ₹10 ಕೋಟಿ ಪರಿಹಾರ ಪ್ಯಾಕೇಜ್‌ಗೆ ಆಗ್ರಹ

ಐಜ್ವಾಲ್ (ಪಿಟಿಐ): ಮಣಿಪುರದಿಂದ ಸುರಕ್ಷತೆ ಅರಸಿ ಮಿಜೋರಾಂಗೆ 11 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದಾರೆ. ಅವರಿಗೆ ಅಗತ್ಯ ನೆರವು ಕಲ್ಪಿಸುವ ದೃಷ್ಟಿಯಿಂದ ತಕ್ಷಣವೇ ₹ 10 ಕೋಟಿ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಎಂದು ಕೇಂದ್ರದ ಮುಂದೆ ಮಿಜೋರಾಂ ಸರ್ಕಾರವು ಬೇಡಿಕೆ ಇಟ್ಟಿದೆ.

ಪ್ರವಾಸೋದ್ಯಮ ಸಚಿವ ರಾಬರ್ಟ್ ರೊಮಾವಿಯಾ ರಾಯ್ಟ್ ಅವರು ದೆಹಲಿಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಜೊತೆಗೆ ಈ ಕುರಿತು ಚರ್ಚಿಸಿದರು. ಬಳಿಕ ಮಾತನಾಡಿದ ಅವರು, ‘ಶೀಘ್ರವೇ ಕೇಂದ್ರವು ಪರಿಹಾರ ಪ್ಯಾಕೇಜ್ ಘೋಷಿಸಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದ ವಿವಿಧ ಭಾಗಗಳಲ್ಲಿ ಆಶ್ರಯ ಪಡೆದಿರುವ ನಿರಾಶ್ರಿತರಲ್ಲಿ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರಿದ್ದಾರೆ. ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳು, ಚರ್ಚ್‌ಗಳು ಅವರಿಗೆ ಆಶ್ರಯ ಒದಗಿಸಿವೆ. ಪರಿಹಾರ ಬಿಡುಗಡೆಯ ಜೊತೆಗೆ ಮಣಿಪುರದಲ್ಲಿ ಶಾಂತಿ ನೆಲೆಸಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

38 ವಿದ್ಯಾರ್ಥಿಗಳು ಸೇರಿ 41 ಮಂದಿ ಸಾವು

ಶಾಲೆ ಮೇಲೆ ಬಂಡುಕೋರರ ದಾಳಿ

ಕಂಪಾಲ (ಎಪಿ); ಕಾಂಗೋ ಗಡಿ ಸಮೀಪದ ಮಾಧ್ಯಮಿಕ ಶಾಲೆ ಮೇಲೆ ಶಂಕಿತ ಬಂಡುಕೋರರು ದಾಳಿ ನಡೆಸಿದ ಪರಿಣಾಮ 38 ವಿದ್ಯಾರ್ಥಿಗಳು ಸೇರಿದಂತೆ 41 ಜನರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮೇಯರ್ ಶನಿವಾರ ತಿಳಿಸಿದ್ದಾರೆ.

ಮೃತರಲ್ಲಿ ವಿದ್ಯಾರ್ಥಿಗಳು, ಒಬ್ಬ ಗಾರ್ಡ್ ಮತ್ತು ಸ್ಥಳೀಯ ಸಮುದಾಯದ ಇಬ್ಬರು ಸದಸ್ಯರು ಸೇರಿದ್ದಾರೆ. ಗಾಯಗೊಂಡಿರುವ ಎಂಟು ಮಂದಿ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶುಕ್ರವಾರ ರಾತ್ರಿ 11.30 ರ ಸುಮಾರಿಗೆ ಐವರು ದಾಳಿ ನಡೆಸಿದ್ದಾರೆ. ಬಳಿಕ ಆರು ಜನರನ್ನು ಅಪಹರಿಸಿದ್ದಾರೆ ಎಂದು ಉಗಾಂಡ ಸೇನೆ ತಿಳಿಸಿದೆ.

ಬಂಡುಕೋರರು ವಿದ್ಯಾರ್ಥಿ ನಿಲಯಕ್ಕೆ ಬೆಂಕಿ ಹಚ್ಚಿದ್ದರಿಂದ ಕೆಲವು ವಿದ್ಯಾರ್ಥಿಗಳಿಗೆ ತೀವ್ರ ಸುಟ್ಟ ಗಾಯಗಳಾಗಿವೆ. ಇತರರನ್ನು ಗುಂಡಿಕ್ಕಿ ಕೊಲ್ಲಲಾಗಿದೆ ಅಥವಾ ಮಚ್ಚುಗಳಿಂದ ಕತ್ತರಿಸಲಾಗಿದೆ ಎಂದು ಎಂಪೊಂಡ್ವೆ-ಲುಬಿರಿಹಾ ಮೇಯರ್ ಸೆಲೆವೆಸ್ಟ್ ಮಾಪೋಜ್ ಹೇಳಿದ್ದಾರೆ.

ಅಲೈಡ್ ಡೆಮಾಕ್ರಟಿಕ್ ಫೋರ್ಸ್ ಬಂಡುಕೋರರು ಲುಬಿರಿಹಾ ಶಾಲೆ ಮೇಲೆ ದಾಳಿ ನಡೆಸಿದ ವೇಳೆ ಪಿಸ್ತೂಲ್ ಮತ್ತು ಚಾಕುವನ್ನು ಬಳಸಿದ್ದಾರೆ. ಆಹಾರ ಮಳಿಗೆಯನ್ನು ಲೂಟಿ ಮಾಡಿದ್ದಾರೆ . ಈವರೆಗೆ 25 ಶವಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂಗೋದ ವಿರುಂಗ ರಾಷ್ಟ್ರೀಯ ಉದ್ಯಾನದಲ್ಲಿ ಬಂಡುಕೋರರನ್ನು ಉಗಾಂಡ ಸೈನಿಕರು ಪತ್ತೆ ಹಚ್ಚಿದ್ದು, ಅಪಹರಣಕ್ಕೆ ಒಳಗಾದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಸೇನೆ ಹೇಳಿಕೆಯಲ್ಲಿ ದೃಢಪಡಿಸಿದೆ.

ಈ ಪ್ರದೇಶದ ಪ್ರಭಾವಿ ರಾಜಕೀಯ ನಾಯಕಿ ವಿನ್ನಿ ಕಿಜಾ ಅವರು, ‘ಇದು ಹೇಡಿತನದ ದಾಳಿ’ ಎಂದು ಟ್ವಿಟರ್‌ನಲ್ಲಿ ಖಂಡಿಸಿದ್ದಾರೆ. ಶಾಲೆಗಳ ಮೇಲಿನ ದಾಳಿಗಳು ಸ್ವೀಕಾರಾರ್ಹವಲ್ಲ ಮತ್ತು ಮಕ್ಕಳ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ. ಶಾಲೆಗಳು ಯಾವಾಗಲೂ ವಿದ್ಯಾರ್ಥಿಗಳಿಗೆ ಸುರಕ್ಷಿತ ಸ್ಥಳವಾಗಿರಬೇಕು ಎಂದು ಹೇಳಿದ್ದಾರೆ.

ಮಣಿಪುರ: ನಿಲ್ಲದ ಘರ್ಷಣೆ

ಒಂದನೇ ಪುಟದಿಂದ

‘ಸಿಂಜೆಮಾಯ್‌ನಲ್ಲಿರುವ ಬಿಜೆಪಿ ಕಚೇರಿಯನ್ನು ಮತ್ತೊಂದು ಉದ್ರಿಕ್ತ ಗುಂಪು ಸುತ್ತುವರಿದಿತ್ತು. ಆದರೆ, ಸಕಾಲದಲ್ಲಿ ಬಂದ ಸೇನಾ ಯೋಧರು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದು, ಯಾವುದೇ ಹಾನಿ ಸಂಭವಿಸಿಲ್ಲ ಎಂದೂ ಹೇಳಿದ್ದಾರೆ.

ಗುಂಡಿನ ದಾಳಿ: ಬಿಷ್ಣುಪುರ ಜಿಲ್ಲೆಯ ಕ್ವಾಕ್ಟಾ ಮತ್ತು ಚುರಚಾಂದಪುರ ಜಿಲ್ಲೆಯ ಕಂಗ್ವಾಯ್‌ನಲ್ಲಿ ಶುಕ್ರವಾರ ರಾತ್ರಿ ಗುಂಡಿನ ದಾಳಿ ನಡೆದಿದೆ. ಇಂಫಾಲ್‌ನ ಪಶ್ಚಿಮ ಭಾಗದಲ್ಲಿರುವ ಇರಿಂಗ್ಬಮ್ ಠಾಣೆ ಮೇಲೆ ದಾಳಿ ನಡೆಸಿ ಶಸ್ತ್ರಾಸ್ತ್ರ ಲೂಟಿಗೆ ಯತ್ನಿಸಿದ್ದಾರೆ. ಕಿಡಿಗೇಡಿಗಳು ಮತ್ತು ಭದ್ರತಾ ಪಡೆಗಳ ನಡುವಣ ಘರ್ಷಣೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಸೇನೆ, ಅಸ್ಸಾಂ ರೈಫಲ್ಸ್ ಮತ್ತು ಮಣಿಪುರ ಕ್ಷಿಪ್ರ ಪಡೆಯು ತಡರಾತ್ರಿವರೆಗೆ ದಂಗೆ ನಿಯಂತ್ರಣಕ್ಕೆ ಜಂಟಿ ಕಾರ್ಯಾಚರಣೆ ನಡೆಸಿದವು. ಇಂಫಾಲ್‌ನ ಅರಮನೆ ಕಾಂಪೌಂಡ್ ಬಳಿ ಸಾವಿರಕ್ಕೂ ಹೆಚ್ಚು ಜನರಿದ್ದ ಗುಂಪು, ಕಟ್ಟಡಕ್ಕೆ ಬೆಂಕಿ ಹಚ್ಚಲು ಯತ್ನಿಸಿತು. ಈ ವೇಳೆ ಕ್ಷಿಪ್ರಪಡೆ ಯೋಧರು ಕಿಡಿಗೇಡಿಗಳ ಮೇಲೆ ಅಶ್ರುವಾಯು ಸಿಡಿಸಿ, ರಬ್ಬರ್ ಬುಲೆಟ್ ಹಾರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ರಾಯಲ್ ಪ್ಯಾಲೇಸ್ ಬಳಿ ಬುಡಕಟ್ಟು ಸಮುದಾಯದ ನಿವೃತ್ತ ಐಎಎಸ್ ಅಧಿಕಾರಿಗೆ ಸೇರಿದ ಆಹಾರದ ಗೋದಾಮು ಬೆಂಕಿಗಾಹುತಿಯಾಗಿದೆ. ಬಳಿಕ ಉದ್ರಿಕ್ತರು ಇಂಫಾಲ್‌ನ ವಾಂಗ್ಖೈ, ಪೊರಂಪತ್ ಮತ್ತು ತಂಗಪತ್ ಪ್ರದೇಶದ ರಸ್ತೆಗಳಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿದರು. ಇದರಿಂದ ಸಂಚಾರ ವ್ಯತ್ಯಯಗೊಂಡಿತು. ಇಂಫಾಲ್‌ನಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೇ ರಸ್ತೆಗಳನ್ನು ಬಂದ್ ಮಾಡಿ ಸಾರ್ವಜನಿಕ ಕಟ್ಟಡಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ಇಲ್ಲಿಯವರೆಗೆ 100 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ರಾಜ್ಯ ಸರ್ಕಾರ ಮುಂಜಾಗ್ರತೆಯಾಗಿ ಸಂಘರ್ಷಕ್ಕೆ ತುತ್ತಾದ 11 ಜಿಲ್ಲೆಗಳಲ್ಲಿ ಕರ್ಫ್ಯೂ ಜಾರಿಗೊಳಿಸಿ ಇಂಟರ್‌ನೆಟ್ ಸೇವೆ ಬಂದ್‌ಮಾಡಿದೆ.

ಆದಿಪುರುಷ್ ನಿಷೇಧ: ಹೈಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಆದಿಪುರುಷ್ ಚಲನಚಿತ್ರದಿಂದ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗಿದ್ದು, ಈ ಚಿತ್ರಕ್ಕೆ ನೀಡಿರುವ ಪ್ರಮಾಣಪತ್ರವನ್ನು ರದ್ದುಪಡಿಸಬೇಕು ಮತ್ತು ಪ್ರದರ್ಶನವನ್ನು ನಿಷೇಧಿಸಬೇಕು’ ಎಂದು ಕೋರಿ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಹಿಂದೂ ಸೇನಾ ಅಧ್ಯಕ್ಷ ವಿಷ್ಣುಗುಪ್ತಾ ಈ ಅರ್ಜಿ ಸಲ್ಲಿಸಿದ್ದಾರೆ. ಸೃಜನಶೀಲತೆ ಸ್ವಾತಂತ್ರ್ಯದ ಹೆಸರಿನಲ್ಲಿ ಚಿತ್ರ ನಿರ್ಮಾಪಕರು, ನಿರ್ದೇಶಕರು, ನಟರು ವಾಣಿಜ್ಯ ಉದ್ದೇಶಗಳಿಗಾಗಿ ಧಾರ್ಮಿಕ ನಾಯಕರು, ಪಾತ್ರಗಳ ಕೇಶವಿನ್ಯಾಸ, ವ್ಯಕ್ತಿತ್ವ, ಹಾವಭಾವವನ್ನು ಬಳಕೆ ಮಾಡಿಕೊಳ್ಳಲು ಅನುಮತಿ ಇರಬಾರದು’ ಎಂದುಹೇಳಿದ್ದಾರೆ.

ಸೃಜನಶೀಲತೆ ಹೆಸರಿನಲ್ಲಿ ಹೀಗೆ ಬಳಸಿಕೊಳ್ಳುವುದು ಸಂವಿಧಾನದ ವಿಧಿ 25ರ ಪ್ರಕಾರ, ಧಾರ್ಮಿಕ ಹಕ್ಕುಗಳ ಉಲ್ಲಂಘನೆಯೂ ಆಗಲಿದೆ ಎಂದು ವಕೀಲರಾದ ಪ್ರತಿಭಾ ಸಿನ್ಹಾ ಅವರ ಮೂಲಕ ಸಲ್ಲಿಸಿದ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ. ಇದೇ 16ರಂದು ಚಿತ್ರ ಬಿಡುಗಡೆಯಾಗಿದೆ.

ರಾವಣ, ಶ್ರೀರಾಮ, ಸೀತಾಮಾತೆ, ಹನುಮಾನ್ ಅವರ ಚಿತ್ರಣ ‘ಆದಿಪುರುಷ್’ ಚಿತ್ರದಲ್ಲಿದೆ. ಮಹರ್ಷಿ ವಾಲ್ಮೀಕಿ ಅವರ ರಾಮಾಯಣ, ತುಳಸಿದಾಸರ ರಾಮಚರಿತಮಾನಸದಲ್ಲಿ ಬಿಂಬಿಸಲಾಗಿರುವ ಈ ಪಾತ್ರಗಳ ಚಿತ್ರಣಕ್ಕೆ ಸಂಪೂರ್ಣ ವಿರುದ್ಧವಾಗಿ ಚಿತ್ರದಲ್ಲಿ ಬಿಂಬಿಸಲಾಗಿದೆ ಎಂದು ಆರೋಪಿಸಿದ್ದಾರೆ.

‘ಚಿತ್ರದಿಂದ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗಿದೆ. ಇದು, ಪ್ರತಿಕೂಲ ಪರಿಣಾಮಕ್ಕೂ ಕಾರಣವಾಗಬಹುದು. ಹೀಗಾಗಿ, ಚಿತ್ರಪ್ರದರ್ಶನ ನಿರ್ಬಂಧಿಸಬೇಕು’ ಎಂದು ಆಗ್ರಹಿಸಿದ್ದಾರೆ. ‘ನಾವು ಕೇಂದ್ರ ಪ್ರಸಾರ ಸಚಿವಾಲಯಕ್ಕೂ ಅಕ್ಟೋಬರ್ 4, 2022ರಂದು ಮನವಿ ಸಲ್ಲಿಸಿದ್ದೆವು. ಆದರೆ, ಯಾವುದೇ ಕ್ರಮ ಜರುಗಿಸಿಲ್ಲ’ ಎಂದು ತಿಳಿಸಿದ್ದಾರೆ.

ಓಂ ರಾವುತ್ ನಿರ್ದೇಶನ, ಭೂಷಣ್ ಕುಮಾರ್ ನಿರ್ಮಾಣದ ‘ಆದಿಪುರುಷ್’ ಚಿತ್ರ ರಾಮಾಯಣ ಪುರಾಣಗ್ರಂಥವನ್ನು ಆಧರಿಸಿದೆ. ಚಿತ್ರದಲ್ಲಿ ನಟ ಪ್ರಭಾಸ್ ಅವರು ಶ್ರೀರಾಮನ ಪಾತ್ರ ನಿಭಾಯಿಸಿದ್ದಾರೆ. ಸೀತೆಯಾಗಿ ಕೃತಿ ಸನೂನ್, ಲಕ್ಷ್ಮಣನಾಗಿ ಸನ್ನಿ ಸಿಂಗ್, ರಾವಣನಾಗಿ ಸೈಫ್ ಅಲಿ ಖಾನ್ ಕಾಣಿಸಿಕೊಂಡಿದ್ದಾರೆ.

‘ಶ್ರೀರಾಮ ಮತ್ತು ಸೀತಾಮಾತೆ ಅವರ ಪಾತ್ರವನ್ನು ಆಕ್ಷೇಪಾರ್ಹಕರವಾದ ರೀತಿಯಲ್ಲಿ ಚಿತ್ರದಲ್ಲಿ ಬಿಂಬಿಸಲಾಗಿದೆ. ಇದರಿಂದ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗಿದೆ’ ಎಂದು ಅರ್ಜಿದಾರರು ವಾದಿಸಿದ್ದಾರೆ.

ನೇಪಾಳ: ಚಿತ್ರ ಪ್ರದರ್ಶನ ಸ್ಥಗಿತ

ಕಠ್ಮಂಡು (ಪಿಟಿಐ); ಬಾಲಿವುಡ್‌ನ ‘ಆದಿಪುರುಷ್’ ಚಿತ್ರದಲ್ಲಿನ ಸೀತೆಯ ಜನ್ಮಸ್ಥಳ ಕುರಿತ ತಪ್ಪನ್ನು ಸರಿಪಡಿಸುವಂತೆ ನಗರ ಮೇಯರ್ ಬಾಲೇಂದ್ರ ಶಾ ಅವರು ನಿರ್ಮಾಪಕರಿಗೆ ಸೂಚಿಸಿದ ಬಳಿಕ ನೇಪಾಳದ ಕಠ್ಮಂಡುವಿನಲ್ಲಿ ಚಿತ್ರಪ್ರದರ್ಶನವನ್ನು ಸ್ಥಗಿತಗೊಳಿಸಲಾಗಿದೆ.

ಆದಿಪುರುಷ್‌ನಲ್ಲಿರುವ ‘ಜಾನಕಿ ಭಾರತದ ಮಗಳು’ ಎಂಬ ಸಾಲುಗಳನ್ನು ನೇಪಾಳ ಮತ್ತು ಭಾರತದಲ್ಲಿ ತೆಗೆದುಹಾಕುವವರೆಗೂ, ಕಠ್ಮಂಡು ಮೆಟ್ರೊಪಾಲಿಟನ್ ನಗರದಲ್ಲಿ ಯಾವುದೇ ಹಿಂದಿ ಚಲನಚಿತ್ರಗಳ ಪ್ರದರ್ಶನಕ್ಕೆ ಅನುಮತಿ ನೀಡುವುದಿಲ್ಲ ಎಂದು ಮೇಯರ್ ಶಾ ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ.

ಮೂರು ದಿನಗಳಲ್ಲಿ ಸಂಭಾಷಣೆ ಬದಲಾಯಿಸುವಂತೆ ಶಾ ಅವರು ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ನಿರ್ಮಾಪಕರಿಗೆ ಮನವಿ ಮಾಡಿದ್ದಾರೆ.

‘ಸೀತೆಯನ್ನು ಭಾರತದ ಮಗಳು’ ಎಂದು ಹೇಳುವ ಸಂಭಾಷಣೆ ಬದಲಾಯಿಸಿದ ನಂತರವೇ ಚಿತ್ರಮಂದಿರಗಳಲ್ಲಿ ಚಿತ್ರ ಪ್ರದರ್ಶಿಸಲು ಅನುಮತಿ ನೀಡಲಾಗುವುದು ಎಂದು ನೇಪಾಳದ ಚಲನಚಿತ್ರ ಪ್ರಮಾಣೀಕರಣ ಮಂಡಳಿ ತಿಳಿಸಿದೆ.

ಪೌರಾಣಿಕ ಪುಸ್ತಕಗಳ ಪ್ರಕಾರ, ಸೀತೆ ನೇಪಾಳದಲ್ಲಿರುವ ಜನಕಪುರದಲ್ಲಿ ಜನಿಸಿದಳು ಎಂದು ನಂಬಲಾಗಿದೆ.

ಗಂಟಲು ಸೀಳಿ 11 ರೈತರ ಹತ್ಯೆ

ಕನೊ, ನೈಜೀರಿಯಾ (ಎಎಫ್‌ಪಿ): ಈಶಾನ್ಯ ನೈಜೀರಿಯಾದಲ್ಲಿ ಶಂಕಿತ ಬೋಕೊ ಹರಮ್ ಉಗ್ರರು 11 ಮಂದಿ ರೈತರನ್ನು ಹತ್ಯೆ ಮಾಡಿದ್ದಾರೆ ಎಂದು ಸ್ಥಳೀಯ ಸೇನಾಪಡೆ ಶನಿವಾರ ತಿಳಿಸಿವೆ.

ಬೊರ್ನೊ ಸಮೀಪದ ಕುವಾಯಾಂಗಿಯಾ ಗ್ರಾಮಕ್ಕೆ ಬೈಕ್‌ನಲ್ಲಿ ಬಂದ ದಾಳಿಕೋರರು ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತರ ಕೈಗಳನ್ನು ಹಿಂದೆ ಕಟ್ಟಿ ಹಾಕಿ ಅವರ ಗಂಟಲು ಸೀಳಿ ಕೊಂದಿದ್ದಾರೆ. ಸಮೀಪ ಪ್ರದೇಶದಲ್ಲಿರುವ ಸೈನಿಕರಿಗೆ ಗುಂಡಿನ ಸದ್ದು ಕೇಳಬಹುದೆಂಬ ಕಾರಣಕ್ಕೆ ಬಂದೂಕುಗಳನ್ನು ಬಳಸಿಲ್ಲ ಎಂದು ಸೇನಾ ನಾಯಕ ಬಾಬಾಕುರಾ ಕುಲೋ ಹೇಳಿದರು.

ಮೃತರೆಲ್ಲರೂ ಸಮೀಪದ ದಲ್ವಾ ಗ್ರಾಮದ ನಿವಾಸಿಗಳಾಗಿದ್ದಾರೆ. ಉಗ್ರರ ದಾಳಿಯಿಂದ ತಪ್ಪಿಸಿಕೊಳ್ಳಲು 2018ರಿಂದಲೂ ಬೊರ್ನೊ ರಾಜ್ಯಕ್ಕೆ ಬೇರೆ ಪ್ರದೇಶಗಳಿಂದ ಜನರು ಬರುತ್ತಿದ್ದಾರೆ.

ಬೋಕೊ ಹರಮ್ ಮತ್ತು ಪಶ್ಚಿಮ ಆಫ್ರಿಕಾದ ಐಎಸ್ ಉಗ್ರರು ಪದೇ ಪದೇ ರೈತರು, ಮೀನುಗಾರರು, ಕುರಿಗಾಹಿಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದ್ದಾರೆ ಎಂದೂ ಮೂಲಗಳು ಹೇಳಿವೆ.

ಯೋಗ ದಿನ: 180ಕ್ಕೂ ಹೆಚ್ಚು ದೇಶಗಳು ಭಾಗಿ

ನ್ಯೂಯಾರ್ಕ್ (ಪಿಟಿಐ): ಇದೇ 21ರಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಅಮೆರಿಕದಲ್ಲಿ ನಡೆಯಲಿರುವ ಯೋಗ ದಿನಾಚರಣೆಯಲ್ಲಿ 180ಕ್ಕೂ ಹೆಚ್ಚು ದೇಶಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ವಿವಿಧ ದೇಶಗಳ ರಾಜತಾಂತ್ರಿಕರು, ಕಲಾವಿದರು, ಶಿಕ್ಷಣ ತಜ್ಞರು, ಉದ್ಯಮಿಗಳು ಭಾಗವಹಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯು ಅಮೆರಿಕದ ಕೇಂದ್ರ ಕಚೇರಿಯಲ್ಲಿ ಬೆಳಿಗ್ಗೆ 8 ರಿಂದ 9 ಗಂಟೆಯೊಳಗೆ ನಡೆಯಲಿದೆ.

3000 ವರ್ಷದ ಖಡ್ಗ ಪತ್ತೆ

ಬರ್ಲಿನ್ (ಎಪಿ): ಮೂರು ಸಾವಿರ ವರ್ಷಗಳಿಗೂ ಹಳೆಯದಾದ, ಈಗಲೂ ಹೊಳೆಯುತ್ತಿರುವ ಕಂಚಿನ ಖಡ್ಗ ಜರ್ಮನಿಯಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕಳೆದ ವಾರ ದಕ್ಷಿಣ ಜರ್ಮನಿಯ ನೊರ್ಡ್ಲಿಂಗನ್‌ನಲ್ಲಿ ಉತ್ಖನನ ವೇಳೆ ಈ ಖಡ್ಗ ಪತ್ತೆಯಾಗಿದೆ. ಇದು ಕ್ರಿ.ಪೂ 14ನೇ ಶತಮಾನದ ಅಂತ್ಯದಲ್ಲಿ ತಯಾರಾಗಿದ್ದಿರಬಹುದು ಎಂದು ಬವಾರಿಯಾ ರಾಜ್ಯದ ಐತಿಹಾಸಿಕ ವಸ್ತುಗಳ ಸಂಗ್ರಹಾಲಯ ಕಚೇರಿ ತಿಳಿಸಿದೆ.

‘ಖಡ್ಗವು ಕಂಚಿನ ಅಷ್ಟಭುಜಾಕೃತಿಯ ಹಿಡಿಕೆ ಹೊಂದಿದೆ. ಒಬ್ಬ ವ್ಯಕ್ತಿ, ಮಹಿಳೆ ಮತ್ತು ಬಾಲಕನ ಸಮಾಧಿ ಅಡಿ ಇದು ಪತ್ತೆಯಾಗಿದೆ. ಈ ಮೂವರೂ ಸಂಬಂಧಿಗಳೇ ಎಂಬುದು ಸ್ಪಷ್ಟವಾಗಿಲ್ಲ. ಖಡ್ಗವನ್ನು ಹೆಚ್ಚಿನ ಪರಿಶೀಲನೆಗೆ ಒಳಪಡಿಸಲಾಗಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ರೈಲು ದುರಂತ: ಮೃತರ ಸಂಖ್ಯೆ 291ಕ್ಕೆ

ಕಟಕ್ (ಪಿಟಿಐ) (ಒಡಿಶಾ): ಬಾಲೇಶ್ವರ ರೈಲು ಅಪಘಾತದಲ್ಲಿ ಗಾಯಗೊಂಡು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಿಹಾರದ ವ್ಯಕ್ತಿಯೊಬ್ಬರು ಶನಿವಾರ ಮೃತಪಟ್ಟಿದ್ದು, ದುರಂತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 291ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರದ ಭಾಗಲ್ಪುರ ಜಿಲ್ಲೆಯ ಸಾಹಿಲ್ ಮನ್ಸೂರ್ (32) ಮೃತಪಟ್ಟವರು. ಇವರು ಕಿಡ್ನಿ ಸಂಬಂಧಿ ರೋಗದಿಂದಲೂ ಬಳಲುತ್ತಿದ್ದರು ಮತ್ತು ಇವರಿಗೆ ಡಯಾಲಿಸಿಸ್ ಮಾಡಲಾಗುತ್ತಿತ್ತು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಜುನಾಗಢ: ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ– ಒಬ್ಬ ಸಾವು

ಜುನಾಗಢ (ಪಿಟಿಐ): ಒತ್ತುವರಿ ಆರೋಪದ ಮೇಲೆ ದರ್ಗಾವೊಂದನ್ನು ತೆರವುಗೊಳಿಸುವ ಸಂಬಂಧ ಮಹಾನಗರ ಪಾಲಿಕೆ ನೋಟಿಸ್ ನೀಡಿದ್ದನ್ನು ಖಂಡಿಸಿ ಶುಕ್ರವಾರ ರಾತ್ರಿ ಇಲ್ಲಿ ನಡೆದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ್ದು, ನಾಗರಿಕರೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ, ಲಾಠಿ ಪ್ರಹಾರ ನಡೆಸಿದ್ದಾರೆ. ಕಲ್ಲುತೂರಾಟದಲ್ಲಿ ಜುನಾಗಢದ ಡಿವೈಎಸ್ಪಿ, ಮೂವರು ಸಬ್ ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ಐವರು ಪೊಲೀಸರು ಗಾಯಗೊಂಡಿದ್ದಾರೆ ಎಂದೂ ವಿವರಿಸಿದ್ದಾರೆ.

ಕಲ್ಲು ತೂರಾಟದಿಂದಾಗಿಯೇ ವ್ಯಕ್ತಿಯು ಮೃತಪಟ್ಟಿರುವುದಾಗಿ ಪೊಲೀಸರು ಶಂಕಿಸಿದ್ದಾರೆ.


ಜುನಾಗಢದ ಮಜೆವಾಡಿ ದರ್ವಾಜಾ ಬಳಿಯ ದರ್ಗಾದ ಜಾಗದ ಒಡೆತನಕ್ಕೆ ಸಂಬಂಧಿಸಿರುವ ದಾಖಲೆಗಳನ್ನು ಹಾಜರುಪಡಿಸುವಂತೆ ಮಹಾನಗರ ಪಾಲಿಕೆಯು ಜೂನ್ 14ರಂದು ನೋಟಿಸ್ ಜಾರಿ ಮಾಡಿತ್ತು. ಇದನ್ನು ಖಂಡಿಸಿ 500ರಿಂದ 600 ಮಂದಿ ದರ್ಗಾದ ಬಳಿ ಪ್ರತಿಭಟಿಸಿ, ರಸ್ತೆ ತಡೆದಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ರವಿತೇಜ ವಸಂಸೆಟ್ಟಿ ಶನಿವಾರ ತಿಳಿಸಿದ್ದಾರೆ.

ಡೈಮಂಡ್ ಲೀಗ್: ಲುಸಾನ್ ಲೆಗ್‌ಗೆ ನೀರಜ್ ಪಾಲ್ಗೊಳ್ಳುವ ಸಾಧ್ಯತೆ

ನವದೆಹಲಿ (ಪಿಟಿಐ): ಸ್ನಾಯು ಸೆಳೆತದಿಂದ ಚೇತರಿಸಿಕೊಳ್ಳುತ್ತಿರುವ ವಿಶ್ವದ ಅಗ್ರಮಾನ್ಯ ಜಾವೆಲಿನ್ ಥ್ರೊ ಸ್ಪರ್ಧಿ ನೀರಜ್ ಚೋಪ್ರಾ ಅವರು ಜೂನ್ 30ರಂದು ಲುಸಾನ್‌ನಲ್ಲಿ ನಡೆಯಲಿರುವ ಆರನೇ ಹಂತದ ಡೈಮಂಡ್ ಲೀಗ್‌ನಲ್ಲಿ ಮರಳಿ ಕಣಕ್ಕಿಳಿಯುವ ಸಾಧ್ಯತೆಯಿದೆ.

ಈ ಬಗ್ಗೆ ನೀರಜ್ ಚೋಪ್ರಾ ಅಧಿಕೃತವಾಗಿ ಹೇಳಿಕೆ ನೀಡಿಲ್ಲ. ಆದರೆ ತಿಂಗಳಾಂತ್ಯದ ಈ ಸ್ಪರ್ಧೆಯಲ್ಲಿ ಭಾರತದ ಸ್ಪರ್ಧಿ ಪಾಲ್ಗೊಳ್ಳಲಿದ್ದಾರೆ ಎಂದು ಸ್ಪರ್ಧೆಯ ಬಗ್ಗೆ ಇರುವ ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

‘ಜಾವೆಲಿನ್‌ನಲ್ಲಿ ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರಿಗೆ ಚೆಕ್ ರಿಪಬ್ಲಿಕ್‌ನ ಯಾಕುಬ್ ವಡ್ಲೆಚ್ ಮತ್ತು ಜರ್ಮನಿಯ ಜೂಲಿಯನ್ ವೆಬರ್ ಅವರು ಸವಾಲೊಡ್ಡಲಿದ್ದಾರೆ’ ಎಂದು ಜಾಲತಾಣದಲ್ಲಿ ಬರೆಯಲಾಗಿದೆ.



ತರಬೇತಿ ವೇಳೆ ಸ್ನಾಯು ಸೆಳೆತವಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ನೆದರ್ಲೆಂಡ್‌ನಲ್ಲಿ ಎಫ್‌ಬಿಕೆ ಗೇಮ್ಸ್ (ಜೂನ್ 4) ಮತ್ತು ಪಾವೊ ನೂರ್ಮಿ ಕೂಟ (ಜೂನ್ 13)ದಿಂದ ಹಿದೆಸರಿದಿರುವುದಾಗಿ 25 ವರ್ಷದ ಚೋಪ್ರಾ ಕಳೆದ ತಿಂಗಳು ಮಾಹಿತಿ ನೀಡಿದ್ದರು.

ಫುಟ್‌ಬಾಲ್: ಇಂಟರ್‌ಕಾಂಟಿನೆಂಟಲ್ ಕಪ್ ಫೈನಲ್

ಪ್ರಶಸ್ತಿಗೆ ಭಾರತ– ಲೆಬನಾನ್ ಸೆಣಸು

ಭುವನೇಶ್ವರ (ಪಿಟಿಐ): ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಭಾರತ ಮತ್ತು ಲೆಬನಾನ್ ತಂಡಗಳು ಭಾನುವಾರ ಎದುರಾಗಲಿದ್ದು, ಪ್ರಬಲ ಪೈಪೋಟಿ ನಿರೀಕ್ಷಿಸಲಾಗಿದೆ.

2018 ರಲ್ಲಿ ಆಯೋಜಿಸಿದ್ದ ಚೊಚ್ಚಲ ಟೂರ್ನಿ ಗೆದ್ದುಕೊಂಡಿದ್ದ ಭಾರತ ತಂಡ, ಟ್ರೋಫಿಯನ್ನು ಮತ್ತೆ ತನ್ನದಾಗಿಸಿಕೊಳ್ಳಲು ಪ್ರಯತ್ನಿಸಲಿದೆ. ಗುರುವಾರ ಇವೆರಡು ತಂಡಗಳ ನಡುವಣ ಲೀಗ್ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತ್ತು.

ಆತಿಥೇಯ ತಂಡ ಗೋಲು ಗಳಿಸುವ ಎರಡು ಉತ್ತಮ ಅವಕಾಶಗಳನ್ನು ಹಾಳುಮಾಡಿಕೊಂಡಿತ್ತು. ಅನಿರುದ್ಧ್ ಥಾಪಾ ಅವರು ನಾಲ್ಕನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಲು ವಿಫಲರಾಗಿದ್ದರೆ, ನಾಯಕ ಸುನಿಲ್ ಚೆಟ್ರಿ ತಮಗೆ ದೊರೆತಿದ್ದ ನಿಖರ್ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸುವಲ್ಲಿ ಎಡವಿದ್ದರು.

ಭಾರತ ತಂಡದ ಕೋಚ್ ಐಗೊರ್ ಸ್ಟಿಮ್ಯಾಚ್ ಅವರು ವನುವಾಟು ಮತ್ತು ಲೆಬನಾನ್ ವಿರುದ್ಧದ ಪಂದ್ಯಗಳಿಗೆ ತಂಡದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿ ಅಚ್ಚರಿ ಮೂಡಿಸಿದ್ದರು. ಭಾರತ ತಂಡ ಮೊದಲ ಪಂದ್ಯದಲ್ಲಿ 2–0 ರಲ್ಲಿ ಮಂಗೋಲಿಯಾ ತಂಡವನ್ನು ಮಣಿಸಿತ್ತು. ಆದರೆ ವನುವಾಟು ಎದುರಿನ ಪಂದ್ಯಕ್ಕೆ 9 ಬದಲಾವಣೆಗಳನ್ನು ಮಾಡಲಾಗಿತ್ತು. ಲೆಬನಾನ್ ವಿರುದ್ಧದ ಪಂದ್ಯಕ್ಕೆ 10 ಬದಲಾವಣೆಗಳನ್ನು ಮಾಡಿದ್ದರು. ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಮತ್ತು ಚೆಟ್ರಿ ಅವರನ್ನು ಬೆಂಚ್‌ನಲ್ಲಿ ಕೂರಿಸಲಾಗಿತ್ತು.

ಮೂರು ಪಂದ್ಯಗಳಲ್ಲೂ ಆರಂಭಿಕ ಇಲೆವೆನ್‌ನಲ್ಲಿ ಆಡಿದ್ದ ಡಿಫೆಂಡರ್ ಸಂದೇಶ್ ಜಿಂಘಾನ್ ಅವರು ಗಮನ ಸೆಳೆದಿದ್ದರು. ಕಳೆದ ಪಂದ್ಯದಲ್ಲಿ ಚೆಟ್ರಿ ಬದಲು ಕಣಕ್ಕಿಳಿದಿದ್ದ ಆಶಿಖ್ ಕುರುಣಿಯನ್ ಕೂಡಾ ಸ್ಟಿಮ್ಯಾಚ್ ಅವರ ನಿರೀಕ್ಷೆಗೆ ತಕ್ಕಂತೆ ಆಡಿದ್ದರು.

‘ಗೋಲು ಗಳಿಸಿಲ್ಲ ಎಂಬುದನ್ನು ಹೊರತುಪಡಿಸಿದರೆ, ಕಳೆದ ಪಂದ್ಯದಲ್ಲಿ (ಲೆಬನಾನ್ ವಿರುದ್ಧ) ನಾವು ಹೆಚ್ಚಿನ ತಪ್ಪುಗಳನ್ನು ಮಾಡಿಲ್ಲ. ಲೆಬನಾನ್ ಆಟಗಾರರ ದೈಹಿಕ ಸಾಮರ್ಥ್ಯಕ್ಕೆ ತಕ್ಕ ಪೈಪೋಟಿ ನೀಡಲು ನಾವು ವೇಗ ಮತ್ತು ಆಕ್ರಮಣಕಾರಿ ಮನೋಭಾವದೊಂದಿಗೆ ಆಡಬೇಕು’ ಎಂದು ಸ್ಟಿಮ್ಯಾಚ್ ಹೇಳಿದ್ದಾರೆ.

ಟಿಟಿ: ಸೆಮಿಫೈನಲ್‌ಗೆ ಹರ್ಮೀತ್ ದೇಸಾಯಿ

ಲಾಗೊಸ್ (ಪಿಟಿಐ): ಭಾರತದ ಹರ್ಮೀತ್ ದೇಸಾಯಿ ವಿಶ್ವ ಟೇಬಲ್ ಟೆನಿಸ್ ಕಂಟೇಡರ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.


ಟೂರ್ನಿಯುದ್ದಕ್ಕೂ ಬಲಿಷ್ಠ ಆಟಗಾರರನ್ನು ಮಣಿಸಿದ್ದ ಅವರು ಶನಿವಾರ 3–1ರಿಂದ ಚೀನಾದ 26ನೇ ರ್‍ಯಾಂಕ್‌ನ ಪೆಂಗ್ ಶಿಯಾಂಗ್ ಅವರನ್ನು ಪರಾಭವಗೊಳಿಸಿದರು.

ಶುಕ್ರವಾರ ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ದೇಸಾಯಿ 11–7, 5–11, 11–7, 11–1ರಿಂದ ಕೊರಿಯಾದ ಅಗ್ರಶ್ರೇಯಾಂಕದ ಆಟಗಾರ ಥ್ಯಾಂಗ್ ವೂಜಿನ್ ವಿರುದ್ಧ ಜಯಿಸಿದ್ದರು.

134ನೇ ಶ್ರೇಯಾಂಕದ ದೇಸಾಯಿ ಎಂಟರ ಘಟ್ಟದಲ್ಲಿ ಚೀನಾದ ಆಟಗಾರನ ವಿರುದ್ಧ ಅಮೋಘ ಆಟವಾಡಿದರು. 20 ವರ್ಷದ ಪೆಂಗ್ ಅವರು ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರನಾಗಿದ್ದರು. ಈ ಪಂದ್ಯದ ಮೊದಲ ಗೇಮ್‌ನಲ್ಲಿ 29 ವರ್ಷದ ದೇಸಾಯಿ ಸುಲಭ ಜಯ ಸಾಧಿಸಿದರು. ಆದರೆ ಎರಡನೇ ಗೇಮ್‌ನಲ್ಲಿ ಕೆಲವು ತಪ್ಪುಗಳನ್ನು ಮಾಡಿದ ದೇಸಾಯಿ ಸೋಲಬೇಕಾಯಿತು. ಮೂರನೇ ಗೇಮ್‌ನಲ್ಲಿ ಮತ್ತೆ ಪುಟಿದೆದ್ದರು. ನಾಲ್ಕನೇಯದ್ದರಲ್ಲಿಯೂ ಮೇಲುಗೈ ಸಾಧಿಸಿದರು.



ಶುದ್ಧರಾಗಧಾರಿಯ 'ನಾದದ ನವನೀತ' 9



ಡರ್ಬನ್‌ನಲ್ಲಿ ಗಾಂಧಿ ಸ್ಮರಣೆ 10



ಭಾರತದ ಮೊದಲ ಮಹಿಳಾ ಕುಸ್ತಿಪಟು ಹಮೀದಾ ಬಾನು 11



ಆಕಾಶರಾಯನ ಬಾರುಕೋಲು ಬರ-ಸಿಡಿಲು

'ಅಲ್ಲಲ್ಲಿ ಸಾಧಾರಣದಿಂದ ಚದುರಿದಂತೆ ಮಳೆಯಾಗಲಿದೆ' ಎಂಬಂತಹ ಹವಾಮುನ್ಸೂಚನೆ ಕಿವಿಯ ಮೇಲೆ ಬೀಳುವ ಈ ಹೊತ್ತಲ್ಲಿ ಮಾಯಾವಿ ಗಾಳಿಯ ವೇಗ ಹಾಗೂ ಅದು ಒಡ್ಡುವ ಪಾರಿಸರಿಕ ಬದಲಾವಣೆಯನ್ನು ಗುರುತಿಸುವ ವಿಜ್ಞಾನದಲ್ಲಿ ಏನೇನೆಲ್ಲ ಆಗಿದೆ ಎನ್ನುವುದನ್ನು ಲವಲವಿಕೆಯಿಂದ ನಿರೂಪಿಸುತ್ತಿದೆ ಈ ಲೇಖನ.

ನಾಗೇಶ ಹೆಗಡೆ

ಹವಾಮುನ್ಸೂಚನೆಯ ಮಾತು ಬಂದಾಗಲೆಲ್ಲ ಆರ್.ಕೆ. ಲಕ್ಷ್ಮಣ್ ಅವರದೊಂದು ಕಾರ್ಟೂನ್ ನೆನಪಾಗುತ್ತದೆ: ಬಾನುಲಿ ಕೇಂದ್ರದಲ್ಲಿ ಮೈಕ್ ಎದುರು ಒಬ್ಬಾತ 'ಅಲ್ಲಲ್ಲಿ ಮೋಡ ಕವಿದ ವಾತಾವರಣ, ಒಣ ಹವೆ ಮುಂದುವರೆಯುತ್ತದೆ' ಎಂದು ಹವಾಮಾನ ವರದಿಯನ್ನು ಓದುತ್ತಿದ್ದಾನೆ. ಆದರೆ ಕಿಟಕಿಯಲ್ಲಿ ಜಡಿಮಳೆ ಕಾಣುತ್ತಿದ್ದು, ವಾರ್ತೆ ಓದುತ್ತಿದ್ದವನೇ ಮೊಣಕಾಲು ನೀರಲ್ಲಿ ನಿಂತಿದ್ದಾನೆ.

ಗಾಳಿಮಳೆಯ ಮುನ್ಸೂಚನೆ ಹೇಳುವವರನ್ನು ಎಲ್ಲರೂ ಲೇವಡಿ ಮಾಡುತ್ತಲೇ ಬಂದಿದ್ದಾರೆ. ಚಾರ್ಲ್ಸ್ ಡಾರ್ವಿನ್‌ನನ್ನು ಹೊತ್ತು ಅರ್ಧ ಪ್ರಪಂಚ ಸುತ್ತಾಡಿದ 'ಎಚ್‌ಎಮ್‌ಎಸ್ ಬೀಗಲ್' ಹಡಗಿನ ಕ್ಯಾಪ್ಟನ್ ಆಗಿದ್ದ ರಾಬರ್ಟ್ ಫಿಟ್ಝ್‌ರಾಯ್ ಹೆಸರನ್ನು ನಾವು ಕೇಳಿದ್ದೇವೆ. ಐದು ವರ್ಷ ಹಡಗಿನಲ್ಲೇ ಸುತ್ತಾಡಿ ಹಿಂದಿರುಗಿದ ನಂತರ ಆತ ಇಂಗ್ಲೆಂಡಿನ (ಜಗತ್ತಿನ) ಮೊದಲ ಹವಾಮುನ್ಸೂಚನಾ ಕೇಂದ್ರವನ್ನು ಸ್ಥಾಪಿಸುತ್ತಾನೆ. ಸಮುದ್ರದಂಚಿಗೆ ನೂರಾರು ಬ್ಯಾರೊಮೀಟರ್‌ಗಳನ್ನು ಸ್ಥಾಪಿಸಿ, ಕೆಲ ಮಟ್ಟಿಗೆ ಸರಿಯಾಗಿಯೇ ಮುನ್ಸೂಚನೆ ನೀಡುತ್ತಿರುತ್ತಾನೆ. ಮೀನುಗಾರರ ವಿಶ್ವಾಸ ಗಳಿಸುತ್ತಾನೆ. ಆದರೂ ಆತ ಆಗಾಗ ನೀಡುತ್ತಿದ್ದ ತಪ್ಪು ಮುನ್ಸೂಚನೆಗಳ ಬಗ್ಗೆ ಅರಮನೆಯ ಅಧಿಕಾರಿಗಳು ಮತ್ತು ಸುದ್ದಿಗಾರರು ಅದೆಷ್ಟು ಕಿಚಾಯಿಸುತ್ತಿದ್ದರೆಂದರೆ, ಖಿನ್ನನಾಗಿ ತನ್ನ 59ನೇ ವಯಸ್ಸಿನಲ್ಲಿ (1865) ರೇಝರ್ ಬ್ಲೇಡ್‌ನಿಂದ ಕುತ್ತಿಗೆಯನ್ನು ಕೊಯ್ದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

*

ಒಂದೊಂದು ಏಟಿಗೂ ಸಾವಿರಾರು ಜನರನ್ನು ಕೊಲ್ಲಬಲ್ಲ ಭೂಕಂಪನ, ಸುನಾಮಿ, ಜ್ವಾಲಾಮುಖಿಗಳಂಥ ದೈತ್ಯಪ್ರಕೋಪಗಳ ಪೈಕಿ ಎಲ್ಲಕ್ಕಿಂತ ಪ್ರಚಂಡವಾದದ್ದು ಇದೇ ಗಾಳೀರಾಯ. ಏಕೆಂದರೆ ಇದು ಇಡೀ ಭೂಮಿಯನ್ನು ಆವರಿಸಿದ್ದೂ ಅಲ್ಲದೆ ಸದಾ ಚಲಿಸುತ್ತ, ಹಗಲೂ ರಾತ್ರಿ ಎಲ್ಲೋ ಯಾರಿಗೋ ಶಾಪವಾಗಿಯೋ ಮತ್ತೆಲ್ಲೋ ಮತ್ಯಾರಿಗೋ ವರವಾಗುತ್ತಲೋ ರೌಂಡ್ ಹಾಕುತ್ತಿರುತ್ತದೆ. ಇದರ ಚಲನೆಯನ್ನು ಅರ್ಥಮಾಡಿಕೊಳ್ಳಲು ಅನಾದಿ ಕಾಲದಿಂದಲೂ ಎಷ್ಟೊಂದು ಮಂದಿ ತಿಣುಕಿದ್ದಾರೆ. ಪ್ರತಿ ಹುಣ್ಣಿಮೆ, ಅಮಾವಾಸ್ಯೆಯಂದು ಸಮುದ್ರ ಉಕ್ಕೇರುವುದನ್ನು ಕಂಡು ಗ್ರಹ-ನಕ್ಷತ್ರಗಳೇ ಗಾಳಿಯನ್ನು ಅಟ್ಟಾಡಿಸುತ್ತಿವೆ ಎಂದು ಅದರ ಲೆಕ್ಕಾಚಾರ ಇಟ್ಟವರೇನು; ಚಂದ್ರ ಸೂರ್ಯರ ಚಲನೆಯ ಹಿಂದೆ ತಾರಾಪುಂಜಗಳ ಕೈವಾಡ ಇದೆಯೆಂದು ಗ್ರಹಿಸಿ ನಕ್ಷತ್ರಗಳ ನಕಾಶೆ ಬರೆದವರೇನು; ಕುಜ-ಶನಿ-ಗುರು-ಕೇತು-ರಾಹುಗಳೂ ಅಷ್ಟೇ ಮುಖ್ಯವೆಂದು ಅವುಗಳನ್ನೂ ಸೇರಿಸಿ ಪಂಚಾಂಗವನ್ನು ಸೃಷ್ಟಿಸಿದವರೇನು. ಒಬ್ಬಿಬ್ಬರು ದೇವರುಗಳಿಂದ ಇದರ ನಿಯಂತ್ರಣ ಸಾಧ್ಯವಿಲ್ಲವೆಂದು ಒಂದೊಂದು ದಿಕ್ಕಿಗೆ ಒಬ್ಬೊಬ್ಬರಂತೆ ಅಷ್ಟ ದಿಕ್ಪಾಲಕರನ್ನು ಕಲ್ಪಿಸಿಕೊಂಡು ಶಾಂತಿಮಂತ್ರಗಳನ್ನ ರಚಿಸಿದ್ದೇನು; ಮೇಘನಾದ, ಘಟೋತ್ಕಚರಂಥ ಪ್ರಚಂಡ ಮಾಯಾವಿಗಳ ಕತೆ ಕಟ್ಟಿ ಆಕಾಶದ ಭೀಭತ್ಸ ಚಿತ್ರಣ ಕೊಟ್ಟಿದ್ದೇನು....

ಪವನವಿಜ್ಞಾನದ ಹನುಮಲಂಘನ

'ಮಾಯಾವಿ' ಎಂಬ ಪದಕ್ಕೆ ವ್ಯಕ್ತರೂಪವನ್ನು ಕೊಡುವುದಾದರೆ ಈ ಗಾಳೀರಾಯನಷ್ಟು ಸೂಕ್ತ ಬೇರೆ ಯಾರೂ ಇಲ್ಲ. ಮಂಜು, ಮಳೆ, ಗುಡುಗು, ಸಿಡಿಲು, ಹಿಮಪಾತ, ಕುಳಿರ್ಗಾಳಿ, ಜಂಝಾವಾತ, ದೂಳುಮಾರುತ, ಚಂಡಮಾರುತ ಒಂದೊಂದಕ್ಕೂ ಒಂದೊಂದು ಲಕ್ಷಣ. ಸದಾ ಹಿಮದಲ್ಲೇ ಬದುಕುವ ಎಸ್ಕಿಮೊಗಳ ನಿಘಂಟಿನಲ್ಲಿ ಹಿಮಪಾತಕ್ಕೆ ಸಂಬಂಧಿಸಿದ 80ಕ್ಕೂ ಹೆಚ್ಚು ಪದಗಳಿವೆಯಂತೆ. ಅವರ ಬದುಕಿಗೆ ಅವೆಲ್ಲವೂ ಮುಖ್ಯ (ಮುಷ್ಟಿಗಾತ್ರದ ಹೃದಯದ ಕೆಲಸವನ್ನು ವಿವರಿಸಲು ಕಾರ್ಡಿಯಾಲಜಿಸ್ಟ್‌ಗಳ ನಿಘಂಟಿನಲ್ಲಿ ನೂರೆಂಟು ಪದಗಳಿವೆ ತಾನೆ?). ವಿಜ್ಞಾನಿಗಳು ಈ ನಭೋವೈಚಿತ್ರ್ಯವನ್ನು ಅರ್ಥಮಾಡಿಕೊಳ್ಳಲು ಏನೆಲ್ಲ ತಿಣುಕಿದ್ದಾರೆ. ಏನೆಲ್ಲ ಬಗೆಯ ಸರಕು ಸಾಧನಗಳನ್ನು ತಮ್ಮ ಬತ್ತಳಿಕೆಗೆ ಸೇರಿಸಿಕೊಂಡಿದ್ದಾರೆ. ಟೆಲಿಗ್ರಾಫ್ ಬಂತೋ 'ಅಹಾ, ನೂರು ಕಿಲೊಮೀಟರ್ ಆಚಿನ ಈಗಿನ ಹವಾಮಾನ ಗೊತ್ತಾದರೆ ಇಲ್ಲಿನ ನಾಳಿನ ಹವಾಮಾನ ಗೊತ್ತಾದಂತೆ' ಎಂದರು. ಗಾಳಿಯ ವೇಗ ಅಳೆಯುವ ಸಾಧನ, ಮಳೆ ಅಳೆಯುವ ಸಾಧನಗಳು ಬಂದವು. ವಾಯುಭಾರ, ತೇವಾಂಶ, ಉಷ್ಣಾಂಶಗಳನ್ನು ಅಳೆಯುವ ಸಾಧನ, ವಾಯುವಿನ ಎತ್ತರ ಅಳೆಯುವ ಉಪಕರಣ- ಒಂದೊಂದು ಬಂದಾಗಲೂ ಇಂಚಿಂಚಾಗಿ ಹವಾಗುಣದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವತ್ತ ಹೊಸಹೊಸ ಹೆಜ್ಜೆಗುರುತು ಮೂಡಿದವು. ಹೀಲಿಯಂ ಬಲೂನುಗಳು, ವಿಮಾನಗಳು ಬಂದಮೇಲೆ, ಅದರ ಬೆನ್ನಿಗೇ ವಿಶ್ವಯುದ್ಧ ಬಂದಾಗಲಂತೂ ಪವನವಿಜ್ಞಾನಕ್ಕೂ ಹನುಮಲಂಘನ ಸಿಕ್ಕಿಬಿಟ್ಟಿತು. ಈಗೇನು, ರಾಕೆಟ್ಟು, ರಡಾರ್, ಉಪಗ್ರಹ, ಸೂಪರ್ ಕಂಪ್ಯೂಟರ್ ಎಲ್ಲ ಬಂದಿವೆ.

ಆದರೂ ಈ ಮಾಯಾವಿ ಎಲ್ಲರ ಆಟ ಆಡಿಸುತ್ತಿದೆ. ಕಾರಣ ಏನು ಅನ್ನೋದಕ್ಕೆ ಸರಳ ಉದಾಹರಣೆ ಇಲ್ಲಿದೆ: ಮಧುಗಿರಿ ತಾಲ್ಲೂಕಿನ ದಬ್ಬೇಹಳ್ಳಿಯಲ್ಲಿ ಇಂದು ಸಂಜೆ ಮಳೆ ಬರುತ್ತದೊ ಇಲ್ಲವೊ ನೋಡುವುದಾದರೆ: ಅಲ್ಲಿಯ ನೆಲದ ತಾಪಮಾನ, ತೇವಾಂಶ, ಗಾಳಿಯ ವೇಗ, ಅದು ಸಾಗಿ ಬರುವ ಐವತ್ತು ಕಿಲೊಮೀಟರ್ ದೂರದವರೆಗಿನ ನೆಲದ ಏರಿಳಿತ, ಅಲ್ಲಿನ ಗಿಡ-ಮರ, ಕೆರೆ-ತೊರೆಗಳ ತಾಪಮಾನ, ಗಾಳಿಯ ತೇವಾಂಶ ಇವಿಷ್ಟೂ ಗೊತ್ತಿರಬೇಕು (ಅಂದರೆ ಅಲ್ಲಲ್ಲಿ ಅವನ್ನೆಲ್ಲ ಅಳೆಯುವ ಸಾಧನಗಳನ್ನು ಇಟ್ಟಿರಬೇಕು. ಅವೆಲ್ಲವೂ ದಿನವೂ ವರದಿಯನ್ನು ಹವಾಮಾನ ಇಲಾಖೆಗೆ ಕಳಿಸುತ್ತಿರಬೇಕು). ಅಷ್ಟಿದ್ದರೆ ಸಾಲದು! ಅಲ್ಲಿಂದ 300 ಕಿಲೊಮೀಟರ್ ಆಚಿನ ಅರಬ್ಬೀ ಸಮುದ್ರದ ಉಷ್ಣಾಂಶ, ಅಲ್ಲಿ ಕುಣಿದು ಹೋದ ಬಿಪೊರ್‌ಜಾಯ್ ಚಂಡಮಾರುತದ ಉಳಿಕೆ ವೇಗ, ಅದಕ್ಕೆ ಕಾರಣವಾದ ಶಾಂತ ಸಾಗರದ ಉಷ್ಣಪ್ರವಾಹದ ಪ್ರಮಾಣ, ಅದಕ್ಕೆ ಕಾರಣವಾದ 'ಎಲ್ ನಿನ್ಯೊ' ಪರಿಣಾಮ -ಇವಿಷ್ಟೂ ಗೊತ್ತಿರಬೇಕು. ಈ ಮಧ್ಯೆ ಚಿಲಿ ದೇಶದಲ್ಲಿ, ಅಮೆಝಾನ್ ಕಾಡಿನಲ್ಲಿ ಲಕ್ಷಗಟ್ಟಲೆ ಎಕರೆಯಲ್ಲಿ ಬೆಂಕಿ ಧಗಧಗಿಸುತ್ತಿದೆ. ಅದರದ್ದೂ ಪರಿಣಾಮನ್ನು ದಬ್ಬೇಹಳ್ಳಿಯ ಲೆಕ್ಕಕ್ಕೇ ಸೇರಿಸಬೇಕು. ಸುಲಭವೆ?

ಹೀಗೆ ಇಡೀ ಕರ್ನಾಟಕದ ಎಲ್ಲ 6,022 ಗ್ರಾಮ ಪಂಚಾಯತ್‌ಗಳ ಅಥವಾ ಇಡೀ ದೇಶದ ಎರಡೂವರೆ ಲಕ್ಷ ಗ್ರಾಮ ಪಂಚಾಯಿತಿಗಳ ಹವಾಮುನ್ಸೂಚನೆಯನ್ನು ನಿಖರವಾಗಿ ಹೇಳುವುದಾದರೆ ಎಷ್ಟು ಬಗೆಯ ಡೇಟಾ ಬೇಕಾದೀತು, ಈಗ ಊಹಿಸಿ. ಅವೆಲ್ಲವೂ ಗಂಟೆಗಂಟೆಗೂ ಬದಲಾಗುತ್ತಿರುತ್ತವೆ. ಪುಣೆಯಲ್ಲಿರುವ ಸೂಪರ್ ಕಂಪ್ಯೂಟರ್ ಪ್ರತಿ ಸೆಕೆಂಡ್‌ಗೆ 18 ಲಕ್ಷ ಲೆಕ್ಕಾಚಾರ ಮಾಡುತ್ತಿದ್ದರೂ ಭಾರತೀಯ ಹವಾಮಾನ ಇಲಾಖೆ (ಐಎಮ್‌ಡಿ) ಪ್ರತಿ 12 ಗಂಟೆಗೊಮ್ಮೆ ಅದೂ ಜಿಲ್ಲಾಮಟ್ಟದ ಮುನ್ಸೂಚನೆಯನ್ನು ಮಾತ್ರ ಕೊಡಲು ಸಾಧ್ಯವಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೆಲಗುಣವನ್ನು ಅಳೆಯಬಲ್ಲ ಸಾಧನಗಳೂ ಇಲ್ಲವಾದ್ದರಿಂದ ಬರೀ ಆಕಾಶದ ವಿದ್ಯಮಾನಗಳನ್ನಷ್ಟೆ ನೋಡುತ್ತ ಆ ಸೂಪರ್ ಕಂಪ್ಯೂಟರು ಕಣಿ ಹೇಳಬೇಕು. ಆರ್.ಕೆ. ಲಕ್ಷ್ಮಣ್ ಕಾರ್ಟೂನ್ ನೆನಪಿಸಿಕೊಂಡು ನಕ್ಕುಬಿಡಿ.

ಕರ್ನಾಟಕದ ತಂತ್ರಜ್ಞರೇನೊ ಇಸ್ರೊ ನೆರವಿನಿಂದ ಪ್ರತಿ ಮೂರು ಗಂಟೆಗಳಿಗೊಮ್ಮೆ ಪಂಚಾಯತ್ ಮಟ್ಟದ 'ಸದ್ಯಸೂಚನೆ'ಯನ್ನು (ಮುನ್ಸೂಚನೆ ಅಲ್ಲ) ಕೊಡುತ್ತಿದ್ದಾರೆ. ಅಂದರೆ, ನಿಮ್ಮೂರಿನ ಸುತ್ತಮುತ್ತ ಈಗೇನಾಗುತ್ತಿದೆ ಎಂಬುದರ ಚಿತ್ರಣ ಅಷ್ಟೆ. ನಾಳೆ ಏನಾಗಲಿದೆ ಎಂಬುದನ್ನು ಮಾತ್ರ ರಾಷ್ಟ್ರಮಟ್ಟದ ಐಎಮ್‌ಡಿ ತಂತ್ರಜ್ಞರೇ ಹೇಳಬೇಕು.

10ನೇ ಪುಟಕ್ಕೆ...

ನಿರ್ದಿಗಂತ ಎಂಬ ಕಾವು ಗೂಡು!

ಶ್ರೀರಂಗಪಟ್ಟಣದ ಬಳಿಯ ಲೋಕಪಾವನಿ ನದಿತಟದಲ್ಲಿ ನಟ ಪ್ರಕಾಶ್ ರೈ 'ನಿರ್ದಿಗಂತ' ಎನ್ನುವ ಹೊಸ ರಂಗದ ಗೂಡು ಕಟ್ಟಿದ್ದಾರೆ. ರಂಗಕರ್ಮಿಗಳಿಗೆ ಘನತೆ ದಕ್ಕಿಸಿಕೊಡುವ ಉಮೇದು ಅವರದ್ದು.

ಕೆ.ನರಸಿಂಹಮೂರ್ತಿ

ನಿರ್ದಿಗಂತ ಎಂದ ಕೂಡಲೇ ನೆನಪಾಗುವವರು ನಮ್ಮ ಕುವೆಂಪು. 'ವಿಶ್ವಮಾನವ' ಕವಿತೆಯಲ್ಲಿ, ನಿರ್ದಿಗಂತವಾಗಿ ಏರುತ್ತಾ ಅನಿಕೇತನವಾಗುವ ಚೇತನದ ಸಾಧ್ಯತೆಯ ಕಡೆಗೆ ವಿಶಿಷ್ಟವಾಗಿ ಗಮನ ಸೆಳೆದವರು. ಆ ಮಹಾಕವಿಯನ್ನು ಎದೆಯಾಳಕ್ಕಿಳಿಸಿಕೊಂಡು ನಟ ಪ್ರಕಾಶ್‌ರೈ ರಂಗಭೂಮಿಗೆ ವಾಪಸು ಬಂದಿದ್ದಾರೆ. ಆದರೆ, ನಟರಾಗಿ ಮತ್ತೆ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಲು ಅಲ್ಲ, ರಂಗಭೂಮಿಯ ಹೊಸ ಪೀಳಿಗೆಯ ದಿಗಂತಗಳನ್ನು ವಿಸ್ತರಿಸಲು. ಅವರೇ ಹೇಳಿಕೊಳ್ಳುವಂತೆ ಇದು 'ರಂಗಭೂಮಿ ಕ್ಷೇತ್ರದಲ್ಲಿರುವ ಅಪನಂಬಿಕೆ ಮತ್ತು ಬಡತನವನ್ನು ಕೈಲಾದ ಮಟ್ಟಿಗೆ ನಿವಾರಿಸುವ ಪ್ರಯತ್ನ'. 'ಹತ್ತು ಹಕ್ಕಿಗಳು ಸೇರಿದರೆ ರಂಗನ ತಿಟ್ಟು. ನಿರ್ದಿಗಂತ ಅದೇ ರೀತಿ ರಂಗದ ತಿಟ್ಟು ಆಗಬೇಕು' ಎಂಬುದು ಅವರ ಆಶಯ.

ಅದಕ್ಕಾಗಿ ಅವರು ಶ್ರೀರಂಗಪಟ್ಟಣದ ಕೆ.ಶೆಟ್ಟಿಹಳ್ಳಿಯ ಲೋಕಪಾವನಿ ನದಿಯಂಚಿನಲ್ಲಿ ತೋಟ ಮಾಡಿ, 'ನಿರ್ದಿಗಂತ' ಎಂಬ 'ಇನ್‌ಕ್ಯುಬೇಟರ್ ಥಿಯೇಟರ್' ಅಥವಾ ರಂಗಭೂಮಿಯ ಕಾವುಗೂಡನ್ನು ಕಟ್ಟುತ್ತಿದ್ದಾರೆ. ಅಲ್ಲಿ ಕನಿಷ್ಠ ಮೂವತ್ತು ಜನ ನೆಲೆಸಿ ರಂಗ ತಾಲೀಮು ನಡೆಸಲು ಬೇಕಾದ ಎಲ್ಲ ಸೌಕರ್ಯಗಳೂ ಇವೆ.

ರಾಜ್ಯದಲ್ಲಿ ನಾಟಕ ಪ್ರದರ್ಶನಕ್ಕೆ ಹಲವು ರಂಗಮಂದಿರಗಳಿದ್ದರೂ ತಾಲೀಮಿಗೆ ಬೇಕಾದ ಉತ್ತಮ ಜಾಗಗಳಿಲ್ಲವೆಂಬ ಕೊರತೆಯನ್ನು ನೀಗಿಸುವ ರೀತಿಯಲ್ಲಿ ಅದನ್ನು ರೂಪಿಸಿರುವುದು ವಿಶೇಷ. ಅಲ್ಲಿ ಏಕಾಂತವಿದೆ. ಪ್ರಶಾಂತತೆ ಇದೆ. ಸೋಲುವುದಕ್ಕೆ ಭಯ ಪಡಬೇಕಾಗಿಲ್ಲ ಎಂಬ ಧೈರ್ಯವಿದೆ. ತೀರ್ಪು ಕೊಡುವವರಿಲ್ಲ. ಆತಂಕ, ಆಶಯ, ಗ್ರಹಿಕೆಗಳನ್ನು ಗೂಡಿನಲ್ಲಿ ಕುಳಿತವರೇ ಕಟ್ಟಬೇಕು. ನಂತರ ಅವರೇ ಹಾರಬೇಕು. ಹೀಗಾಗಿಯೇ, ನಿರ್ದಿಗಂತದ ರಂಗವೇದಿಕೆಯ ಹೊರಗೆ, ಹಾರಲು ಸಜ್ಜಾದ ಬೀಜದ ಪ್ರತಿಮೆಯನ್ನು ಕಡೆದಿರಿಸಲಾಗಿದೆ.

ಸಿನಿಮಾ, ನಟನೆ, ನಿರ್ದೇಶನ, ಬರವಣಿಗೆ, ಸಮಾಜ ಸೇವೆ, ವ್ಯವಸಾಯ ಎಲ್ಲದ್ದರಲ್ಲೂ ತೊಡಗಿಸಿಕೊಳ್ಳುತ್ತಲೇ ರಂಗಭೂಮಿ ಕ್ಷೇತ್ರಕ್ಕೆ ಏನು ಮಾಡಬಹುದು ಎಂದು ಆಲೋಚಿಸಿದಾಗ ಹೊಳೆದಿದ್ದು ಅದು. ಅದಕ್ಕೆ, 'ಪ್ರಕಾಶ್‌ರಾಜ್ ಫೌಂಡೇಶನ್, ಚಾರಿಟಿ ಏನೂ ಬೇಕಾಗಿಲ್ಲ' ಎಂಬುದು ಅವರ ಪ್ರತಿಪಾದನೆ. ಹೀಗಾಗಿ ಅವರು ಕಾವುಗೂಡಿಗೆ ತಮ್ಮ ಸ್ವಂತ ಸಂಪಾದನೆಯ ಹಣವನ್ನೇ ಮುಡಿಪಿಟ್ಟಿದ್ದಾರೆ.

ನಿರ್ದಿಗಂತದ ಮೊದಲ ನಾಟಕದ ರಚನೆ, ನಿರ್ದೇಶನದ ನೇತೃತ್ವ ವಹಿಸಿರುವ ಶ್ರೀಪಾದ ಭಟ್ಟರು ಹೇಳುವಂತೆ, 'ಇಲ್ಲಿ ಸದ್ಯ ಎರಡು ವಾರದಿಂದ ಪ್ರದರ್ಶನಾಧಾರಿತ ರಂಗ ತರಬೇತಿ ಶುರುವಾಗಿದೆ. ರಂಗಶಾಲೆಗಳ ಮುಂದುವರಿದ ಭಾಗವಾಗಿ, ರಂಗಭೂಮಿಯ ಕಲಿಕೆ ಹಾಗೂ ಸಮಾಜ-ಸಮುದಾಯಕ್ಕೆ ಸಂಬಂಧಪಟ್ಟ ಚಟುವಟಿಕೆಗಳನ್ನು ಸಂಘಟಿಸುವ ಪ್ರಯತ್ನ ಅದು. ಇದು ಶಾಲೆಯಲ್ಲ, ಇಲ್ಲಿ ನಿರ್ದಿಷ್ಟ ಪಠ್ಯಕ್ರಮವಿಲ್ಲ. ಕಲಿಯುವುದು ಮತ್ತು ಕಲಿತಿದ್ದನ್ನು ಮರೆಯುವುದು. ಮತ್ತು ಅದರ ಪುನರಾವರ್ತನೆ ಅಷ್ಟೇ.

ನಾಟಕಕ್ಕಾಗಿ ಕರಾವಳಿ, ಮಲೆನಾಡು, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ 15 ಯುವ ಪ್ರತಿಭಾವಂತರು ಒಟ್ಟಾಗಿದ್ದಾರೆ. ಅವರಲ್ಲಿ ಅರ್ಧದಷ್ಟು ಜನ ರಂಗ ತರಬೇತಿ ಪಡೆದು, ರೆಪರ್ಟರಿಗಳನ್ನು ನಡೆಸುತ್ತಿರುವವರು. ಉಳಿದವರು ಈಗ ತಾನೆ ರಂಗಶಾಲೆಗಳಿಂದ ಹೊರ ಬಂದವರು. ಅವರಿಬ್ಬರನ್ನೂ ಸೇರಿಸಿ ರಂಗದ ಚಹರೆಯನ್ನು ಹುಡುಕುವ ಪ್ರಯತ್ನ ನಡೆದಿದೆ. ಈ ಕಾವುಗೂಡಿನ ಹಕ್ಕಿಮರಿಗಳಿಗೆ 45 ದಿನದ ಸನಿವಾಸ, ಗೌರವಧನ ಸಮೇತ ರಂಗ ತರಬೇತಿ ಸಿಗುತ್ತಿದೆ. ಅವರೊಂದಿಗೆ ಇಂಟರ್ನಿಗಳೂ ಇದ್ದಾರೆ.

ಸಿದ್ಧನಾಟಕವನ್ನು ಪ್ರದರ್ಶಿಸುವ ಹಳೇ ಮಾದರಿ ಇಲ್ಲಿಲ್ಲ. ಬದಲಿಗೆ ಹೊಸ ಪಠ್ಯಗಳನ್ನು ಪ್ರಯೋಗಿಸುವ ಪ್ರಯತ್ನ. ಯುದ್ಧ ಮತ್ತು ಕೋಮು ಭಾವಗಳಿಂದ ಪೂರಿತವಾದ ಜಾಗತಿಕ ಸಂದರ್ಭವನ್ನು ಕುರಿತು ಯುವಜನಾಂಗ- ನಟವರ್ಗ ಚಿಂತಿಸಬೇಕು. ಅದಕ್ಕೆ ಬೇಕಾದ ಅಭಿವ್ಯಕ್ತಿಯನ್ನು ಕಂಡುಕೊಳ್ಳಬೇಕು ಎಂಬ ಆಶಯದಿಂದಲೇ ನಮ್ಮ ಕನ್ನಡದಿಂದ ಜಾಗತಿಕ ಮಟ್ಟದವರೆಗಿ ಪ್ರಮುಖ ಪಠ್ಯಗಳ ಓದು ನಡೆದಿದೆ. ನಂತರವಷ್ಟೇ ನಾಟಕದ ಮಾತು.

ಸಾದತ್ ಹಸನ್ ಮಾಂಟೋ ಅವರ ಕತೆ, ಕುವೆಂಪು ಅವರ ನಾಟಕ 'ಸ್ಮಶಾನ ಕುರುಕ್ಷೇತ್ರಂ'ನ ದೃಶ್ಯ, ಕೃಷ್ಣಮೂರ್ತಿ ಹನೂರು ಅವರ 'ಅಜ್ಞಾತನ ಆತ್ಮಚರಿತ್ರೆ'ಯ ಕೆಲವು ಪುಟಗಳು, ರವೀಂದ್ರನಾಥ ಟ್ಯಾಗೋರರ 'ಡಿಸ್ಟ್ರಕ್ಷನ್' ಕತೆ ಮತ್ತು ಪಿರಾಂಡೆಲೊ ಅವರ 'ವಾರ್' ಕತೆ, ಕನ್ನಡದ ಮತ್ತು ಕನ್ನಡಕ್ಕೆ ಅನುವಾದಗೊಂಡ ಕವಿತೆಗಳನ್ನಿಟ್ಟುಕೊಂಡ, ಯುದ್ಧ ಮತ್ತು ಶಾಂತಿಯ ಕುರಿತ ರಂಗಪಯಣ ಇದು. ಕೊನೆಗೆ ಒಂದು ರಂಗಪ್ರಯೋಗ ಸಿದ್ಧಗೊಂಡು, ಅದನ್ನು ರಾಜ್ಯದಾದ್ಯಂತ ನಿರ್ದಿಗಂತ ಕೊಂಡೊಯ್ಯುತ್ತದೆ. ಜುಲೈ ಕೊನೇವಾರದಲ್ಲಿ ಈ ಪಯಣ ಶುರುವಾಗಲಿದೆ.

'ಹಾಗಾದರೆ ನಿರ್ದಿಗಂತವೆಂಬುದು ನಾಟಕ ಪ್ರೊಡಕ್ಷನ್ ಹೌಸ್ ಹೌದೆ?' ಎಂದರೆ ಪ್ರಕಾಶ್‌ರೈ ಸುಲಭಕ್ಕೆ ಒಪ್ಪುವುದಿಲ್ಲ. 'ಅದಷ್ಟೇ ಅಲ್ಲ' ಎನ್ನುತ್ತಾರೆ.

'ನಾಟಕ ಮಾಡ್ಕೊಂಡು ಓಡಾಡ್ತಿದಿಯೇನೋ, ಊಟಕ್ಕೇನು ಮಾಡ್ಕೊಂಡಿದೀಯ ಅಂತ ಕೇಳ್ತಾರೆ. ಅಂದ್ರೆ ನಾಟಕಕ್ಕೆ ಮತ್ತು ನಟನಿಗೆ ಬೇಕಾದ ಘನತೆ ಇಲ್ಲ. ನಾಟಕ ಮಾಡಬಲ್ಲೆ, ಅದರಲ್ಲೇ ಸ್ವಲ್ಪ ದುಡಿಯಬಲ್ಲೆ, ಸಾಮಾಜಿಕ ಕಳಕಳಿಯಿಂದ ಬದುಕಿಗೆ ಒಂದು ಅರ್ಥ ಕಂಡುಕೊಳ್ಳಬಲ್ಲೆ ಎಂಬುದಕ್ಕೆ ನಂಬಿಕೆ ಕೊಡಬೇಕಲ್ಲವೇ. ಅದಕ್ಕಾಗಿ ನಮ್ಮಂಥವರ ಪ್ರಯತ್ನವೇ ನಿರ್ದಿಗಂತ' ಎನ್ನುತ್ತಾರೆ ಅವರು. ಆ ಪ್ರಯತ್ನದ ಜೊತೆಗೇ ಕನ್ನಡ ಸಾಹಿತ್ಯ-ರಂಗಭೂಮಿಗೆ ಇಪ್ಪತ್ತು ಹೊಸ ಬಗೆಯ ನಾಟಕಗಳನ್ನು ಕೊಡುವ ಪ್ರಯತ್ನವೂ ನಡೆದಿದೆ. ಇದು ನಿರ್ದಿಗಂತದ ಶುರುವಷ್ಟೇ.

ಕರ್ನಾಟಕದಲ್ಲಿರುವ ರಂಗತಂಡಗಳು, ನಟರ ಅಂಕಿ-ಅಂಶವನ್ನು 'ನಿರ್ದಿಗಂತ' ಸಂಗ್ರಹಿಸಿದೆ.

10ನೇ ಪುಟಕ್ಕೆ...



ಶ್ರೀರಂಗಪಟ್ಟಣದ ಕೆ. ಶೆಟ್ಟಹಳ್ಳಿಯಲ್ಲಿ ನಿರ್ಮಿಸಿರುವ 'ನಿರ್ದಿಗಂತ' ರಂಗ ಶಾಲೆ ಎದುರು ಪ್ರಕಾಶ್ ರೈ
ಚಿತ್ರ: ಅನೂಪ್ ರಾಘ.ಟಿ.



ಗೀಜಗನ ಹೆಣಿಗೆ ಹರಿಶ್ಚಂದ್ರನ ಸರಿಗೆ

ಗಾಯಕ ಸಂಜಿತ್ ಹೆಗಡೆ ಹಾಡಿರುವ, ಮೊದಲ ಬಾರಿ ಸಂಗೀತ ಸಂಯೋಜನೆ ಮಾಡಿರುವ 'ಗೀಜಗ ಹಕ್ಕಿ...' ಹಾಡು ಎಲ್ಲೆಲ್ಲೂ ಕೇಳಿಬರುತ್ತಿದೆ. ಕೋಕ್ ಸ್ಟುಡಿಯೊದಲ್ಲಿ ಪ್ರಸ್ತುತಪಡಿಸಿದ ಮೊದಲ ಕನ್ನಡ ಹಾಡು ಎಂಬ ಹೆಗ್ಗಳಿಕೆಯೂ ಈ ಹಾಡಿಗೆ ದಕ್ಕಿದೆ.

ಸಂಜಿತ್ ಹೆಗಡೆ

ಸುಮಲತಾ ಎನ್.

'ಗೀಜಗ ಹಕ್ಕಿ ಸುಳ್ ನೇಯೋದಿಲ್ವಂತೆ...' ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ಅನುರಣಿಸುತ್ತಿರುವ ಈ ಹಾಡಿನ ಹಿಂದೆ ಹಲವು ವೈಶಿಷ್ಟಗಳು ಸೇರಿಕೊಂಡಿವೆ.

ಒಂದು, ವಿಶಿಷ್ಟ ಕಂಠದಿಂದ ಮನೆ ಮಾತಾಗಿರುವ ಯುವ ಗಾಯಕ ಸಂಜಿತ್ ಹೆಗಡೆ ಈ ಹಾಡು ಹಾಡಿರುವುದು. ಮತ್ತೊಂದು, ಭಿನ್ನ ಧಾಟಿಯ ಸಂಗೀತ ಹೊರತರುವ ಕೋಕ್ ಸ್ಟುಡಿಯೊಗೆ ಪದಾರ್ಪಣೆ ಮಾಡಿದ ಮೊದಲ ಕನ್ನಡ ಹಾಡು ಎನ್ನುವುದು. ಮಗದೊಂದು, ಈ ಹಾಡಿಗೆ ಸಂಜಿತ್ ಹೆಗಡೆ ಸ್ವತಃ ಸ್ವರ ಸಂಯೋಜನೆ ಮಾಡಿರುವುದು. ಕೊನೆಯದಾಗಿ, ಗೀಜಗ ಹಕ್ಕಿ ಮೂಲಕ ಸತ್ಯ ಹರಿಶ್ಚಂದ್ರನ ಸತ್ಯದ ಆದರ್ಶದ ಕಥೆಯನ್ನು ಈಗಿನ ಕಾಲಕ್ಕೆ, ಈಗಿನ ರೀತಿಯಲ್ಲೇ ಹೇಳಲು ಹೊರಟಿರುವುದು.



ಚರಣ್‌ರಾಜ್

ಈ ಎಲ್ಲಾ ವಿಶೇಷಗಳು ಕೂಡಿ ಕನ್ನಡದಲ್ಲಿ ಭಿನ್ನ ಧಾಟಿಯ ಹಾಡೊಂದು ರೂಪುಗೊಂಡಿದೆ, ಕನ್ನಡಿಗರ ಮನಸ್ಸನ್ನೂ ತಟ್ಟುತ್ತಿದೆ.

ಈ ಹಾಡು ರೂಪುಗೊಂಡಿದ್ದು ಹೇಗೆ? ಎಲ್ಲಿಯ ಗೀಜಗ ಹಕ್ಕಿ, ಎಲ್ಲಿಯ ಹರಿಶ್ಚಂದ್ರ? ಎಲ್ಲಿಯ ಯಕ್ಷಗಾನ, ಎಲ್ಲಿಯ ಆಧುನಿಕ ಸಂಗೀತ?- ಈ ಪ್ರಶ್ನೆಗಳಿಗೆ ಉತ್ತರದಂತೆ, ಆಸಕ್ತಿದಾಯಕ ಹಿನ್ನಲೆಯೊಂದಿದೆ.

ದೇಶದಲ್ಲಿನ ಭಿನ್ನ ಕಂಠ, ವಿಭಿನ್ನ ಶೈಲಿ-ಪ್ರಕಾರದ ಸಂಗೀತಕ್ಕೆ ವೇದಿಕೆಯಂತಿರುವ 'ಕೋಕ್ ಸ್ಟುಡಿಯೊ ಭಾರತ್'ನ ಅಂಕುರ್ ತಿವಾರಿ ಅವರು ಗಾಯಕ ಸಂಜಿತ್ ಹೆಗಡೆ ಅವರನ್ನು ಸಂಪರ್ಕಿಸಿ, ಒಂದೊಳ್ಳೆ ಕಥೆ ನಿರೂಪಿಸುವಂಥ ಹಾಡು ಹೆಣೆಯುವ ಹೊಣೆಗಾರಿಕೆ ವಹಿಸಿದರು. ಅದನ್ನು ಪ್ರೀತಿಯಿಂದಲೇ ಸ್ವೀಕರಿಸಿದ ಸಂಜಿತ್ ಅವರ ಮನಸ್ಸಿಗೆ ತಕ್ಷಣ ಹೊಳೆದದ್ದೇ ಸತ್ಯ ಹರಿಶ್ಚಂದ್ರನ ಕಥೆ. ಯಕ್ಷಗಾನದಲ್ಲಿ ಹರಿಶ್ಚಂದ್ರ ಪ್ರಸಂಗ ನೋಡಿ ಮೆಚ್ಚಿದ್ದ ಸಂಜಿತ್ ಅವರಲ್ಲಿ, ಇದನ್ನೇ ಫ್ಯೂಷನ್ ಸಂಗೀತದಲ್ಲಿ ರೆಕಾರ್ಡ್ ಮಾಡಿದರೆ ಹೇಗೆ ಎಂಬ ಆಲೋಚನೆ ಹುಟ್ಟಿಕೊಂಡಿತ್ತು.

ಆ ಆಲೋಚನೆ ಹಾಡಾದ ಬಗೆಯನ್ನು ಸಂಜಿತ್ ಹಂಚಿಕೊಂಡಿದ್ದು ಹೀಗೆ...

ಹರಿಶ್ಚಂದ್ರನ ನೀತಿ; ಯಕ್ಷಗಾನದ ಪ್ರೀತಿ

ನನಗೆ ಯಕ್ಷಗಾನ ಎಂದರೆ ತುಂಬಾ ಪ್ರೀತಿ. ಇದರಲ್ಲಿನ ಹರಿಶ್ಚಂದ್ರ ಪ್ರಸಂಗ ನನ್ನನ್ನು ಬಹಳ ಸೆಳೆದಿತ್ತು ಕೂಡ. ಹೀಗಾಗಿ ಇದೇ ಪ್ರಸಂಗವನ್ನೇ ಫ್ಯೂಷನ್ ಸಂಗೀತದಲ್ಲಿ ನೀಡಿದರೆ ಹೇಗೆ ಅನಿಸಿತು. ನಿಸ್ತುಲ್ಲಾ ಮರ್ಫಿ, ಗೌತಮ್ ಹೆಬ್ಬಾರ್ ನನ್ನೊಂದಿಗೆ ಈ ಪ್ರಕ್ರಿಯೆಯಲ್ಲಿ ಕೂಡಿದರು. ಮುಂಬೈಯಲ್ಲಿ ಮೂವರೂ ಕನ್ನಡಿಗರು ಕುಳಿತು ಈ ಹಾಡಿನ ಬಗ್ಗೆ ಚರ್ಚೆ ಮಾಡಲು ಶುರುವಿಟ್ಟುಕೊಂಡೆವು.

ಈ ಸಮಾಜದಲ್ಲಿರುವ ಸುಳ್ಳು ದಾರಿಯಲ್ಲಿ ತುಂಬಾ ಸುಲಭವಾಗಿ ಸಾಗಬಹುದು. ಆದರೆ ಹಾಗೆ ಹೋಗುವುದು ಬೇಡ ಎಂಬ ಸಂದೇಶ ಇಟ್ಟುಕೊಂಡು, ಹರಿಶ್ಚಂದ್ರನ ಕಥೆಯನ್ನು ಪ್ರಾತಿನಿಧಿಕವಾಗಿ ಹಾಡಿನಲ್ಲಿ ಒಂದಾಗಿಸಿದೆವು. ನಾನು ಒಂದೆರಡು ಸಾಲು ಬರೆದೆ. ಇದೇ ತಿರುಳನ್ನಿಟ್ಟುಕೊಂಡು ನಾಗಾರ್ಜುನ ಶರ್ಮಾ ಹಾಡಿಗೆ ಸಾಹಿತ್ಯ ಬರೆದರು. ಹಾಡಿಗೆ ಸ್ವರ ಸಂಯೋಜನೆ ನನ್ನದು. ನಂತರ ಸಂಗೀತ ಸಂಯೋಜಕ ಚರಣ್‌ರಾಜ್ ಅವರ ಬಳಿ ಹಾಡಿನ ಬಗ್ಗೆ ಪ್ರಸ್ತಾಪ ಮಾಡಿದೆ. ಹೀಗೊಂದು ಹಾಡು ಮಾಡುತ್ತಿದ್ದೇನೆ, ಪ್ರೊಡಕ್ಷನ್ ಸಹಾಯ ಬೇಕು ಎಂದೆ. ತುಂಬಾ ಪ್ರೀತಿಯಿಂದ ಒಪ್ಪಿಕೊಂಡರು.

ಈ ಹಾಡಿಗೆ ಯಕ್ಷಗಾನದ್ದೇ ಫ್ಲೇವರ್ ಬೇಕಿತ್ತು. ಇದಕ್ಕೆ ಪ್ರಸನ್ನ ಹೆಗಡೆಯವರ ಭಾಗವತ ದನಿ ಜೊತೆಯಾಯಿತು. ಅದು ಹಾಡಿಗೆ ಅನನ್ಯ ಶೈಲಿ ಕೊಟ್ಟಿತು. ಬೇರೆ ಬೇರೆ ಕಡೆಯ ಹಲವು ಕಲಾವಿದರು ಇದರಲ್ಲಿ ತೊಡಗಿಕೊಂಡರು, ಮಕ್ಕಳು ಹಾಡಿದರು. ಸಾಕಷ್ಟು ಸಂಗೀತ ವಾದ್ಯಗಳ ತಂತು ಹಾಡಿನಲ್ಲಿ ಬೆರೆಯಿತು. ಶಾಸ್ತ್ರೀಯ-ಆಧುನಿಕ ಸಂಗೀತ ಎರಡೂ ಒಂದಾದವು. ಇವೆಲ್ಲವೂ ಕೂಡಿ ಹಾಡೊಂದು ಹೆಣೆದುಕೊಂಡಿತು.

ಈ ಹಾಡಿನಲ್ಲಿ ಗೀಜಗ ಹಕ್ಕಿ ಪ್ರಸ್ತಾಪ ಬಂದಿದ್ದು ಆಕಸ್ಮಿಕವಾಗಿ. ರೆಕಾರ್ಡಿಂಗ್‌ಗೆ ಅರ್ಧ ಗಂಟೆ ಮುಂಚೆ ಗೀಜಗ ಹಕ್ಕಿ ಪ್ರಸ್ತಾಪ ಹಾಡಿನಲ್ಲಿ ಸೇರಿಕೊಂಡಿತು. ನನ್ನ ಸೋದರ ಸಂಬಂಧಿಗೆ ಪಕ್ಷಿಗಳ ಬಗ್ಗೆ ತುಂಬಾ ಆಸಕ್ತಿ. ಅವನು ಗೀಜಗ ಹಕ್ಕಿ ಬಗ್ಗೆ ಮಾತನಾಡಿದ್ದ. ಅದು ಅಂದವಾಗಿ ಗೂಡು ನೇಯುವ ಬಗ್ಗೆಯೂ ಹೇಳಿದ್ದ. ಇದನ್ನೇ ಹಾಡಿಗೆ ಹೆಣೆದೆವು. 'ಗೀಜಗ ಹಕ್ಕಿ ಸುಳ್ ನೇಯೋದಿಲ್ವಂತೆ' ಎಂದು ಸತ್ಯ ಹರಿಶ್ಚಂದ್ರನ ಆದರ್ಶ ಹಕ್ಕಿಯೊಂದಿಗೆ ಹಾಡಾಯಿತು.

ಚರಣ್‌ರಾಜ್ ಮಾರ್ಗದರ್ಶನ

ಈ ಹಾಡು ಹುಟ್ಟುವಲ್ಲಿ ಸಂಗೀತ ನಿರ್ದೇಶಕ ಚರಣ್‌ರಾಜ್ ಅವರ ಪಾತ್ರವೂ ಹಿರಿದು. ಸಿನಿಮಾ ಸಂಗೀತದಲ್ಲಿ ಚರಣ್‌ರಾಜ್-ಸಂಜಿತ್ ಹೆಗಡೆ ಜೋಡಿ ಮೋಡಿಯನ್ನೇ ಮಾಡಿದೆ, ಯುವ ಕೇಳುಗರ ಚಿತ್ತ ಕದ್ದಿದೆ. ಇದೀಗ ಮತ್ತೆ ಈ ಜೋಡಿ 'ಗೀಜಗ ಹಕ್ಕಿ' ಮೂಲಕ ಸದ್ದು ಮಾಡಿದೆ. ಚರಣ್ ರಾಜ್ ಮಾರ್ಗದರ್ಶನದಲ್ಲಿ ಈ ಹಾಡು ಒಂದು ಸುಂದರ ರೂಪ ತಳೆದಿದೆ.

'ಈ ಹಾಡಿನ ನಿರ್ಮಾಣಕ್ಕೆ ನಾನು ಮಾರ್ಗದರ್ಶನ ಮಾಡಿದೆ ಅಷ್ಟೆ. ಹಾಡಿಗೆ ಇನ್‌ಸ್ಟ್ರುಮೆಂಟೇಷನ್ ಮಾಡಿದೆ. ಹಾಡಿನ ಪರಿಕಲ್ಪನೆ, ಸಂಗೀತ ಸಂಯೋಜನೆ ಹಿಂದೆ ಸಂಜಿತ್ ಹೆಗಡೆ ಪರಿಶ್ರಮ ಸಾಕಷ್ಟಿದೆ. ಸಾಕಷ್ಟು ಕಲಾವಿದರನ್ನೊಳಗೊಂಡ ಈ ತಂಡದ ಪ್ರತಿಯೊಬ್ಬರೂ ಹಾಡಿನ ಯಶಸ್ಸಿನಲ್ಲಿ ಪಾಲುದಾರರು' ಎಂದು ಖುಷಿಯಿಂದ ಹೇಳುತ್ತಾರೆ ಚರಣ್ ರಾಜ್.

ಸದ್ಯ ಗೀಜಗ ಹಕ್ಕಿಯ ಈ ಹಾಡು ಕನ್ನಡಿಗರ ಕಿವಿ ತುಂಬುತ್ತಿದೆ. ಬೇರೆ ಭಾಷಿಗರ ಚಿತ್ತವೂ ಕನ್ನಡದತ್ತ ವಾಲುವಂತೆ ಮಾಡಿದೆ.

ಶುದ್ಧರಾಗಧಾರಿಯ 'ನಾದದ ನವನೀತ'



ಪಂಡಿತ್ ವೆಂಕಟೇಶ ಕುಮಾರ್

ಶ್ರೀಮತಿ ದೇವಿ

ಸಂಗೀತ

'ಶಾಸ್ತ್ರೀಯ ಸಂಗೀತ ಕೇಳಲು ಜನರು ಬರುತ್ತಿಲ್ಲ ಎಂದು ಗೋಳಾಡುವುದ್ಯಾಕೆ, ವೆಂಕಟೇಶ ಕುಮಾರ ಅವರಂತೆ ಹಾಡಿದರೆ ಜನ ಯಾಕೆ ಬರಲಾರರು' ಎಂದು ಹಲವಾರು ವರ್ಷಗಳ ಹಿಂದೆಯೇ ನುಡಿದವರು ಭಾರತರತ್ನ ಪಂ.ಭೀಮಸೇನ ಜೋಶಿಯವರು. ವೆಂಕಟೇಶ ಕುಮಾರ್ ಅವರ ಹಿರಿಮೆಗೆ ಹಿಡಿದ ಕನ್ನಡಿ ಈ ಮಾತು. ಕರ್ನಾಟಕದಲ್ಲಿನ ಹಿಂದೂಸ್ತಾನಿ ಸಂಗೀತದ ಧಾರೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿದು ಕೀರ್ತಿ ಶಿಖರವನ್ನೇರಿದ ನಮ್ಮ ನಡುವಿನ ಅಪ್ಪಟ ದೇಸಿ ಸಂಗೀತಗಾರರೆಂದರೆ ಪದ್ಮಶ್ರೀ ಎಂ.ವೆಂಕಟೇಶ ಕುಮಾರ. ಅವರ ಗಾಯನವೆಂದರೆ ಅದು ಕಿವಿಗೆ ಹಬ್ಬ.

ಬಳ್ಳಾರಿ ಜಿಲ್ಲೆಯ ಲಕ್ಷ್ಮೀಪುರವೆಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ವೆಂಕಟೇಶ ಕುಮಾರ್ ಅವರ ತಂದೆ ಜನಪದ ಕಲಾವಿದರಾಗಿದ್ದರೂ, ತಮ್ಮ ಮಗನ ಸಿರಿಕಂಠವನ್ನು ಗುರುತಿಸಿ ಎಳವೆಯಲ್ಲೇ ಗದಗದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಅನ್ನದಾತ, ವಿದ್ಯಾ ಸಂಪನ್ನ ಪಂ.ಪುಟ್ಟರಾಜ ಗವಾಯಿಯವರ ಉಡಿಯಲ್ಲಿ ಹಾಕಿದರು. 12 ವರ್ಷಗಳ ಕಾಲ ಆಶ್ರಮದ ಶಿಸ್ತು, ಬಿಗಿಯಾದ ನಿಯಮಗಳನ್ನು ಪಾಲಿಸಿಕೊಂಡು ಗುರುಗಳಿಂದ ವಿದ್ಯೆ ಪಡೆದು, ಗುರುನಾಮ ಸ್ಮರಣೆಯೊಂದಿಗೇ ಬೆಳೆದವರು ವೆಂಕಟೇಶ ಕುಮಾರ್. ಸಂಗೀತವೊಂದನ್ನೇ ನಂಬಿಕೊಂಡ ಕಾರಣ ಹಲವಾರು ವರ್ಷಗಳ ಕಾಲ ತುಂಬಾ ಕಷ್ಟಪಡಬೇಕಾಗಿ ಬಂದರೂ ನಂತರದಲ್ಲಿ ಗುರುಗಳ ಆಶೀರ್ವಾದದಿಂದ ಅವರು ಹರಸಿದಂತೆಯೇ ನಡೆದು ಜೀವನದ ಭದ್ರತೆ ದೊರಕಿತು ಮಾತ್ರವಲ್ಲ ಗುರುಗಳಿಂದ ಪಡೆದ ವಿದ್ಯೆಗೆ ಮಾನ್ಯತೆ ದೊರಕುತ್ತಾ ಬರುತ್ತಿದೆ ಎನ್ನುವ ವಿನಯಶೀಲರು ವೆಂಕಟೇಶ ಕುಮಾರ.

ಧಾರವಾಡ-ಹುಬ್ಬಳ್ಳಿಯ ಭೂಮಿಯಿಂದ ಬಂದ ಪಂ. ಮಲ್ಲಿಕಾರ್ಜುನ್ ಮನ್ಸೂರ್, ಪಂ.ಬಸವರಾಜ ರಾಜಗುರು, ಪಂ.ಭೀಮಸೇನ ಜೋಶಿ, ಪಂ.ಕುಮಾರ ಗಂಧರ್ವ, ಪಂ.ಸವಾಯಿ ಗಂಧರ್ವ, ವಿ.ಗಂಗೂಬಾಯಿ ಹಾನಗಲ್ ಮುಂತಾದ ದಿಗ್ಗಜ ಸಂಗೀತಗಾರರ ಪರಂಪರೆಯ ಸಮರ್ಥ ಪ್ರತಿನಿಧಿ ಇವರು. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕೇಳುವ ಕಿರಾನಾ-ಗ್ವಾಲಿಯರ್ ಶೈಲಿಯಲ್ಲಿ ಹಾಡುವ ವೆಂಕಟೇಶ ಕುಮಾರ್ ಅವರ ಸಂಗೀತದ ವಿಶೇಷತೆ ಇರುವುದು ಸೋಲರಿಯದ ಮಧುರ ಕಂಠದಲ್ಲಿ. ರಾಗದ ಪ್ರಸ್ತುತಿಯಲ್ಲಿ ಭಾವಾಭಿವ್ಯಕ್ತಿಗೆ ಬೇಕಾದಂತೆ ಗಂಭೀರವೂ, ಮೃದುವೂ ಆಗಬಲ್ಲ ಅವರ ಕಂಠ ಬಹಳ ಶ್ರೀಮಂತವಾದದ್ದು, ಸ್ವರಗಳ ಕಿರೀಟವನ್ನು ಧರಿಸಿ ಮೆರೆದಾಡುತ್ತದೆ. ಯಾವುದೇ ರಾಗವಿರಲಿ-ಬಂದಿಶ್ ಇರಲಿ-ದಾಸರಪದ-ವಚನಗಳಿರಲಿ, ಅವರ ಧ್ವನಿಯಲ್ಲದು ಹೊರಬಂದಾಗ ಹೊಸರೂಪವನ್ನು ಪಡೆದಿರುತ್ತದೆ. ಅಂತಹ ಅದಮ್ಯ ತೇಜಸ್ಸು-ಚೈತನ್ಯ ಆ ಕಂಠದಲ್ಲಿದೆ. ಅವರ ಕಾರ್ಯಕ್ರಮ ಭಾರತದ ಯಾವುದೇ ಮೂಲೆಯಲ್ಲಿರಲಿ, ಪರ ದೇಶದಲ್ಲೇ ಇರಲಿ, ಎಲ್ಲೆಲ್ಲಿಯೂ ಅವರ ಕಾರ್ಯಕ್ರಮಕ್ಕೆ ಕೇಳುಗರು ಕಡಿಮೆಯಾಗುವುದೇ ಇಲ್ಲ.

ತಾವು ಬೆಳೆದ ಪರಿಸರ, ಆಚಾರ-ವಿಚಾರಗಳು ವೆಂಕಟೇಶ ಕುಮಾರ್ ಅವರಿಗೆ ತುಂಬಾ ಅಪರೂಪದ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿವೆ. ನೈಜತೆಯನ್ನು ಹಿಂದಿಕ್ಕಿ ಕೃತಕತೆ ಮುಂದಾಗುತ್ತಿರುವ ಈ ಕಾಲದಲ್ಲಿ ಅವರ ಈ ಸರಳ, ಸಹಜ, ಸಜ್ಜನಿಕೆಯ ವ್ಯಕ್ತಿತ್ವ ಆತ್ಮೀಯವೆನಿಸುತ್ತದೆ. ಎಲ್ಲರನ್ನೂ ಒಳಗು ಮಾಡಿಕೊಳ್ಳುತ್ತದೆ. ಅವರ ವ್ಯಕ್ತಿತ್ವ ಮತ್ತು ಸಂಗೀತದಿಂದಾಗಿ ಅವರ ಗಾಯನದೆಡೆಗೆ ಆಕರ್ಷಿತರಾದ ಶ್ರೋತೃಗಳಲ್ಲಿ ಸಂಗೀತಜ್ಞರು, ಸಂಗೀತಗಾರರು, ಸಂಗೀತ ವಿದ್ಯಾರ್ಥಿಗಳು ಮಾತ್ರವಲ್ಲ ಬರಿಯ ಆನಂದಕ್ಕಾಗಿ ಸಂಗೀತ ಕೇಳುವ ರಸಿಕರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಧಾರವಾಡದಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಾ ವೆಂಕಟೇಶ ಕುಮಾರ್ ಅವರ ಹಿರಿಯ ಗುರುಬಂಧು ಪಂ.ಚಂದ್ರಶೇಖರ ಪುರಾಣಿಕಮಠ ಅವರ ಬಳಿ ನಾನು ಸಂಗೀತಾಭ್ಯಾಸ ನಡೆಸುತ್ತಿದ್ದ ಸಂದರ್ಭದಲ್ಲಿ, ವೆಂಕಟೇಶ ಕುಮಾರ್ ಅವರನ್ನು, ಅವರ ಗಾಯನವನ್ನು ಆರಾಧಿಸುತ್ತಿದ್ದ ನಮ್ಮ ಸ್ನೇಹಿತರ ಗುಂಪು ಧಾರವಾಡ-ಹುಬ್ಬಳ್ಳಿಯಲ್ಲಿ ಎಲ್ಲಿ ಅವರ ಕಾರ್ಯಕ್ರಮವಿದ್ದರೂ ತಪ್ಪಿಸುತ್ತಿರಲಿಲ್ಲ. ಇಂತಹ ಹಲವು ಸಂದರ್ಭಗಳಲ್ಲಿ ಕರ್ನಾಟಕದಲ್ಲಿ ಅವರು ಪಡೆದ ಕೀರ್ತಿ, ಆದರಗಳನ್ನು ನೋಡಿ ಅರಿತಿದ್ದೆ. ಆದರೆ, ವೆಂಕಟೇಶ ಕುಮಾರ್ ಅವರ ಗಾಯನದ ಬಗೆಗಿನ ಹುಚ್ಚು ಪ್ರೀತಿಯನ್ನು ಕಣ್ಣಾರೆ ನೋಡಿದ್ದು ಸತಾರಾದ ಔಂಧ್‌ನಲ್ಲಿ ನಡೆಯುವ ವಾರ್ಷಿಕ ಕಾರ್ಯಕ್ರಮದಲ್ಲಿ. ಬೆಳಿಗ್ಗೆ 9ರಿಂದ ಮರುದಿನ ಬೆಳಿಗ್ಗೆ 6ರ ವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಮಧ್ಯ ರಾತ್ರಿ ಹಾಡಲು ಬಂದ ವೆಂಕಟೇಶ ಕುಮಾರ್ ಅವರನ್ನು ಕೇಳಲು ಸಭಾಭವನದ ಒಳಗೆ-ಹೊರಗೆ ಎಲ್ಲಾ ಸಂಗೀತಾಸಕ್ತರು ಮತ್ತು ಆ ಹಳ್ಳಿಯ ರೈತಾಪಿ ಜನ ತುಂಬಿಬಿಟ್ಟಿದ್ದರು. ಅವರ ಗಾಯನದ ಪ್ರತಿಯೊಂದು ಆವರ್ತನವನ್ನೂ 'ವಾಹ್ ವಾಹ್' ಎನ್ನುತ್ತಾ ಕೇಳಿ ಖುಷಿಪಟ್ಟ ಕೇಳುಗರು, ಅವರು ಮುಗಿಸಿ ಮೇಲೆದ್ದರೂ ಚಪ್ಪಾಳೆಯ ಸುರಿಮಳೆಯನ್ನು ನಿಲ್ಲಿಸಿರಲಿಲ್ಲ. ಅವರು ವೇದಿಕೆಯ ಬಳಿ ಬರುತ್ತಿದ್ದಾಗ ದಾರಿಯಲ್ಲಿ ಕುಳಿತವರೆಲ್ಲಾ ಕಾಲಿಗೇ ಬಿದ್ದು ನಮಸ್ಕರಿಸುತ್ತಿದ್ದರು. ಸಾಮಾನ್ಯ ಜನರನ್ನೂ ಶಾಸ್ತ್ರೀಯ ಸಂಗೀತದೆಡೆಗೆ ಸೆಳೆದು, ಒಳಗು ಮಾಡಿಕೊಳ್ಳುವ ಈ ಶಕ್ತಿಯ ದರ್ಶನವಾಗಿತ್ತು.

ಆಶ್ರಮದಲ್ಲಿ ಸಂಗೀತ ಕಲಿತ ಪ್ರತಿಯೊಬ್ಬ ಗಾಯಕನ ಹಾಡುಗಾರಿಕೆಯಲ್ಲಿ ವೆಂಕಟೇಶ ಕುಮಾರ್ ಅವರ ಗಾಯನದ ಪ್ರಭಾವವನ್ನು ಕಾಣಬಹುದು. ವೆಂಕಟೇಶ ಕುಮಾರ್ ಅವರು ಮನೆ ಮನೆ ಮಾತಾಗಿದ್ದು ದಾಸರಪದ ಮತ್ತು ವಚನಗಳ ಮೂಲಕ. ಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದ ಪಂ.ವಸಂತ ಕನಕಾಪುರ್ ಅವರು ಸ್ವರ ಸಂಯೋಜಿಸಿದ ಅನೇಕ ದಾಸರ ಪದಗಳಿಗೆ ಧ್ವನಿಯಾಗಿ ಜೀವ ನೀಡಿದ ವೆಂಕಟೇಶ ಕುಮಾರ್ ಅವರು ತಮ್ಮ ಹೆಸರಿನೊಂದಿಗೇ ಬೆಸೆದುಕೊಂಡ 'ತೊರೆದು ಜೀವಿಸಬಹುದೇ', 'ನಂಬಿದೆ ನಿನ್ನ ಪಾದ', 'ಒಂದು ಬಾರಿ ಸ್ಮರಣೆ ಸಾಲದೆ' ಮುಂತಾದ ಹಾಡುಗಳ ಮೂಲಕ ಅವಿಸ್ಮರಣೀಯರಾಗಿದ್ದಾರೆ. ಪಂ.ಭೀಮಸೇನ ಜೋಶಿಯವರ ದಾಸರಪದಗಳ ನಂತರ ದಾಸರಪದಗಳನ್ನು ಹಾಡುವ ಇನ್ನೊಂದು ಬಗೆಯ ಶೈಲಿಯನ್ನು ರೂಪಿಸಿ, ಪ್ರಸಿದ್ಧಗೊಳಿಸಿದ ಶ್ರೇಯಸ್ಸು ವೆಂಕಟೇಶಕುಮಾರ್ ಅವರಿಗೆ ಸಲ್ಲಬೇಕು.

ದೇಶದ ಎಲ್ಲಾ ಪ್ರತಿಷ್ಠಿತ ವೇದಿಕೆಗಳಲ್ಲಿ, ಸಂಗೀತ ಉತ್ಸವಗಳಲ್ಲಿ ಹಾಡಿರುವ ವೆಂಕಟೇಶ ಕುಮಾರ್ ಅವರು ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಅತ್ಯಂತ ಬೇಡಿಕೆಯ ಕಲಾವಿದ. ತಮ್ಮ ಸಾಧನೆಗಾಗಿ ಭಾರತ ಸರ್ಕಾರದ 'ಪದ್ಮಶ್ರೀ' (2016), 'ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ'(2012), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1999), ಕಾಲಿದಾಸ ಸಮ್ಮಾನ್ (2017) ಮುಂತಾದ ಹಲವು ಗೌರವಕ್ಕೆ ಪಾತ್ರರಾಗಿದ್ದಾರೆ. ವೆಂಕಟೇಶ ಕುಮಾರ್ ಅವರ ಗಾಯನದಲ್ಲಿ 'ಶಾಸ್ತ್ರ ಮತ್ತು ದೇಸೀತನ'ಗಳ ಬಹು ಅಪೂರ್ವವಾದ ಸಂಗಮವಿದೆ. ಅಲ್ಲಿ ಶಾಸ್ತ್ರದ ಅತಿಯಾದ ಬಿಗಿಯಿಲ್ಲ, ಬದಲಾಗಿ ಮುಕ್ತತೆ ಇದೆ. ಅವರ ಗಾಯನದಲ್ಲಿರುವ ಶಕ್ತಿ-ರಭಸಗಳು 'ಧಾರವಾಡದ ನೆಲದಿಂದ ಬಂದವು' ಎನ್ನುವ ಆದರಕ್ಕೆ ಪಾತ್ರವಾಗಿವೆ. ಗಾಯನದಲ್ಲಿನ ಈ ಗುಣವನ್ನು ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಬೇರೆ ಯಾವ ಪ್ರದೇಶದಿಂದ ಬಂದ ಕಲಾವಿದರಲ್ಲೂ ಕಾಣಲು ಸಾಧ್ಯವಿಲ್ಲ. ಸ್ಪಷ್ಟವಾದ ರಾಗದ ಮಂಡನೆ, ಪ್ರದರ್ಶನದ ಶೋಕಿ ಇಲ್ಲದ ಶುದ್ಧರಾಗಧಾರಿ, ತಾನ್‌ನ ಹಲವು ಬಗೆಯ ವಿನ್ಯಾಸಗಳು, ಪಾರಂಪರಿಕ ರಚನೆಗಳು, ಸ್ಪಷ್ಟ ಆಕಾರಯುಕ್ತ ಆಲಾಪ ಮತ್ತು ಅವರ ಉಸಿರುಸಿರಿನಲ್ಲೂ ಹೊರಸೂಸುವ ನಮ್ಮ ನಾಡು-ನುಡಿಯ ಸೊಗಡು ಹೊಸದಾದ 'ವೆಂಕಟೇಶ ಕುಮಾರ್ ಮಾದರಿ'ಯನ್ನು ಹುಟ್ಟಿಸಿದೆ. ❖

ಜುಲೈ 1ಕ್ಕೆ ಸನ್ಮಾನ

ಜುಲೈ 1ರಂದು ಪಂ. ವೆಂಕಟೇಶ ಕುಮಾರ ಅವರಿಗೆ 70 ವರ್ಷ ತುಂಬುತ್ತದೆ. ಧಾರವಾಡದ ಕರ್ನಾಟಕ ಕಾಲೇಜು ಆವರಣದಲ್ಲಿ ಆ ದಿನ ಸಂಜೆ 4ರಿಂದ ಈ ಸಂಗೀತ ಸಾಧಕರಿಗೆ ಜಿ.ಬಿ. ಜೋಶಿ ಮೆಮೋರಿಯಲ್ ಟ್ರಸ್ಟ್ ಹಾಗೂ ಹುಬ್ಬಳ್ಳಿಯ 'ಕ್ಷಮತಾ' ಸನ್ಮಾನ ಸಮಾರಂಭ ಆಯೋಜಿಸಿವೆ. ಗಿರೀಶ ಕಾಸರವಳ್ಳಿ ನಿರ್ದೇಶಿಸಿರುವ 'ನಾದದ ನವನೀತ' ಕಿರುಚಿತ್ರವು ಆ ದಿನ ಪ್ರದರ್ಶಿತವಾಗಲಿದ್ದು, ಅಯ್ಯಪ್ಪಯ್ಯ ಹಲಗಲಿಮಠ ಅವರ ಸಂಗೀತ ಕಾರ್ಯಕ್ರಮವೂ ನಡೆಯಲಿದೆ. ವೆಂಕಟೇಶ ಕುಮಾರ ಅವರೊಂದಿಗೆ ಸಂವಾದ ಕಾರ್ಯಕ್ರಮವೂ ಇದೆ.

ಅಪ್ಪ ಎಂಬ ಗಂಧದ ಕೊರಡು

ಆಶಾ ಬಗ್ಗನಡು

ಜೂನ್ 18 ತಂದೆಯಂದಿರ ದಿನ. ತಮ್ಮೊಳಗೆ ತಾಯ್ತನವನ್ನು ಕಾಪಿಟ್ಟುಕೊಂಡು, ಮಗುವಿನ ಪುಟ್ಟ ಮುಷ್ಟಿಯೊಳಗೆ ಬೆಚ್ಚನೆ ಬೆರಳು ಸಿಕ್ಕಿಸಿಕೊಂಡು ಕುಳಿತ ಅಪ್ಪಂದಿರೂ ಇದ್ದಾರೆ. ಕಾಲದ ಬೀಸಿನ ನಡುವೆ ಅಂಥವರ ನೆನಕೆಯಲ್ಲಿ ಒಂದು ಲಹರಿ...

ತಾಯಿ ದೇವರೆಂದು ಪೂಜಿಸುವ ಜಗತ್ತಿನಲ್ಲಿ ತಾಯ್ತನಕ್ಕೆ ಇನ್ನಿಲ್ಲದ ಮಹತ್ವವಿದೆ. ಜಗತ್ತು ಮಕ್ಕಳ ಲಾಲನೆ ಪಾಲನೆ ಪೋಷಣೆ ಜವಾಬ್ದಾರಿಯನ್ನು ಹೆಣ್ಣಿನ ಜೈವಿಕತೆಗೆ ಅಂಟಿಸುತ್ತದೆ. ಆದರೆ, ತಂದೆತನಕ್ಕೂ ತಾಯ್ತನಕ್ಕೂ ಸಂಬಂಧ ಕಲ್ಪಿಸದೆ ಅವನನ್ನು ಬರಡಾಗಿಸುತ್ತದೆ. ಸಾಮಾಜೀಕರಣದ ಆಚೆಗೂ ತನ್ನೆದೆಯೊಳಗಡೆ ತಾಯ್ತನವನ್ನು, ಹೆಣ್ತನವನ್ನು ಜಾಗೃತಗೊಳಿಸಿಕೊಳ್ಳುವ ತಂದೆಯಂದಿರನ್ನು ನಿರ್ಲಕ್ಷಿಸುತ್ತದೆ. ಜೈವಿಕತೆಯಿಂದ ತಾಯ್ತನಕ್ಕೂ ತಳುಕು ಹಾಕಿಕೊಂಡಿರುವ ಹೆಣ್ಣು ಇಡೀ ಜಗತ್ತಿನ ಎಲ್ಲೆಡೆ ಆರಾಧನೆಗೆ ಒಳಗಾಗುತ್ತಿದ್ದಾಳೆ. ಇಂತಹ ಅವಕಾಶವಿಲ್ಲದ ಅಪ್ಪ, ಅಮ್ಮನ ದೈವಿಕ ಆವರಣದೆದುರು ಮಂಕಾಗುತ್ತಾ ನಿರ್ಲಕ್ಷ್ಯಕ್ಕೆ ಒಳಪಡುತ್ತಿದ್ದಾನೆ.

ತಾಯ್ತನವೆಂಬುದು ಬರಿಯ ದೇಹವಲ್ಲ, ಅದೊಂದು ಮನಃಸ್ಥಿತಿ. ಹೊರುವುದು ಹೆರುವುದರಲ್ಲಿ ತಾಯ್ತನ ಅಡಗಿದೆ. ಆದರೆ, ಅದಕ್ಕೆ ಬಹಳ ಸೀಮಿತವಾದ ಅರ್ಥ ಪ್ರಾಪ್ತಿಯಾಗಿ ಬಿಡುತ್ತದೆ. ವಿದ್ವಾಂಸರು ಗುರುತಿಸುವಂತೆ ಅದು ವಿಶ್ವಾತ್ಮಕ ಮೌಲ್ಯಗಳಲ್ಲಿ ಒಂದು. ಅದು ಜೀವಕಾರುಣ್ಯ, ಪ್ರೀತಿ, ದೊಡ್ಡತನ. ಹಾಗಾಗಿಯೇ ತಾಯ್ತನವೆಂಬದು ಲಿಂಗಾತೀತವಾದ ಭಾವನೆ. ಅಲ್ಲಿ ಗಂಡು, ಹೆಣ್ಣು ಭೇದವಿಲ್ಲ. ತಂದೆಯೇ ತಾಯಿಯಾದ ಅದೆಷ್ಟೋ ಜೀವಗಳ ಉದಾಹರಣೆ ನಮ್ಮ ಸುತ್ತ ಇದೆ. ಎಷ್ಟೋ ಬಾರಿ ಗಂಡು ಕೂಡ ಹೆಣ್ಣು ಆಗುತ್ತಲೇ ಇರುತ್ತಾನಾದರೂ ಬಹುತೇಕ ಸಂದರ್ಭಗಳಲ್ಲಿ ಅವನು ಈ ತಾಯ್ತನವನ್ನು ಒಳಗೊಳ್ಳದಂತೆ ತಡೆಯುವಲ್ಲಿ ಸಾಮಾಜೀಕರಣದ ಪಾತ್ರ ಬಹಳ ಮಹತ್ವದ್ದು.

ಪುರುಷರು ಮಕ್ಕಳನ್ನು ಬೆಳೆಸುವ ಹೊಣೆಯನ್ನು ಸಮಾನವಾಗಿ ನಿರ್ವಹಿಸಿದಂತೆ ತಡೆಯುವ ವ್ಯವಸ್ಥೆ ಬಸಿರು, ಹೆರಿಗೆ ಎಂಬುವು ಹೆಣ್ಣುದೇಹಕ್ಕಷ್ಟೇ ಇರುವ ಅನನ್ಯ ಪ್ರಕ್ರಿಯೆನ್ನಾಗಿ ಗುರುತಿಸುತ್ತದೆ. ಹೆಣ್ಣುಮಕ್ಕಳ ಜೈವಿಕ ಕಾರಣದೊಂದಿಗೆ ಮಕ್ಕಳೊಂದಿಗೆ ತಾಯಂದಿರಿಗೆ ಇರುವ ಆಪ್ತ ಸಂಬಂಧ ತಂದೆಯರಿಗೆ ಇರುವುದಿಲ್ಲ. ಸಾಮಾಜೀಕರಣ ತರಬೇತಿ ಪುರುಷರಿಗೆ ಮಕ್ಕಳನ್ನು ಬೆಳೆಸುವ ಹೊಣೆಯಿಂದ ಹೇಗೆ ನುಣುಚಿ ಕೊಳ್ಳುವುದು ಎಂಬುದನ್ನು ಕಲಿಸಿದರೆ, ತನ್ನ ಜೈವಿಕತೆಯ ಕಾರಣ ಮಕ್ಕಳ ಜವಾಬ್ದಾರಿ ತನ್ನದೇ ಎಂಬುದನ್ನು ಹೆಣ್ಣುಮಕ್ಕಳಿಗೆ ಕಲಿಸುತ್ತದೆ.

ಹಾಗಾಗಿಯೇ ನಮ್ಮ ಸಮಾಜದಲ್ಲಿ ಅಪ್ಪನೆಂದರೆ ದರ್ಪ, ಅಧಿಕಾರಗಳ ತೋರಿ ಮಕ್ಕಳನ್ನು ಹದ್ದು ಬಸ್ತಿನಲ್ಲಿಡುವವ, ಭೌತಿಕ ಅಗತ್ಯತೆಗಳನ್ನಷ್ಟೇ ಪೂರೈಸುವವ ಎಂಬ ಚಿತ್ರಣವನ್ನೇ ಕಟ್ಟಿಕೊಡುತ್ತಾ ಬರಲಾಗಿದೆ. ಕಾಲ ಬದಲಾದ ಹಾಗೆ ಅಪ್ಪನ ಪಾತ್ರವೂ ಬದಲಾಗುತ್ತಾ ಸಾಗಿದ್ದು, ತನ್ನೆದೆಯ ಒಳಗಡೆ ತಾಯ್ತನವನ್ನು ಜಾಗೃತಗೊಳಿಸಿಕೊಳ್ಳುವ ಹೊರಳು ಹಾದಿಯಲ್ಲಿದ್ದಾನೆ.

ಆಧುನಿಕ ಬದುಕಿನ ಪರಿಣಾಮ ಹೆಚ್ಚುತ್ತಿರುವ ವಿಭಕ್ತ ಕುಟುಂಬಗಳು, ವಿಸ್ತರಿಸಿದ ಆರ್ಥಿಕ ಚಿಂತನೆಗಳು ಹೆಣ್ಣಿಗೆ ಹೊರದುಡಿಮೆಯ ಅವಕಾಶವನ್ನು ತೆರೆದಿದೆ. ಗಂಡು ಹೊತ್ತಿದ್ದ ಆರ್ಥಿಕ ಜವಾಬ್ದಾರಿಯನ್ನ ಹೆಣ್ಣೂ ಹೊರುತ್ತಿರುವುದರಿಂದ ಅವನು ಅನಿವಾರ್ಯವಾಗಿ ಕೌಟುಂಬಿಕ ಜವಾಬ್ದಾರಿ ನಿರ್ವಹಿಸಬೇಕಿದೆ. ಗಂಡ ಹೆಂಡತಿ ಇಬ್ಬರ ದುಡಿಮೆಯ ಕಾರಣ ಇಬ್ಬರೂ ಕೂಡಿಯೇ ಮಕ್ಕಳನ್ನು ಸಾಕುವ ಅಗತ್ಯ ಹೆಚ್ಚುತ್ತಿದೆ. ಮಕ್ಕಳ ಲಾಲನೆ, ಪಾಲನೆ ಪೋಷಣೆ ಅವರೊಂದಿಗಿನ ಆಪ್ತ ಸಂಬಂಧ. ಅದು ಅಮ್ಮನಿಂದ ಮಾತ್ರ ಸಾಧ್ಯವೆಂಬ ಸವಕಲು ಆಲೋಚನೆಗಳು ಬದಲಾಗಿ ಬರಡಾದ ಅಪ್ಪನೆದೆ ಆರ್ದ್ರಗೊಳ್ಳುತ್ತಾ, ಪ್ರೀತಿ ಕಾಳಜಿ ಕರುಣೆ ಮಮತೆ ವಾತ್ಸಲ್ಯ ಚಿಗುರುತ್ತಿವೆ.

ಹಿಂದೆಲ್ಲಾ ಹೆರಿಗೆ ಕೋಣೆಯಿಂದ ಮಾರು ದೂರ ನಿಂತಿರುತಿದ್ದ ಗಂಡಂದಿರು, ತಮ್ಮ ಹೆಂಡತಿಯರು ನೋವಿಗೆ ಬಿಗಿ ಹಿಡಿಯುವ ಕೈಗಳಿಗೆ ಆಸರೆಯಾಗಿ ಅವಳ ಬಳಿಯೇ ನಿಂತು ನೋವನ್ನ ಮರೆಸುತ್ತಾ ಅಳುವ ಕಂದನನ್ನ ಎದೆಗಪ್ಪಿ ಮುದ್ದಾಡುತ್ತಿದ್ದಾರೆ. ಆಗತಾನೆ ಹುಟ್ಟಿದ ತಮ್ಮ ಕೂಸುಗಳನ್ನು ತಮ್ಮ ಬರಿ ಎದೆಗೆ ಅವುಚಿಕೊಂಡ, ಕೈಬೀಸಿ ನಡೆವ ಹೆಂಡತಿಯರ ಜೊತೆಯಲ್ಲಿ ಮಕ್ಕಳನೆತ್ತಿ ಸಾಗುವ ಅಸಂಖ್ಯವಾದ ಫೋಟೋಗಳು ಹರಿದಾಡುತ್ತಿವೆ. ಈಗ ಅವರ ಮುಖದಲ್ಲಿ ತಾಯಿಯ ಅದೇ ಮೃದುತ್ವ ಹೊಳೆಯುತ್ತಿದೆ.

ಹೆಂಡತಿಯ ಜವಾಬ್ದಾರಿಯುತ ಕೆಲಸದ ಅರಿವಿರುವ ಪರಿಚಯದ ಆ ಹುಡುಗ ತನ್ನೆಲ್ಲ ಓದು ಬರಹ ಸಂಶೋಧನೆಗಳ ಆಚೆಗೂ ಮಗುವನ್ನು ಎಡತಾಗುತ್ತಾನೆ. ಆ ಕಂದನ ಪಾಲನೆ, ಪೋಷಣೆ ಮಾಡುತ್ತಾನೆ. ಬೇಕು, ಬೇಡಗಳನ್ನು ಗಮನಿಸುತ್ತಲೇ ತನ್ನದೆಯಲ್ಲಿ ಕಾಪಿಟ್ಟುಕೊಂಡಿರುವ ಅವನ ಬಗೆಯನ್ನು ಕಂಡಾಗಲೆಲ್ಲಾ ಅದು ಯಾರು ಹೇಳಿರಬಹುದು, ತಾಯ್ತನ ಹೆಣ್ಣಿನ ಜೈವಿಕ ಸಂಬಂಧಿಯಾದುದು ಎಂದೆನಿಸುತ್ತದೆ. ಇನ್ನು ಸಾಂಸಾರಿಕ ಚೌಕಟ್ಟಿನಾಚೆಗೂ ತಾಯ್ತನವೆಂಬುದು ಒಂದು ವಿಶ್ವಾತ್ಮಕ ಮೌಲ್ಯವೇ ಹೌದು. ಜಗತ್ತಿನ ಚರಾಚರಗಳಿಗೂ ಲೇಸನ್ನೇ ಬಯಸಿದ, ಜಗತ್ತಿನ ಎಲ್ಲರಿಗೂ ಪ್ರೀತಿಯನ್ನು ಹಂಚಿದ ಜೀವಕಾರುಣ್ಯದ ಬುದ್ಧ ಬಸವ, ಅಂಬೇಡ್ಕರ್, ಗಾಂಧಿ, ಕುವೆಂಪು, ಬೇಂದ್ರೆ ಇವರನ್ನೆಲ್ಲ ತಾಯಿಯಂದಿರಲ್ಲ ಎನ್ನದಿರಲು ಹೇಗೆ ಸಾಧ್ಯವಿಲ್ಲವೋ ಹಾಗೆ ತಾಯ್ತನವನ್ನು ಕೇವಲ ಜೈವಿಕತೆಗೆ ಸೀಮಿತಗೊಳಿಸಲಿಕ್ಕೆ ಸಾಧ್ಯವೇ ಇಲ್ಲ.

ಮೊನ್ನೆಯ ಸಂವಾದ ಒಂದರಲ್ಲಿ ದು.ಸರಸ್ವತಿ ತಮ್ಮ ತಂದೆಯನ್ನು ನೆನಪಿಸಿಕ್ಕೊಳ್ಳುತ್ತಾ, 'ನಮಗೆ ಕಕ್ಕಸು ಮಾಡಲು ಅಷ್ಟೇ ಗೊತ್ತಿತ್ತು. ಅದನ್ನು ನಿತ್ಯ ತನ್ನ ಕೈಯಿಂದಲೇ ಸ್ವಚ್ಛಗೊಳಿಸುತ್ತಿದ್ದವನು ನನ್ನಯ್ಯ' ಎಂದು ತಂದೆಯ ತಾಯ್ತನದ ಅದಮ್ಯತೆಯನ್ನು ತೆರೆದಿಟ್ಟರು..ಇಂತಹ ಅಯ್ಯನ ಬಳಿ ಮೊದಲ ಸಂಬಳವನ್ನು ಹಿಡಿದು ಹೋದಾಗ, 'ತಣ್ಣಗಿರವ್ವ ಮಗಳೇ ಎಂದನೇ ಹೊರತುಆ ಹಣವನ್ನುಬಯಸಲಿಲ್ಲ' ಎಂದು ಭಾವುಕರಾಗಿದ್ದರು.

ಮಕ್ಕಳನ್ನು ಸಾಕಿ ಬೆಳೆಸುವಲ್ಲಿ ತಂದೆ-ತಾಯಿ ಎನ್ನುವ ಭೇದವಿಲ್ಲ. ತಂದೆ-ತಾಯಿ ಪ್ರೀತಿಯ ಎರಡು ರೂಪಗಳೇ ಹೌದು. ಮಕ್ಕಳ ಪೋಷಣೆ ತಂದೆಯ ಜವಾಬ್ದಾರಿಯಷ್ಟೇ ಅಲ್ಲ, ಅದು ಒತ್ತಡ ಬದುಕಿನ ನಿರಾಳತೆ. ಬದುಕಿನ ಸಣ್ಣ ಪುಟ್ಟ ಸಂತೋಷಗಳು ಘನವಾದ ಸಾಧನೆಗಳಿಗಿಂತ ಮುಖ್ಯವೇ ಹೌದು. ಹದಗೆಡುತ್ತಿರುವ ಸಾಂಸಾರಿಕ ಸಂಬಂಧಗಳು, ಒತ್ತಡದ ಬದುಕಿಗೆ ಮದ್ದೂ ಹೌದು. ಈ ತಂದೆಯಂದಿರ ದಿನದಂದು ಜಗತ್ತಿನ ಎಲ್ಲಾ ಗಂಡಸರು ತಮ್ಮೊಳಗಿನ ತಾಯ್ತುವನ್ನು ಎಚ್ಚರಿಸಿಕ್ಕೊಳ್ಳುವಂತಾಗಲಿ. ಆ ಮೂಲಕ ಮನುಷ್ಯನ ಬದುಕಷ್ಟೆ ಅಲ್ಲ, ಈ ಜಗತ್ತಿನಚರಾ ಚರಗಳ ಬದುಕೂ ಹಸನಾಗಲಿ. ❖



ಪ್ರತಿಕ್ರಿಯೆಗಳು

ಎರಡನೇ ಡಾಕ್ಟರೇಟ್ ಪದವಿ

04.06.23ರ ಭಾನುವಾರದ ಪುರವಣಿಯಲ್ಲಿ ಪ್ರಕಟಗೊಂಡ 'ವಾಗರ್ಥದ ಹುಡುಕಾಟದಲ್ಲಿ...' ಲೇಖನದಲ್ಲಿ ಜರ್ಮನಿಯ ಟ್ಯುಬಿಂಗೆನ್ ವಿಶ್ವವಿದ್ಯಾಲಯವು ಕನ್ನಡದ ಕೆಲಸಕ್ಕಾಗಿ ಮೊಟ್ಟ ಮೊದಲ ಡಾಕ್ಟರೇಟ್ ಪದವಿಯನ್ನು ಫರ್ಡಿನಾಂಡ್ ಕಿಟೆಲ್ ಅವರಿಗೆ 1896ರಲ್ಲಿ ನೀಡಿತು ಎಂದು ಲೇಖಕರು ತಿಳಿಸಿದ್ದಾರೆ. ಆದರೆ ಅದಕ್ಕೂ ಮೊದಲು ಅದೇ ಟ್ಯುಬಿಂಗೆನ್ ವಿಶ್ವವಿದ್ಯಾಲಯವು ಹರ್ಮನ್ ಮೋಗ್ಲಿಂಗ್ ಅವರಿಗೆ ಕನ್ನಡದ ಕೆಲಸಕ್ಕಾಗಿ ಮೊಟ್ಟ ಮೊದಲ ಡಾಕ್ಟರೇಟ್ ಪದವಿಯನ್ನು ನೀಡಿದೆ. ಹಾಗಾಗಿ ಕಿಟೆಲ್ ಅವರಿಗೆ ಕೊಟ್ಟಿದ್ದು ಎರಡನೇ ಡಾಕ್ಟರೇಟ್ ಪದವಿ.

ಗುಬ್ಬಿ ರೇವಣಾರಾಧ್ಯ, ಬೆಂಗಳೂರು

ಮಲ್ಟಿ ಟಾಸ್ಕಿಂಗ್ ಅನಿವಾರ್ಯ

ಮಲ್ಟಿ ಟಾಸ್ಕಿಂಗ್ ವಿಷಯದ ಕುರಿತ ಲೇಖನ(ಜೂ.11ರ ಸಂಚಿಕೆ) ಓದಿದಾಗ ನನ್ನ ಕಾಡಿದ ಪ್ರಶ್ನೆ ಒಂದೇ. ಇದು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಅನ್ನೋದು ನಮಗೂ ಗೊತ್ತು. ಆದರೆ ಇದಕ್ಕೆ ಪರಿಹಾರ ಏನು? ಮಲ್ಟಿ ಟಾಸ್ಕಿಂಗ್ ಮಹಿಳೆಯರಿಗೆ ಒಂದು ರೀತಿ ಅನಿವಾರ್ಯ. ಮಾಡಲೇಬೇಕಷ್ಟೆ.

ಕೆಲಸಕ್ಕೆ ಹೋಗುವ ಮಹಿಳೆಯರಾದರೆ/ವರ್ಕ್ ಫ್ರಮ್ ಹೋಮ್ ಇದ್ದವರೂ ಒಂದು ವಾರದ ಊಟ ತಿಂಡಿಯ ಟೈಮ್‌ಟೇಬಲ್ ತಮ್ಮ ತಲೆಯಲ್ಲಿ ರೆಡಿ ಮಾಡಿಟ್ಟುಕೊಂಡಿರಬೇಕಿರುತ್ತೆ. ಎಷ್ಟೋ ದಿನ ರಾತ್ರಿ ಬೆಳಗಿನ ಕೆಲಸಗಳ ಬಗೆಗಿನ ಟೆನ್‌ಷನ್‌ನಲ್ಲಿ ನಿದ್ದೆಯೇ ಬಂದಿರುವುದಿಲ್ಲ. ಯಾವ ಕೆಲಸ ಬಿಡಬಹುದು ನಾವು? ತರಕಾರಿ, ಅಕ್ಕಿ ತೊಳೆಯದೆ ಹಾಗೆ ಅಡುಗೆ ಮಾಡಲಿಕ್ಕೆ ಆಗುತ್ತದೆಯೇ? ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇದ್ದವರು ಮೂರು ಬಾರಿ ತೊಳೆಯದೆ ಉಪಯೋಗಿಸಲು ಸಾಧ್ಯವೇ? ಈಚೆ ತರಕಾರಿ ಕತ್ತರಿಸುತ್ತಿದ್ದಂತೆ ಆಚೆ ಕುಕ್ಕರ್ ರೆಡಿ ಆಗಬೇಕು, ಅದು ಕೂಗುವುರೊಳಗೆ ಕಾಯಿ ತುರಿದು, ಮಸಾಲೆ ಹುರಿದು ರುಬ್ಬಿ ಆಗಬೇಕು, ಅದು ಕುದಿಯುವುದರೊಳಗೆ ದೋಸೆ ಹಿಟ್ಟಿಗೆ ಕ್ಯಾರೆಟ್ ತುರಿ, ಸಣ್ಣಗೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು ಹಾಕಿ ರೆಡಿಯಾಗಿರಬೇಕು. ಒಗ್ಗರಣೆ ಸಿಡಿಯುವ ಗ್ಯಾಪ್‌ನಲ್ಲಿ ಮಗುವಿನ ಸ್ಕೂಲ್ ಸ್ಯಾಕ್ಸ್ ರೆಡಿ ಮಾಡಿಟ್ಟುಕೊಂಡಿರಬೇಕು. ಈ ಮಧ್ಯೆ ವಾಷಿಂಗ್‌ಮಷೀನ್‌ಗೆ ಬಟ್ಟೆ ಹಾಕುವ ಕೆಲಸವೂ ನಡೆಯಬೇಕು. ವೀಕೆಂಡ್‌ನಲ್ಲಿಯೇ ಎರಡರಿಂದ ಮೂರು ದಿನಕ್ಕಾಗುವಷ್ಟು ದೋಸೆಗೋ, ಇಡ್ಲಿಗೋ ಹಿಟ್ಟು ರುಬ್ಬಿಟ್ಟುಕೊಂಡರೆ ಅದೇ ಹಿಟ್ಟಿನಲ್ಲಿ ಒಂದು ದಿನ ಉತ್ತಪ್ಪನೋ, ಪಡ್ಡೋ ಮಾಡಿ, 'ಅಮ್ಮಾ ದಿನಾ ದೋಸೆನಾ' ಎಂದು ಅಳೋ ಮಗುಗೆ ದಿನಕ್ಕೊಂದು ತಿಂಡಿ ಅಂಥ ಹೇಳಿ ಸಮಾಧಾನ ಮಾಡಲು ನಮ್ಮದೇ ಸುಲಭದ ದಾರಿ ಕಂಡುಕೊಂಡಿರುತ್ತೇವೆ.

ಮಲ್ಟಿ ಟಾಸ್ಕಿಂಗ್ ಅನಿವಾರ್ಯ. ಯಾವ ಪರಿಹಾರವೂ ಇಲ್ಲ. ಯಾರ ಸಹಾಯ ಕೇಳುತ್ತೀರಿ? ತಾಯಿ-ತಂದೆ, ಅತ್ತೆ-ಮಾವ ಈಗಾಗಲೇ ನಾವು ಸಂಸಾರದಲ್ಲಿ ಕಷ್ಟಪಟ್ಟು ಸಾಕಾಗಿದೆ ಈಗೊಂದಿಷ್ಟು ವಿಶ್ರಾಂತಿ ಬೇಕು ಅನ್ನುವ ಮನಃಸ್ಥಿತಿಯಲ್ಲಿರುತ್ತಾರೆ. ಇನ್ನು ಕೆಲಸಕ್ಕೆ ಜನ ಹಾಕಿಕೊಳ್ಳುವುದು ಈಗಿನ ಬೆಲೆ ಏರಿಕೆ ದಿನಗಳಲ್ಲಿ ಮಧ್ಯಮ ವರ್ಗಕ್ಕೆ ತುಸು ದುಬಾರಿಯೇ. ಅನಿವಾರ್ಯವಾಗಿ ಈ ಮಲ್ಟಿ ಟಾಸ್ಕಿಂಗ್ ಒಪ್ಪಿಕೊಂಡೇ ಅದರ ಜೊತೆಗೇ ದಿನ ಸವೆಸಬೇಕಷ್ಟೆ.

ಶ್ರೀನಿಧಿ ಅಡಿಗ, ಮಂಗಳೂರು

ಬಹುಕಾರ್ಯ ಅರ್ಥಾತ್ ಮಲ್ಟಿ ಟಾಸ್ಕಿಂಗ್ ಮಾಡುವುದು ಜನರಿಗೆ ಈಗ ಕರಗತವಾಗಿದೆ. ವೈದ್ಯರು ತಿಳಿಸಿರುವ ಹಾಗೆ ಒಂದಾದಮೇಲೆ ಒಂದರಂತೆ ಸರಣಿಯಲ್ಲಿ ಬಹುಕಾರ್ಯ ಮಾಡುವುದು ಸರಿಯಾದ ಕ್ರಮ. ಹಿಂದಿನ ಕಾಲದಲ್ಲಿ ಮನೆಯ ತುಂಬ ಹೆಚ್ಚು ಜನರಿದ್ದ ಅವಿಭಕ್ತ ಕುಟುಂಬಗಳಲ್ಲಿ ಕೆಲಸ-ಕಾರ್ಯಗಳನ್ನು ಹಂಚಿಕೊಂಡು ಮಾಡುತ್ತಿದ್ದರು. ಆಗಲೂ ಒಂದೇ ಸಲಕ್ಕೆ ಕೆಲವು ಕೆಲಸಗಳನ್ನು ಒಂದಾದ ಮೇಲೆ ಒಂದರಂತೆ ಮಾಡಲೇಬೇಕಿತ್ತು. ರೈತರ ಬದುಕಿನಲ್ಲಂತೂ ಚಕಚಕನೆ ಈ ರೀತಿಯ ಟಾಸ್ಕ್‌ಗಳನ್ನು ಕಾಣುತ್ತೇವೆ. ಮೊಬೈಲ್ ಬಂದ ನಂತರ ಅದಕ್ಕೆ ಹೊಂದಿಕೊಂಡಂತೆ ಕೆಲವು ಮಾನಸಿಕ ಸಮಸ್ಯೆಗಳು ಶುರುವಾಗಿರುವುದೇನೊ ದಿಟ. ಆದರೆ, ದೈನಂದಿನ ಕೆಲಸಗಳನ್ನು ಸಮಯ ಉಳಿಸಿಕೊಂಡು ಹೋಗುವಂತೆ ಮಾಡಿದರೆ ಅದು ಮನಸ್ಸಿಗೆ, ಕುಟುಂಬಕ್ಕೆ ಒಳ್ಳೆಯದೇ ಆಗಿದೆ.

ಎನ್. ನಂಜೇಗೌಡ, ಹಾಸನ

ಮುನ್ನೋಟ 18-06-2023 ರಿಂದ -24-06-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಮೇಲಾಧಿಕಾರಿಯ ಜೊತೆ ವಾಗ್ವಾದ ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡುವುದು ಒಳ್ಳೆಯದು. ಮಕ್ಕಳ ಜೊತೆ ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳಲೇ ಬೇಕಾದ ಅನಿವಾರ್ಯ ಪರಿಸ್ಥಿತಿ ಇರುತ್ತದೆ. ಆಸ್ತಿ ಮೇಲೆ ಬಂಡವಾಳ ಹೂಡಿಕೆ ಮಾಡುವ ಸಾಧ್ಯತೆಗಳಿವೆ. ಉದ್ಯೋಗ ಸ್ಥಳದಲ್ಲಿ ನಡೆದ ಕಹಿ ಘಟನೆಗಳನ್ನು ಮರೆಯುವುದು ಒಳ್ಳೆಯದು. ಆರೋಗ್ಯದ ಬಗ್ಗೆ ಸ್ವಲ್ಪ ಗಮನವಿಡಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಮನಸ್ಸಿನ ಭಾವನೆಗಳನ್ನು ಸ್ನೇಹಿತರ ಬಳಿ ಹೇಳಿಕೊಂಡು ಮನಸ್ಸಿನಲ್ಲಿದ್ದ ಆತಂಕವನ್ನು ದೂರ ಮಾಡಿಕೊಳ್ಳುವಿರಿ. ವಚನ ಪಾಲನೆ ಮಾಡುವುದರಿಂದ ಬಂಧುಗಳ ನಡುವೆ ವಿಶೇಷ ಗೌರವ ದೊರೆಯುತ್ತದೆ. ಹೈನುಗಾರಿಕೆಯನ್ನು ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಆಗುತ್ತದೆ, ಹಾಲಿನ ಉಪ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭವಿರುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ತೆಗೆದಿಡುವಿರಿ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿಮ್ಮ ಮಾತಿನ ಚತುರತೆಯಿಂದ ಜನರಿಂದ ಬೆಂಬಲ ಗಳಿಸುವಿರಿ. ಇದರಿಂದ ನಿಮ್ಮ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಅತಿಯಾದ ಆತ್ಮಭಿಮಾನವನ್ನು ಬಿಡುವುದು ಒಳ್ಳೆಯದು. ಸಂಘ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಹೆಚ್ಚು ಮನ್ನಣೆ ದೊರೆತು ಪ್ರಮುಖ ಹುದ್ದೆಗಳು ದೊರೆಯುವ ಸಂದರ್ಭವಿದೆ. ಹೊಸ ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಹೊಸ ವಿದ್ಯೆಯನ್ನು ಕಲಿಯಲು ಬಹಳ ಉತ್ಸುಕರಾಗಿರುವಿರಿ. ಬುದ್ಧಿವಂತಿಕೆಯ ಕೊರತೆ ಎದ್ದು ಕಾಣುತ್ತದೆ. ಹಣದ ಒಳಹರಿವು ಅವಶ್ಯಕತೆಯನ್ನು ಪೂರೈಸುತ್ತದೆ. ಲಲಿತ ಕಲೆಯಿಂದ ಹೆಚ್ಚಿನ ಆದಾಯವನ್ನು ಮಾಡಿಕೊಳ್ಳಬಹುದು. ಒಡಹುಟ್ಟಿದವರಿಂದ ಕೆಲವು ವಿಚಾರಗಳಲ್ಲಿ ಕಿರಿಕಿರಿ ಉಂಟಾಗುತ್ತದೆ. ಸಂಗಾತಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಾಧ್ಯತೆಯಿದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಜನರ ಸಹಾಯ ನಿಮಗೆ ದೊರೆಯುತ್ತದೆ. ನಿಮ್ಮ ಆಲೋಚನೆಗಳು ಸಂಪೂರ್ಣವಾಗಿ ವ್ಯವಹಾರಾತ್ಮಕವಾಗಿರುತ್ತದೆ. ಬಂಧುಗಳ ಸಹಕಾರಗಳು ನಿಮ್ಮೆಲ್ಲಾ ಕೆಲಸಗಳಿಗೆ ದೊರೆಯುತ್ತದೆ. ಸೂಕ್ಷ್ಮ ವಿಚಾರಗಳಲ್ಲಿ ಮಾತನಾಡುವಾಗ ಎಚ್ಚರವಹಿಸಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಅನ್ವೇಷಣಾ ವೃತ್ತಿಯಲ್ಲಿರುವವರಿಗೆ ಯಶಸ್ಸು ದೊರೆಯುವ ಸಾಧ್ಯತೆ ಇದೆ. ಕರಕುಶಲ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಅಕ್ಕಪಕ್ಕದವರು ನಿಮ್ಮನ್ನು ನೋಡಿ ಅನುಮಾನ ಪಡುವಂತಹ ಕೆಲಸಗಳು ನಿಮ್ಮಿಂದ ಆಗಬಹುದು ಈ ಬಗ್ಗೆ ಎಚ್ಚರದಿಂದಿರಿ. ವ್ಯಾಪಾರದಲ್ಲಿ ಹೂಡಿಕೆ ಹಣ ವಾಪಸ್ ಬರುವುದು ಕಷ್ಟವಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಕಷ್ಟವಾಗಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ರೈತರ ಬೆಳೆಗಳಿಗೆ ಉತ್ತಮ ಬೆಲೆ ಸಿಗುವ ಸಾಧ್ಯತೆ ಇದೆ. ರಾಜಕೀಯ ವ್ಯಕ್ತಿಗಳು ಸೂಕ್ತ ಸ್ಥಾನವನ್ನು ಗಿಟ್ಟಿಸಲು ಸಾಕಷ್ಟು ಹೆಣಗಡಬೇಕಾಗುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶದ ಜೊತೆ ತಕ್ಕ ಪುರಸ್ಕಾರಗಳು ದೊರೆಯುತ್ತವೆ. ಪಾದರಕ್ಷೆಯನ್ನು ಮಾರುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಸರ್ಕಾರಿ ಸಾಲ ಸೌಲಭ್ಯಗಳು ಶಿಫಾರಸ್ಸಿನ ಮೇಲೆ ದೊರೆಯುತ್ತವೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ದೇವರ ನಾಮ ಹಾಡುವವರಿಗೆ ಉತ್ತಮ ವೇದಿಕೆ ದೊರೆಯುವ ಸಾಧ್ಯತೆ ಇದೆ. ನಿಮ್ಮ ಮನಸ್ಸಿನ ಚಂಚಲ ಸ್ವಭಾವದಿಂದ ಕೆಲವು ಕಾರ್ಯಗಳಲ್ಲಿ ವಿಫಲರಾಗುವ ಸನ್ನಿವೇಶಗಳಿವೆ. ಭೂಮಿಯ ವ್ಯವಹಾರದಲ್ಲಿ ವಂಚನೆ ಆಗುವ ಸಾಧ್ಯತೆ ಇದೆ, ಸರಿಯಾಗಿ ಪರಿಶೀಲಿಸಿ ವ್ಯವಹಾರ ಮಾಡಿ. ನೆಚ್ಚಿನ ಕ್ಷೇತ್ರಗಳಲ್ಲಿ ಹೆಚ್ಚು ಪ್ರತಿಸ್ಪರ್ಧಿಗಳು ಬರುವ ಸಾಧ್ಯತೆ ಇದೆ, ಧೈರ್ಯವಾಗಿ ಎದುರಿಸಿ. ಪತ್ರಕರ್ತರಿಗೆ ಪ್ರಶಂಸೆಯ ಮಾತುಗಳು ಕೇಳಿಬರುತ್ತವೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಅವಿವಾಹಿತರಿಗೆ ಸೂಕ್ತ ಸಂಬಂಧಗಳು ಒದಗುವ ಸಾಧ್ಯತೆ ಇದೆ. ಸಾಂಸಾರಿಕವಾಗಿ ಇದ್ದ ಕೆಲವು ಸಮಸ್ಯೆಗಳು ಕಡಿಮೆಯಾಗಿ ನೆಮ್ಮದಿ ಅನಿಸುತ್ತದೆ. ಯಾವುದೇ ವಿಷಯವಾದರೂ ಸರಿಯಾಗಿ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳಿ. ವಿದ್ಯಾರ್ಥಿಗಳು ಅಪೇಕ್ಷೆ ಪಟ್ಟ ಫಲಿತಾಂಶವನ್ನು ಪಡೆಯಬಹುದು. ಚರ್ಮದ ವಸ್ತುಗಳನ್ನು ತಯಾರಿಸುವವರಿಗೆ ಹಾಗೂ ಮಾರಾಟ ಮಾಡುವವರಿಗೆ ಲಾಭ ಇರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಜೀವನದಲ್ಲಿ ಹೊಸ ಆಸಕ್ತಿ ಬೆಳೆಯುತ್ತದೆ. ಕುಟುಂಬದ ಹಿರಿಯರ ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣಬಹುದು. ರಾಜಕೀಯ ವ್ಯಕ್ತಿಗಳ ಪರಿಚಯ ಆಗುತ್ತದೆ. ನಿಮ್ಮ ಮುಂದಿನ ಕಾರ್ಯ ಯೋಜನೆಗಳಿಗೆ ಸ್ಪಷ್ಟ ರೂಪ ಕೊಡುವಿರಿ. ನಿಮ್ಮನ್ನು ಅಗೌರವದಿಂದ ಕಂಡಿದ್ದ ಬಂಧುಗಳೇ ನಿಮ್ಮ ಬಳಿ ಸಹಾಯ ಕೇಳಲು ಬರುತ್ತಾರೆ. ಅದಿರು ಮಾರಾಟಗಾರರಿಗೆ ಹೆಚ್ಚಿನ ಆದೇಶಗಳು ದೊರೆಯುತ್ತವೆ.


ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಮಕ್ಕಳಿಂದ ಗೌರವ ದೊರೆಯುತ್ತದೆ. ಕಫ ಪ್ರಕೃತಿ ಇರುವವರಿಗೆ ಉಸಿರಾಟದ ಸಮಸ್ಯೆ ಬರಬಹುದು. ಜವಳಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಾಗಿ ಲಾಭ ಹೆಚ್ಚುತ್ತದೆ. ಗಣಿತ ಕ್ಷೇತ್ರದಲ್ಲಿರುವವರು ಹೆಚ್ಚಿನ ಪ್ರಗತಿಯನ್ನು ಕಾಣಬಹುದು. ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಪ್ರಗತಿ ಇರುತ್ತದೆ. ಸರ್ಕಾರಿ ನೌಕರರು ಸೂಕ್ತ ಸ್ಥಳಕ್ಕೆ ವರ್ಗಾವಣೆ ಮಾಡಿಸಿಕೊಳ್ಳುವಲ್ಲಿ ಸಫಲರಾಗುವರು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಧರ್ಮ ವಿದ್ಯೆಯಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ ಹಾಗೂ ಅದಕ್ಕೆ ತಕ್ಕಂತೆ ಸೂಕ್ತ ಮಾರ್ಗದರ್ಶಕರು ದೊರೆಯುವರು. ಪ್ರೀತಿ ಪಾತ್ರರೊಂದಿಗೆ ಭವಿಷ್ಯದ ಯೋಜನೆಗಳ ಬಗ್ಗೆ ಚರ್ಚೆ ಮಾಡುವಿರಿ. ಆತ್ಮೀಯರಿಗೆ ಸಾಂತ್ವನ ಹೇಳಬೇಕಾದ ಸಂದರ್ಭ ಬರಬಹುದು. ವಸ್ತ್ರಾಭರಣಗಳ ಖರೀದಿಯಲ್ಲಿ ಹೆಚ್ಚು ಆಸಕ್ತಿ ತೋರಿಸುವಿರಿ. ಕೆಲವರಿಗೆ ಉದ್ಯೋಗದ ಮೇಲೆ ಪ್ರವಾಸ ಹೋಗುವ ಅವಕಾಶ ಸಾಧ್ಯತೆ ಇದೆ.

ಪದಬಂಧ 2794



ಮೇಲಿನಿಂದ ಕೆಳಕ್ಕೆ

1. ಹುಡುಕಿದರೆ ಸಿಗುವ ಉದ್ಭವ ಮೂಲ 3
2. ತಲೆಕೆಳಕಾದ ಹತ್ತುತಲೆಯ ಲಂಕಾಧೀಶ 3
3. ಅಲ್ಲಿ ಇಲ್ಲಿ ಕೇಳಿ ಮಾಹಿತಿ ಪಡೆದುಕೊ 4
4. ಕಾವ್ಯ ಸೃಷ್ಟಿಸುವವನ ಹಾಡು 4
6. ಸುಲಭವಾಗಿ ಭಾವ ಹಾಡಾಗುವ ಗೀತ ಪ್ರಕಾರ 6
7. ಭಗೀರಥ್ನ ಪ್ರಯತ್ನದಿಂದ ಈತನ ಮಕ್ಕಳಿಗಾಗಿ ಗಂಗೆ ಧರೆಗಿಳಿದಳು 3
11. ಚುನಾವಣೆ ಗೆದ್ದ ಧುರೀಣರು ಜನತೆಗೆ ಕೊಡುವ ಆತ್ಮಸಾಕ್ಷಿಯ ಮಾತು 6
14. ದೇಶದ ಗಡಿ ಕಾಯುವ ಯೋಧ 3
16. ಸಾಧಾರಣವಾಗಿ ವಿಧಾನ ಮಂಡಲದ ಚರ್ಚೆ 3
18. ಲೆಕ್ಕಕ್ಕೆ ಬಾರದ ಗಾರ್ದಭ ಲಾಂಗೂಲ 4
19. ನಿಮಗಿದೋ ನನ್ನ ಮನಸ್ಸಿನ ವಂದನೆ 4
22. ಜಂಗಮಕ್ಕಳಿವಿಲ್ಲ ಆದರೆ ಈ ಅಲ್ಪಪ್ರಾಣದ ಸ್ಥಿರವಸ್ತುವಿಗೆ ಉಂಟು 3
24. ಹೆಣ್ಣು ಗಂಡು ಕೂಡಿರುವ ರಾಶಿ 3

ಎಡದಿಂದ ಬಲಕ್ಕೆ

1. ಇದೀಗ ಮಹಿಳೆಯರಿಗೆ ಬಸ್‌ನಲ್ಲಿ 'ಫ್ರೀ' ತಿರುಗಾಟ 6
3. ಸರ್ಕಾರಿ ಕಟ್ಟಳೆಗಳನ್ನು ಜಾರಿಗೆ ತರುವ ವಿಧಿ 4
5. ಒತ್ತಡವಿಲ್ಲದ ಹಗುರವಾದ ಆಂತರ್ಯ 3
7. ಬಹುತೇಕ ಹೆಚ್ಚುಕಡಿಮೆಯಿಲ್ಲದೆ ಸಮವಾಗಿ ಭಾಗಿಸಿ ಜರುಗಿದ್ದು 4
9. ಕರ್ನಾಟಕ ಭಾರತ ಕಥಾಮಂಜರಿಯ ವೀರನಾರಾಯಣ ಕ್ಷೇತ್ರ 3
10. ಒಳ್ಳೆಯ ಬೆಳಗಿನ ಶುಭಾಶಯ 4
12. ವಿರಳವಾದ ಕರ್ಮ 3
13. ಬಿಡುವಿನಲ್ಲಿ ಕಾಣಿಸುವ ಶಶಿ 3
15. ರಸಾಯನಶಾಸ್ತ್ರದಲ್ಲಿ ಬರುವ ತಂದೆ 3
17. ಇಳೆಗೆ ಮಳೆನೀಡುವ ದೇವ 3
18. ನಗರದಲ್ಲಿ ನಡೆಯುತ್ತಿದ್ದ ಚೌರ್ಯ ಗೂಗಲ್ ಕೃಪೆಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಕಾಣಬಹುದು 4
20. ಬೀಸಣಿಕೆಯ ಗಾಳಿಯಾಗಿ ಬೀಸುವ ಸುವಾಸಿತ ಬೇರು 3
21. ವಿರಸದಿಂದ ಆಂತರ್ಯ ಬಿಸಿ
23. ತಿಂಗಳ ಒಂಭತ್ತನೆಯ ತಿಥಿ 3
25. ವಿಷ್ಣುಪತ್ನಿಯ ಪಟ್ಟಣ 4
26. ದುರ್ಗಾಸ್ತಮಾನಕ್ಕೆ ಕಾರಣವಾದ ನೆತ್ತರ ರಾಜ ಪೀಠ 6

ಪದಬಂಧ ಉತ್ತರ -2793

ಮೇಲಿಂದ ಕೆಳಕ್ಕೆ

1. ಸೇವಾಭಾವ 2.ಗೆಜ್ಜೆನಾದ 3.ಜೀವನಾಡಿ 4.ಗೆಲುವು 5.ಗಣಿತ 8.ಪ್ರಕೃತಿ 10.ಡಮರು 11.ಸುಜಾತಾ 13.ಡಿಬಾರು 14.ಸುನಾದ 16.ವರಾಹ 18.ಪಾದಚಾರಿ 19.ರಮೇಶಿ 20.ಸವಿಸ್ತಾರ 21.ತರುವಾಯ 22.ನಗದು

ಎಡದಿಂದ ಬಲಕ್ಕೆ

1. ಸೇವಂತಿಗೆ 3.ಜೀರಿಗೆ 5.ಗತಜೀವ 6.ನಾಗಿಣಿ 7.ವರಪ್ರದ 9.ತಡಬಡಿಸು 12.ತಿಂಡಿತಿನಿಸು 15.ರುದ್ರಾವತಾರ 17.ರುಪಾಯಿದರ 20.ಸಹಮತ 23.ಮೇಧಾವಿ 24.ಚಾರುಕೇಶಿ 25.ದುಬಾರಿ 26.ರಮಣೀಯ

ಡರ್ಬನ್‌ನಲ್ಲಿ ಗಾಂಧಿ ಸ್ಮರಣೆ

ದಕ್ಷಿಣ ಆಫ್ರಿಕಾದ ಮ್ಯಾರಿಟ್ಸ್‌ಬರ್ಗ್‌ನಲ್ಲಿ ಗಾಂಧೀಜಿ ಅವರನ್ನು ರೈಲಿನಿಂದ ಹೊರತಳ್ಳಿದ ಘಟನೆ ನಡೆದು 130 ವರ್ಷಗಳಾಗಿವೆ. ದಕ್ಷಿಣ ಆಫ್ರಿಕಾದಲ್ಲಿನ ಭಾರತ ರಾಯಭಾರ ಕಚೇರಿ, ಪೀಟರ್ ಮ್ಯಾರಿಟ್ಸ್‌ಬರ್ಗ್ ಗಾಂಧಿ ಫೌಂಡೇಶನ್ ಸಹಯೋಗದಲ್ಲಿ ಈ ಅಪೂರ್ವ ಘಟನೆಯನ್ನು ಸ್ಮರಿಸಿಕೊಳ್ಳಲು ಒಂದು ವಿಶೇಷ ಕಾರ್ಯಕ್ರಮ ರೂಪಿಸಿತ್ತು. ಅಲ್ಲಿನ ಅನುಭವ ಬರಹ ಇದು.


ಎನ್.ಆರ್. ವಿಶುಕುಮಾರ್

ಜೂನ್ 7. 1893. ದಕ್ಷಿಣ ಆಫ್ರಿಕಾ. ಇಂಡಿಯಾದ ವಕೀಲ ಮೋಹನದಾಸ ಕರಮಚಂದ ಗಾಂಧಿ ಡರ್ಬನ್ ನಗರದಿಂದ ದಕ್ಷಿಣ ಆಫ್ರಿಕಾದ ರಾಜಧಾನಿ ಪ್ರಿಟೋರಿಯಾಕ್ಕೆ ಪ್ರಯಾಣಿಸುತ್ತಿದ್ದ ರೈಲು ರಾತ್ರಿ 9ಕ್ಕೆ ನಟಾಲ್ ಪ್ರಾಂತ್ಯದ ಮ್ಯಾರಿಟ್ಸ್‌ಬರ್ಗ್ ನಿಲ್ದಾಣ ತಲುಪಿತು. ಪ್ರಥಮ ದರ್ಜೆ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಗಾಂಧಿಯನ್ನು ಅಲ್ಲಿನ ರೈಲ್ವೆ ಅಧಿಕಾರಿ, ಅವರು ಕಪ್ಪು ಬಣ್ಣದವರು ಎನ್ನುವ ಕಾರಣಕ್ಕಾಗಿ ರೈಲಿನಿಂದ ಆಚೆಗೆ ದೂಡಿ ಅವಮಾನಗೊಳಿಸಿದ್ದರು.

ಆ ನಟ್ಟ ನಡುರಾತ್ರಿ ಮೈ ಕೊರೆಯುವ ಚಳಿಯಲ್ಲಿ ಒಬ್ಬಂಟಿಯಾಗಿ ರೈಲು ನಿಲ್ದಾಣದಲ್ಲಿ ನಡುಗುತ್ತಾ ಕುಳಿತಿದ್ದ ಗಾಂಧಿ ತಮ್ಮ ಮನಸ್ಸಿನಲ್ಲಿ ಆದ ತುಮುಲಗಳನ್ನು ತಮ್ಮ ಆತ್ಮ ಕಥೆ 'My experiments with truth'ನಲ್ಲಿ ಮನ ಕಲಕುವಂತೆ ನಿರೂಪಿಸಿದ್ದಾರೆ.

ಈ ಘಟನೆ ನಡೆದ 130 ವರ್ಷಗಳ ನಂತರ, 2023ರ ಜೂನ್ 7 ರಂದು ಬೆಳಿಗ್ಗೆ ನಾವು ದಕ್ಷಿಣ ಆಫ್ರಿಕಾದ ಮ್ಯಾರಿಟ್ ಬರ್ಗ್ ರೈಲ್ವೆ ನಿಲ್ದಾಣದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿನ ಭಾರತ ರಾಯಭಾರ ಕಚೇರಿ, ಪೀಟರ್ ಮ್ಯಾರಿಟ್ಸ್‌ಬರ್ಗ್ ಗಾಂಧಿ ಫೌಂಡೇಶನ್ ಸಹಯೋಗದಲ್ಲಿ ಈ ಅಪೂರ್ವ ಘಟನೆಯನ್ನು ಸ್ಮರಿಸಿಕೊಳ್ಳಲು ಒಂದು ವಿಶೇಷ ಕಾರ್ಯಕ್ರಮ ರೂಪಿಸಿತ್ತು . ಇದರ ಅಂಗವಾಗಿ ಡರ್ಬನ್ ನಗರದಿಂದ ಒಂದು ವಿಶೇಷ ರೈಲು ಹೊರಟು ಬೆಳಿಗ್ಗೆ ಹತ್ತು ಗಂಟೆಗೆ ಮ್ಯಾರಿಟ್ ಬರ್ಗ್ ನಿಲ್ದಾಣಕ್ಕೆ ಸಿಳ್ಳೆ ಹಾಕುತ್ತಾ ಆಗಮಿಸಿತು. ಭಾರತ ಮತ್ತು ಅಮೆರಿಕದಿಂದ ಈ ವಿಶೇಷ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದ ಭಾರತೀಯರು ಮತ್ತು ಭಾರತ ನೌಕಾದಳದ ಸೇನಾ ಅಧಿಕಾರಿಗಳು ಹಾಗೂ ದಕ್ಷಿಣ ಆಫ್ರಿಕಾದ ಕಪ್ಪುಜನರ ಹೋರಾಟಗಾರರೆಲ್ಲರೂ ಕೈ ಚಪ್ಪಾಳೆ ತಟ್ಟಿ ಈ ರೈಲನ್ನು ಸ್ವಾಗತಿಸಿದರು. ರಿಚರ್ಡ್ ಅಟೆನ್‌ಬರೋ ನಿರ್ದೇಶನದ 'ಗಾಂಧಿ' ಚಿತ್ರದಲ್ಲಿ ಗಾಂಧಿಯನ್ನು ರೈಲಿನಿಂದ ಆಚೆಗೆ ತಳ್ಳುವ ದೃಶ್ಯದ ತುಣುಕು ತೆರೆಯ ಮೇಲೆ ಮೂಡಿಬಂತು. ನಂತರ ಭಾರತೀಯ ನೌಕಾದಳದ ಬ್ಯಾಂಡ್‌ನವರು ದಕ್ಷಿಣ ಆಫ್ರಿಕಾ ಮತ್ತು ಭಾರತದ ರಾಷ್ಟ್ರ ಗೀತೆಗಳನ್ನು ನುಡಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಭಾರತ ನೌಕಾದಳದ ಯುದ್ಧ ನೌಕೆ 'ಐಎನ್‌ಎಸ್ ತ್ರಿಶೂಲ್' ಈ ಸ್ಮರಣ ಕಾರ್ಯಕ್ರಮಕ್ಕಾಗಿಯೇ ಮುಂಬೈನಿಂದ ವಿಶೇಷವಾಗಿ ಡರ್ಬನ್ ಬಂದರಿಗೆ ಬಂದಿಳಿದಿತ್ತು. ಭಾರತ ಮತ್ತು ದಕ್ಷಿಣ ಆಫ್ರಿಕಾದ ರಾಜತಾಂತ್ರಿಕ ಸಂಬಂಧಗಳು ಶುರುವಾಗಿ 30 ವರ್ಷ ತುಂಬುತ್ತಿರುವ ಸ್ಮರಣೆಗಾಗಿ ವರ್ಷಪೂರ್ತಿ ಇಂಥ ಹಲವಾರು ಕಾರ್ಯಕ್ರಮಗಳನ್ನು ದಕ್ಷಿಣ ಆಫ್ರಿಕಾದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಭಾರತ ನೌಕಾದಳದ ಬ್ಯಾಂಡ್‌ನವರು ಗಾಂಧೀಜಿಯವರ ನೆಚ್ಚಿನ ಭಜನೆ 'ವೈಷ್ಣವ ಜನತೋ ತೇನೆ ಕಹಿಯೇ' ಗೀತೆಯನ್ನು ನುಡಿಸಿ, ನೆರೆದಿದ್ದ ಭಾರತೀಯ ಜನರ ಭಾವ ತುಂಬಿಸಿದರು.



ಈ ಕಾರ್ಯಕ್ರಮದಲ್ಲಿ ಚಾಲನಾ ಭಾಷಣ ಮಾಡಿದ ಕಪ್ಪು ಜನರ ಹೋರಾಟಗಳ ಇತಿಹಾಸ ತಜ್ಞ ಪ್ರೊ. ರೆವೆರೆಂಡ್ ಅಲನ್ ಬೊಸಾಕ್ '1893 ರ ಜೂನ್ 7ರಂದು ಗಾಂಧೀಜಿಯವರನ್ನು ಮ್ಯಾರಿಟ್ ಬರ್ಗ್ ನಿಲ್ದಾಣದಲ್ಲಿ ರೈಲಿನಿಂದ ಹೊರದೂಡಿದ ಘಟನೆ ಈಗ ಚಾರಿತ್ರಿಕ ದಿನವಾಗಿದೆ. ಗಾಂಧಿ ರೈಲಿನಿಂದ ಹೊರ ದಬ್ಬಿಸಿಕೊಂಡ ಆ ಕ್ಷಣ ಈಗ ಐತಿಹಾಸಿಕ ಕ್ಷಣವಾಗಿದೆ. ಬಿಳಿಯರ ವರ್ಣ ದ್ವೇಷದ ಕಾರಣದಿಂದಾಗಿ ಅವಮಾನಿತರಾದ ಗಾಂಧಿ ಅದರ ವಿರುದ್ಧ ಹೋರಾಟ ಮಾಡಬೇಕೆನ್ನುವ ನಿರ್ಣಾಯಕ ನಿರ್ಧಾರವನ್ನು ಅಂದು ತೆಗೆದುಕೊಂಡು ಈಗ ವಿಶ್ವಮಾನ್ಯರಾಗಿದ್ದಾರೆ. ಜಗತ್ತಿನಾದ್ಯಂತ ನಡೆದಿರುವ ಕಪ್ಪು ಜನರ ಹೋರಾಟಗಳಿಗೆ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟವೇ ಸ್ಫೂರ್ತಿಯ ಸೆಲೆ. ಅಮೆರಿಕದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರುಗಳು ಗಾಂಧೀಜಿಯವರ ಅಹಿಂಸಾ ಮಾರ್ಗವನ್ನೇ ಹಿಡಿದು ಗೆಲುವು ಸಾಧಿಸಿದ್ದಾರೆ' ಎಂದು ಬಣ್ಣಿಸಿದರು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ 21 ವರ್ಷಗಳ ಸುದೀರ್ಘ ಹೋರಾಟವನ್ನು 130 ವರ್ಷಗಳ ನಂತರವೂ ದಕ್ಷಿಣ ಆಫ್ರಿಕಾದ ಪ್ರಜ್ಞಾವಂತ ಜನರು ಈಗಲೂ ಪ್ರೀತಿ ವಿಶ್ವಾಸದಿಂದ ನೆನೆಸಿಕೊಳ್ಳುತ್ತಾರೆ. ಇಲ್ಲಿನ ಪ್ರಾಥಮಿಕ ಪಠ್ಯದಲ್ಲಿ ಈಗಲೂ ಗಾಂಧೀಜಿಯವರ ಕುರಿತ ಪಠ್ಯ ಇದೆ. ಹಾಗೆ ನೋಡಿದರೆ ಗಾಂಧೀಜಿ ಭಾರತದ ನೆಲದಲ್ಲಿ ನಡೆಸಿದ ಹೋರಾಟಕ್ಕಿಂತಲೂ ದಕ್ಷಿಣ ಆಫ್ರಿಕಾದ ನೆಲದಲ್ಲಿ ನಡೆಸಿರುವ ಹೋರಾಟವೇ ಬಹಳ ಮಹತ್ವದ್ದು. ಇಲ್ಲಿ ಭಾರತದಲ್ಲಿ ಗಾಂಧೀಜಿ ಜೊತೆ ಹೋರಾಡಲು ಎರಡನೇ ಹಂತದ ನೂರಾರು ನಾಯಕರಿದ್ದರು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಏಕಾಂಗಿ ಹೋರಾಟಗಾರ. ಬಿಳಿಯರು ನಡೆದಾಡುವ ರಸ್ತೆಯಲ್ಲಿ ಕಪ್ಪು ಬಣ್ಣದವರು ಕಾಲಿಡುವಂತಿಲ್ಲ. ಅವರು ವಾಸ ಮಾಡುವ ಜಾಗದಲ್ಲಿ ಇಣುಕಿ ನೋಡುವಂತಿಲ್ಲ ಎನ್ನುವ ಕೆಟ್ಟ ಪರಿಸ್ಥಿತಿ ಆಗ ದಕ್ಷಿಣ ಆಫ್ರಿಕಾದಲ್ಲಿತ್ತು. ಇಂಥ ಸನ್ನಿವೇಶದಲ್ಲಿ ಗಾಂಧಿ ನಡೆಸಿದ ದಿಟ್ಟ ಹೋರಾಟವನ್ನು ಅಂದಿನ ಕಾಲಮಾನ ಮತ್ತು ಅಂದಿನ ಬರ್ಬರ ವರ್ಣಭೇದ ನೀತಿಯ ದೃಷ್ಟಿಯಿಂದ ನೋಡಿದರೆ ಗಾಂಧೀಜಿಯವರ ಬಗ್ಗೆ ಅಭಿಮಾನ ಉಕ್ಕಿ ಹರಿಯುತ್ತದೆ. ಗಾಂಧಿಯವರ ಅಂದಿನ ಹೋರಾಟದ ಬಗ್ಗೆ ಇಂದಿನ ಆಫ್ರಿಕಾದ ಕಪ್ಪು ಜನ ನಾಯಕರು ಬಹಳ ಅಭಿಮಾನದಿಂದ ಮಾತನಾಡುತ್ತಾರೆ. ಅವರ ಮಾತುಗಳನ್ನು ಆಲಿಸಿದ ನಂತರ ಮತ್ತು ದಕ್ಷಿಣ ಆಫ್ರಿಕಾದ ಕಪ್ಪು ಜನರು ತಮ್ಮ ನೆಲದಲ್ಲಿ ಸ್ವಾತಂತ್ರ್ಯದ ಸವಿ ಅನುಭವಿಸುತ್ತಿರುವ ನೋಟವನ್ನು ಕಣ್ಣಾರೆ ನೋಡಿದ ನಂತರ ಗಾಂಧೀಜಿ ಬಗೆಗಿನ ನಮ್ಮ ನೋಟ ಇನ್ನೂ ಸುಂದರವಾಗಿದೆ.

ರವೀಂದ್ರನಾಥ್ ಟ್ಯಾಗೋರ್ ಅವರು ಗಾಂಧೀಜಿಯನ್ನು ಮಹಾತ್ಮ ಎಂದು ಸಂಬೋಧಿಸಿ ಗೌರವಿಸಿದರು. ಆದರೆ ಈಗ ದಕ್ಷಿಣ ಆಫ್ರಿಕಾ ಪ್ರವಾಸದ ನಂತರ ಗಾಂಧೀಜಿ ನಮ್ಮ ಕಣ್ಣಿಗೆ 'ದೇವದೂತ'ರಂತೆ ಕಾಣಿಸುತ್ತಿದ್ದಾರೆ. ಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್ ಹೇಳಿರುವ 'ರಕ್ತ ಮಾಂಸಗಳಿಂದ ಕೂಡಿದ ಇಂಥ ಮನುಷ್ಯ ಈ ಭೂಮಿಯ ಮೇಲೆ ನಡೆದಾಡಿದರು ಎನ್ನುವ ವಿಷಯವನ್ನು ಮುಂದಿನ ಪೀಳಿಗೆಯ ಜನ ನಂಬುವುದು ಬಹಳ ಕಷ್ಟ' ಎನ್ನುವ ಮಾತುಗಳು ಉತ್ಪ್ರೇಕ್ಷೆಯಲ್ಲ ಎಂದೆನ್ನಿಸುತ್ತಿದೆ.

ಡರ್ಬನ್‌ನಲ್ಲಿನ ಗಾಂಧಿ ಸ್ಕ್ವೇರ್ ಬಳಿ ಇರುವ ಮಹಾತ್ಮ ಗಾಂಧಿ ಪ್ರತಿಮೆ

ಸಾವಿನ ಮೆರವಣಿಗೆಯಲ್ಲಿ ಬದುಕಿನ ಅನಾವರಣ

ಚಿದಾನಂದ ಸಾಲಿ


ವಿಮರ್ಶೆ

ಬಹುಚರ್ಚಿತ ಮರಾಠಿ ದಲಿತ ಆತ್ಮಕಥನಗಳಿಗೆ ಮತ್ತೊಂದು ಸೇರ್ಪಡೆಯಾಗಿ ಬಂದಿರುವ ಅಶೋಕ ಪವಾರರ 'ಬಿಡಾರ'ವನ್ನು ಹಿರಿಯ ಅನುವಾದಕ ಚಂದ್ರಕಾಂತ ಪೋಕಳೆ ಅವರು ಸರಳ-ಸುಂದರ ಭಾಷೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ.

ಅಲೆಮಾರಿ ಬೇಲ್ದಾರ ಸಮುದಾಯದ ಅಸ್ರೋಬಾ ಹತ್ತನೇ ತರಗತಿ ಪಾಸಾಗಿ, ಅಶೋಕ ಪವಾರನಾಗಿ ಬದಲಾವಣೆಯಾದುದನ್ನು ಒಂದೆಳೆ ಕಥನವಾಗಿ ಆಳದಲ್ಲಿ ಹೊಂದಿರುವ ಈ ಕೃತಿಯು ತನ್ನ ಹಲವಾರು ಟಿಸಿಲುಗಳ ಮೂಲಕ ದರ್ಶಿಸಲೆಳಸುತ್ತಿರುವ ಅನುಭವ ಲೋಕ ಮಾತ್ರ ಭಯಾವಹವಾದದ್ದು. ನಾಗರಿಕ ಸಮಾಜದ ನರನಾಡಿಗಳಲ್ಲಿ ಹುದುಗಿರುವ ಅಮಾನವೀಯ ಕ್ರೌರ್ಯದ, ಹಿಂಸ್ರಾ ವಿನೋದದ-ಪಶುಸದೃಶ ಸ್ವಭಾವವಿಕೃತಿಗಳನ್ನು ನೇರವಾಗಿ ಅದರ ಸಂತ್ರಸ್ತರ ಕಣ್ಣಿಂದಲೇ ನಮಗೆ ಕಾಣಿಸುತ್ತಿರುವ ರೀತಿ ದಿಙ್ಮೂಢರನ್ನಾಗಿಸುವಂತಿದೆ.

ಈ ಕೃತಿಯ ಉದ್ದಕ್ಕೂ ನಮಗೆ ಎದುರಾಗುವುದು ಸಾವುಗಳ ಸರಮಾಲೆಯೇ. ಲಾಕಪ್ಪಿನ ಸಾವು, ಹಾವು ಕಚ್ಚಿ ಸಾವು, ಹುಲಿ ಹಿಡಿದು ಸಾವು, ಸಿಡಿಲು ಬಡಿದು ಸಾವು, ಮಳೆನೀರಲ್ಲಿ ಕೊಚ್ಚಿಹೋಗಿ ಸಾವು, ಕದ್ದು ಬಸಿರಾದದ್ದಕ್ಕೆ ಮಾಡಿಕೊಂಡ ಆತ್ಮಹತ್ಯೆಯ ಸಾವು, ಮೇಲ್ಜಾತಿಯವಳನ್ನು ಮದುವೆಯಾದ ತಪ್ಪಿಗೆ ತಮ್ಮವರಿಂದಲೇ ಹುಚ್ಚನಾಗಿ ನೇಣಿಗೆ ಬಲಿಯಾಗಿ ಸಾವು, ಆಯ ತಪ್ಪಿ ಬಿದ್ದು ದೊಂಬರಾಟದ ಹುಡುಗಿಯ ಸಾವು, ಸಕಾಲಿಕ ವೈದ್ಯೋಪಚಾರ ಸಿಗದೆ ಜ್ವರ ಬಂದು ಸಾವು, ಆಕಸ್ಮಿಕವಾಗಿ ಮೈಮೇಲೆ ಕುದಿ ಚಹಾ ಬಿದ್ದು ಸಾವು... ಸಾವುಗಳ ಸಂಖ್ಯೆಯೇ ಇಷ್ಟಿರುವಾಗ ನೋವು-ಅಪಮಾನಗಳಿಗಂತೂ ಲೆಕ್ಕವೇ ಇಲ್ಲ. ಅಷ್ಟಾಗಿಯೂ ಈ ಕೃತಿ ಮಾತಾಡುವುದು ಬದುಕಿನ ಕುರಿತಾಗಿ ಎಂಬ ಕಾರಣಕ್ಕೆ ಇದು ಮುಖ್ಯವಾಗಿದೆ. ಸಾವಿರ ಸೋಲು-ಶರಣಾಗತಿಗಳ ಹೊರತಾಗಿಯೂ ಈ ಬದುಕು ಇರುವುದು ಬದುಕಿ ತೋರಿಸುವುದಕ್ಕಾಗಿಯೇ ಎಂಬ ಛಲವನ್ನು ನಮ್ಮೊಳಗೆ ಬಿತ್ತುವುದರಲ್ಲಿ ಇದರ ಹೆಗ್ಗಳಿಕೆಯಿದೆ.

ಎಲ್ಲಿಯೂ ಘನಗಂಭೀರ ಉಪದೇಶವಾಗಲಿ, ತನ್ನ ಬೌದ್ಧಿಕತೆಯ ಹೆಚ್ಚುಗಾರಿಕೆಯನ್ನು ಓದುಗರ ಮೇಲೆ ಹೇರಲಿಚ್ಛಿಸುವ ಹಂಬಲವಾಗಲಿ ಇರದಂತೆ; ಸರಾಗವಾಗಿ ಓದುಗನನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತ ಪ್ರವಹಿಸುವ ಇದರ ನೇರ-ನಿರಾಡಂಬರ ಭಾಷೆಯು ಕೃತಿಯ ಸತ್ವವನ್ನು ಹೆಚ್ಚಿಸಿದೆ. ಪ್ರಾಣಿ ಮತ್ತು ಮನುಷ್ಯ ಸ್ವಭಾವಗಳು ಅಭಿನ್ನವಾಗಿ ಬೆರೆತುಕೊಂಡಂತಿರುವ ಇಲ್ಲಿಯ ಜೀವನಕ್ರಮವಂತೂ ತಕ್ಷಣಕ್ಕೆ ನಮ್ಮನ್ನು ನಿಬ್ಬೆರಗುಗೊಳಿಸುತ್ತದೆ. ಜಾತಿ ಕಾರಣದಿಂದಾಗಿಯೇ ಕಳ್ಳರೆಂಬ ಶಾಶ್ವತ ಆರೋಪ ಹೊಂದಿರುವ ಬೇಲ್ದಾರ ಎಂಬ ಅಲೆಮಾರಿ, ಅಸ್ಪೃಶ್ಯ ದಲಿತ ಸಮುದಾಯ ಊರಿಂದ ಊರಿಗೆ ತಿರುಗಿ, ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತ; ಕೆಲಸ ಸಿಗದಾಗ ಭಿಕ್ಷೆಯಿಂದ ಹೊಟ್ಟೆ ಹೊರೆಯುತ್ತ; ಅದೂ ಹುಟ್ಟದಿದ್ದಾಗ ಕಳ್ಳತನದಿಂದ ಉದರ ಪೋಷಣೆ ಮಾಡುತ್ತ; ಅದಕ್ಕೂ ಅವಕಾಶವಿಲ್ಲದಾಗ ಸಿಕ್ಕ ಸಿಕ್ಕ ಸೊಪ್ಪು-ಸದೆಗಳನ್ನು ಕುದಿಸಿಕೊಂಡು ಮುದ್ದೆ ಮಾಡಿ ನುಂಗುತ್ತ ಬದುಕುವ ಪರಿ ಎಂಥವರನ್ನೂ ಕರಗಿಸಿಬಿಡುತ್ತದೆ. ಸಂಪೂರ್ಣ ಅಶಿಕ್ಷಿತವಾಗಿರುವ ಈ ಸಮುದಾಯದ ವಿಶಿಷ್ಟ ಆಚರಣೆಗಳು, ನಂಬಿಕೆಗಳು, ಮೂಢನಂಬಿಕೆಗಳು, ಗಾಂವಟಿ ಔಷಧ ಪದ್ಧತಿಗಳು, ದೇವರುಗಳು,



ಪು: 256
₹250

ಬಿಡಾರ
ಲೇ: ಅಶೋಕ ಪವಾರ, ಅನು: ಚಂದ್ರಕಾಂತ ಪೋಕಳೆ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ: 90191 90952

ಅವರ ಐತಿಹ್ಯಗಳು, ಸಮಾಜ ಅವರ ಮೇಲೆ ಹೇರಿರುವ ಆರೋಪಗಳು, ಸರ್ಕಾರದ ಅರ್ಥಹೀನವಾದ ಕ್ರೂರ ಕಟ್ಟಳೆಗಳು, ಜಾತಿ ಪಂಚಾಯಿತಿಯ ಅಮಾನವೀಯ ಫರಮಾನುಗಳು, ಬಡತನ, ಪುರುಷಾಹಂಕಾರ... ಹೀಗೆ ಈ ಸಮುದಾಯದ ಸ್ಥಿತಿ ವಿಷಸರ್ಪದ ಹೆಡೆಯ ನೆರಳಲ್ಲಿ ಮಲಗಿರುವ ಅಮಾಯಕ ಮಗುವಿನಂತಿದೆ. ತನ್ನವರ ಮೇಲಿನ ಅತ್ಯಾಚಾರ, ತನ್ನ ಲೈಂಗಿಕ ಅಶಕ್ತತೆ, ಮಗನನ್ನು ಅನಾಥಾಲಯಕ್ಕೆ ಬಿಡಬೇಕಾದ ಅಸಹಾಯಕತೆ, ತಪ್ಪುಹಾದಿ ಹಿಡಿದ ಹೆಂಡತಿಯಿಂದಲೇ ಜನರೆದುರು ಚಪ್ಪಲಿ ಏಟು ತಿನ್ನಬೇಕಾದ ಸಂದರ್ಭ... ಇಂಥ ಪ್ರಸಂಗಗಳನ್ನು ನಿರೂಪಿಸುವಾಗಲೂ ಒಂದಿನಿತೂ ವಿಚಲಿತವಾಗದ ನಿರುದ್ವಿಗ್ನವಾದ ಈ ಸತ್ಯನಿಷ್ಠವಾದ ಭಾಷೆಯು ಕನ್ನಡಕ್ಕೆ ಹೊಸದೇ ಆಗಿದೆ.

ಇಷ್ಟೆಲ್ಲ ಓದಿ, ತಿಳಿದು, ಹೋರಾಡಿದ ಮೇಲೂ ಪುನಃ ಮತ್ತದೇ ಜೀವನಕ್ರಮಕ್ಕೆ ಮರಳುವ ಅಂತ್ಯ ಮಾತ್ರ ಒಂದು ಕ್ಷಣ ಹೆನ್ರಿ ಛಾರೇರೆಯ 'ಪ್ಯಾಪಿಲಾನ್' (ಅನು: ಪೂರ್ಣಚಂದ್ರ ತೇಜಸ್ವಿ) ಕೃತಿಯನ್ನು ನೆನಪಿಸಿ ನಿರಾಶೆಯ ನಿಟ್ಟುಸಿರು ಬಿಡುವಂತೆ ಮಾಡುತ್ತದೆ. ಆದಾಗ್ಯೂ ಅತ್ಯಂತ ನಗಣ್ಯ ಕಾರಣಗಳಿಗಾಗಿ ಆತ್ಮಹತ್ಯೆಗೆಳಸುವ ಯುವ ಸಮುದಾಯ, ಎಲ್ಲ ಇದ್ದೂ ತಮ್ಮ ಜೀವನದ ಫಲವಂತಿಕೆಯ ಸಮಯವನ್ನು ಅರ್ಥಹೀನ ಐಷಾರಾಮದಲ್ಲಿ ಕಳೆದು ಹಾಳು ಮಾಡುತ್ತಿರುವ ಜನರು- ಈ ಕೃತಿಯನ್ನೊಮ್ಮೆ ಓದಬೇಕು.

ಆಕಾಶರಾಯನ ಬಾರುಕೋಲು...

8ನೇ ಪುಟದಿಂದ...

ಏನೇ ಆದರೂ ಅದೆಷ್ಟೇ ತಾಂತ್ರಿಕ ಸೌಲಭ್ಯಗಳಿದ್ದರೂ 'ಆಕಾಶರಾಯ ನಮ್ಮೆಲ್ಲರನ್ನೂ ಆಟ ಆಡಿಸ್ತಾನೆ' ಎನ್ನುತ್ತಾರೆ, ಕನ್ನಡದಲ್ಲಿ 'ಸಿಡಿಲು' ಆ್ಯಪ್ ಸೃಷ್ಟಿಗೆ ಕಾರಣರಾದ, ಕರ್ನಾಟಕದ ನೈಸರ್ಗಿಕ ವಿಪತ್ತು ಉಸ್ತುವಾರಿ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ. ಜಿ.ಎಸ್. ಶ್ರೀನಿವಾಸ ರೆಡ್ಡಿ.

ಅಷ್ಟದಿಕ್ಪಾಲಕರೇ ದಿಕ್ಕಾಪಾಲು

ಆಟ ಆಡಿಸುವುದೆಂದರೇನು, ಅಷ್ಟದಿಕ್ಪಾಲಕರೂ ದಿಕ್ಕಾಪಾಲಾಗಿ ಹೋಗುವಷ್ಟರ ಮಟ್ಟಿಗೆ ನಾವೇ ಆಕಾಶರಾಯನಿಗೆ ಬಿಸಿ ಮುಟ್ಟಿಸುತ್ತಿದ್ದೇವೆ. ಫಾಸಿಲ್ ಇಂಧನಗಳನ್ನು ಊರೂರಲ್ಲೂ ಉರಿಸಿ, ಸೂರ್ಯನ ಶಾಖ ಮರಳಿ ಹೋಗದಂತೆ ಹಿಡಿದಿಟ್ಟುಕೊಂಡು ನಾವು ಭೂಮಿಯನ್ನು ಬಿಸಿ ಮಾಡುತ್ತಿದ್ದೇವೆ. ಅರಣ್ಯಗಳಿಗೆ ತಂತಾನೆ ಬೆಂಕಿ ಬೀಳುತ್ತಿದೆ. ಹೊಸ ಹೊಸ ಮರುಭೂಮಿಗಳು ಸೃಷ್ಟಿಯಾಗುತ್ತಿವೆ. ಧ್ರುವಗಳಲ್ಲಿ ಜಿಲ್ಲೆಗಾತ್ರದ ಹಿಮಗಡ್ಡೆಗಳು ಸಮುದ್ರದ ಪಾಲಾಗುತ್ತಿವೆ. ಆದರೂ ಸಾಗರಗಳು ಬಿಸಿಯಾಗುತ್ತಿವೆ. ಅಲ್ಲಿಂದ ಜಾಸ್ತಿ ಮೋಡಗಳು ವಾಯುಮಂಡಲಕ್ಕೆ ಸೇರುತ್ತಿರುವುದರಿಂದ ಆಕಾಶದ ಲೆಕ್ಕಾಚಾರಗಳೇ ಏರುಪೇರಾಗುತ್ತಿವೆ. ಚಂಡಮಾರುತಗಳ ಸಂಖ್ಯೆ ಮತ್ತು ತೀವ್ರತೆ ಹೆಚ್ಚುತ್ತಿದೆ. ಅನಿರೀಕ್ಷಿತ ಮೇಘಸ್ಫೋಟ, ಬಾಂಬ್ ಸೈಕ್ಲೋನ್, ಹೀಟ್ ಡೋಮ್ ಮುಂತಾದ ನಾನಾ ವೈಚಿತ್ರ್ಯಗಳು ಸಂಭವಿಸುತ್ತಿವೆ. ತಿಂಗಳ ಅವಧಿಯಲ್ಲಿ ಸುರಿಯಬೇಕಿದ್ದ ಮಳೆ ಹಠಾತ್ತಾಗಿ ಮೂರೇ ದಿನಗಳಲ್ಲಿ ಸುರಿಯುತ್ತದೆ. ಮಳೆನಕ್ಷತ್ರಗಳಂತೂ ಎರ್ರಾಬಿರ್ರಿ ಆಗಿವೆ. ಹವಾಮುನ್ಸೂಚನೆಗೆ ಆಧಾರವಾಗಿದ್ದ ಹಳೇ ಅಂಕಿಸಂಖ್ಯೆಗಳೆಲ್ಲ ಪಲ್ಟಿ ಹೊಡೆದು ನಿರುಪಯುಕ್ತ ಆಗುತ್ತಿವೆ. ಬರ ಬಂದೀತೆಂದು ಕಂಡಕಂಡಲ್ಲಿ ಬೋರ್‌ವೆಲ್ ಹಾಕಿ ಭೂಗತ ಮರುಭೂಮಿಗಳನ್ನು ಸೃಷ್ಟಿ ಮಾಡಿಕೊಂಡು- ಈಗ ಬರ ಎಂದರೆ ನಿಜಕ್ಕೂ ಅದು ನಾವೇ ಬರಮಾಡಿಕೊಂಡ ಬರ.

ಆದರೂ ವಿಜ್ಞಾನಿಗಳು ಹಿಮ್ಮೆಟ್ಟಿಲ್ಲ. ಸೂಪರ್ ಕಂಪ್ಯೂಟರ್‌ಗಿಂತ ಬಲವಾದ ಕ್ವಾಂಟಮ್ ಕಂಪ್ಯೂಟರ್ ಬರಲಿದೆ. ಸಹಸ್ರಕೋಟಿ ಡೇಟಾಗಳನ್ನು ನಿಭಾಯಿಸಬಲ್ಲ 'ಯಾಂಬು' (ಎಐ = ಯಾಂತ್ರಿಕ ಬುದ್ಧಿಮತ್ತೆ) ಬಳಕೆಗೆ ಬರುತ್ತಿದೆ. ಆಕಾಶಕ್ಕೆ ಡಬಲ್ ಡಾಪ್ಲರ್ ರಡಾರ್‌ಗಳನ್ನು ಏರಿಸಲಾಗುತ್ತಿದೆ. ಕ್ಯಾಲಿಫೋರ್ನಿಯಾದಲ್ಲಿ ಇದೀಗ ಯಾಂಬು ನೆರವಿನಿಂದ ಪ್ರತಿ ಅರ್ಧರ್ಧ ಗಂಟೆಗೆ ಕರಾರುವಾಕ್ಕಾಗಿ....

ಅದೆಲ್ಲ ಸರೀರಿ, ನಿಮ್ಮ 'ಸಿಡಿಲು' ಆಪ್ ಏನಾಗಿದೆ ಹೇಳಿ! ಕಳೆದ ವರ್ಷ ಗುಡುಗು ಸಿಡಿಲಿಗೆ ಸಿಕ್ಕು ನಮ್ಮ ದೇಶದಲ್ಲಿ 1285 ಜನರು ಸತ್ತಿದ್ದಾರೆ. ಕರ್ನಾಟಕದಲ್ಲಿ ಸಾವಿನ ಸಂಖ್ಯೆ ಕಡಿಮೆ ಆಗಿದೆಯೆ? ಈ ಪ್ರಶ್ನೆಗೆ ಡಾ. ರೆಡ್ಡಿಯವರು ವಾಸ್ತವದ



ಬೇರೆಯದೇ ಚಿತ್ರಣವನ್ನು ಕೊಡುತ್ತಾರೆ. ಕುರಿಗಾಹಿಗಳು, ರೈತರು ಈ ಆ್ಯಪ್ ಕಟ್ಟಿಕೊಂಡು ಓಡಾಡುತ್ತಾರೆಯೆ? ಸಿಡಿಲಿನಿಂದ ಬಚಾವಾಗಲು ಇಂತಿಂಥ ಮುನ್ನೆಚ್ಚರಿಕೆ ಕೈಗೊಳ್ಳಿ ಎಂದು ನೂರಾರು ಬಾರಿ ಹೇಳಿದರೂ ಆ ಮಾಹಿತಿ ಅಲ್ಲಿನ ಬಡಪಾಯಿಗಳಿಗೆ ಹೇಗೆ ತಲುಪಬೇಕು? ಗುಡುಗಿನ ಸದ್ದು ಕೇಳಿದ ತಕ್ಷಣ ಮರದ (ಅಂದರೆ ಮೃತ್ಯುವಿನ) ಬಳಿಗೇ ದೌಡಾಯಿಸುತ್ತಾರೆ. ಪಂಚಾಯತ್ ಮಟ್ಟದಲ್ಲಿ, ಗ್ರಾಮಸಭೆಯಲ್ಲಿ ಅವರಿಗೆ ತಿಳಿವಳಿಕೆ ನೀಡಬೇಕು.

ಯಾರು ನೀಡಬೇಕು?

ಅದೇನೊ ಗೊತ್ತಿಲ್ಲ. ಹವಾ ಮುನ್ಸೂಚನೆ ನೀಡುವ 37 ಡಾಪ್ಲರ್ ರಡಾರ್‌ಗಳನ್ನು ನಮ್ಮ ದೇಶದಲ್ಲಿ ಸ್ಥಾಪಿಸಲಾಗಿದೆ. ಇನ್ನೆರಡು ವರ್ಷಗಳಲ್ಲಿ ಅವುಗಳ ಸಂಖ್ಯೆಯನ್ನು 62ಕ್ಕೆ ಏರಿಸುತ್ತೇವೆಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಈಚೆಗೆ ಹೇಳಿದ್ದಾರೆ. ಏರಲಿ ಸ್ವಾಗತಿಸೋಣ. ಅವೇನೋ ಆಕಾಶದಲ್ಲಿ ಯೋಜನದೂರದ ಮಳೆಹನಿಗಳನ್ನು ಪತ್ತೆ ಮಾಡುತ್ತವೆ. ಸುಂಟರಗಾಳಿ, ಮೇಘಸ್ಫೋಟ, ದೂಳುಮಾರುತ, ಬರದ ಮಾರಿ, ಹಿಮಪಾತದ ಮುನ್ಸೂಚನೆ ನೀಡುತ್ತವೆ. ಆದರೆ ಕೋಲಾರದಲ್ಲಿ ಹೋಬಳಿ ಮಟ್ಟದಲ್ಲಿ ನೆಲದ ತೇವಾಂಶವನ್ನು ಅಳೆಯುವ ಒಂದು ಸಾಧನವೂ ಇಲ್ಲವಲ್ಲ? ಚಳ್ಳಕೆರೆಯಲ್ಲಿ ಮಳೆ ಬರಿಸುವ ಅಥವಾ ಸಕಲೇಶಪುರದ ಮೇಘಸ್ಫೋಟವನ್ನು ನಿಲ್ಲಿಸಲು ಯಾವ ಸಾಧನಕ್ಕೂ ಸಾಧ್ಯವಿಲ್ಲವಲ್ಲ? ಪ್ರಯೋಜನ ಏನು? ಡಾಪ್ಲರ್ ರಡಾರ್‌ಗಳು ಹೆಚ್ಚೆಂದರೆ ಅಪಾಯದ ಸೂಚನೆ ಕೊಟ್ಟು ಜನರನ್ನು ಸುರಕ್ಷಿತ ತಾಣಗಳತ್ತ ಗುಳೆ ಎಬ್ಬಿಸಬಹುದು. ಆ ಕೆಲಸವೇನೊ ಸಮರ್ಥವಾಗಿ ಆಗುತ್ತಿದೆ. ಆದರೆ ನಮಗೀಗ ಬೇಕಿದ್ದುದು ಜನರನ್ನು ನಿಸರ್ಗದತ್ತ ಗುಳೆ ಹೊರಡಿಸುವುದು. ನೀರಿಂಗಿಸಲು, ಹೂಳೆತ್ತಲು, ಗಿಡನೆಡಲು, ಬರನಿರೋಧಕ ಕೆಲಸಗಳತ್ತ ಜನರನ್ನು ಪ್ರೇರೇಪಿಸಲು ಉಪಾಯಗಳು ಬೇಕಿವೆ. ಅವೆಲ್ಲಿವೆ ಈ ನಗರಮುಖೀ ಸಮಾಜದಲ್ಲಿ? ಪರ್ಜನ್ಯ ಹೋಮಕ್ಕೊ, ಮೋಡಬಿತ್ತನೆಗೊ ತಜ್ಞರನ್ನು ಹುಡುಕುವುದನ್ನು ಬಿಟ್ಟರೆ ಬೇರೇನು ಮಾಡುತ್ತೇವೆ ನಾವು?

ನಿರ್ದಿಗಂತ ಎಂಬ ಕಾವು ಗೂಡು!

8ನೇ ಪುಟದಿಂದ...

ಹಣಕಾಸಿನ ತೊಂದರೆ ಇರುವವರಿಗೆ ನಿರ್ದಿಗಂತವೇ ನಾಟಕವನ್ನು ಒದಗಿಸುತ್ತದೆ. ಇಷ್ಟವಾದರೆ ಅವರು ಇಲ್ಲಿಗೇ ಬಂದು ರಿಹರ್ಸಲ್ ಮಾಡಬಹುದು. ಅಂಥ ಐದಾರು ನಾಟಕಗಳ ನಂತರ ನಿರ್ದಿಗಂತ ನಾಟಕೋತ್ಸವವನ್ನೂ ಮಾಡಬಹುದು. ನಂತರ ಅವರು ನಾಟಕವನ್ನು ರಾಜ್ಯದ ಬೇರೆ ಕಡೆಗೆ ತೆಗೆದುಕೊಂಡು ಹೋಗಬಹುದು. 'ರಂಗಭೂಮಿಯಲ್ಲಿರುವವರಿಗೆ ಹೀಗೆ ಘನತೆಯನ್ನು, ಬದುಕಿಗೆ ಒಂದು ಸಾಧ್ಯತೆಯನ್ನು ತಂದುಕೊಡುವ ಪ್ರಯತ್ನ ಇದು. ಅಲ್ಲಿವರೆಗೂ ರಂಗಭೂಮಿಯಲ್ಲಿ ನಟಿಸಬಾರದು' ಎಂಬ ಪ್ರತಿಜ್ಞೆ ಮಾಡಿದ್ದಾರೆ ರೈ.

ನಿರ್ದಿಗಂತದಲ್ಲಿ ಈಗ ನಾಟಕ ಮೊದಲಾಗಿದೆ. ಮಹಿಳೆಯರೇ ಸೇರಿ ನಾಟಕ ಮಾಡಲು ಸಿದ್ಧತೆ ನಡೆದಿದೆ. ಹೆಸರಾಂತ ಕವಿಯೊಬ್ಬರಿಗೆ ನಾಟಕ ಬರೆದುಕೊಡುವಂತೆ ಕೇಳಲಾಗಿದೆ. ನಂತರ ಯಾವುದು ಬೇಕಾದರೂ ಆಗಬಹುದು. ಕವಿಗಳು ಬಂದು ಕವಿತೆ ಓದಬಹುದು. ಚಿತ್ರ ಕಲಾವಿದರು, ಹಲವು ಮಾಧ್ಯಮಗಳ ತಂತ್ರಜ್ಞರೂ ಬರಬಹುದು. ಆಡಿಯೋ ಬುಕ್‌ಗಳ ನಿರ್ಮಾಣದ ಆಶಯವೂ ಇದೆ. ಇದು ಹೀಗಾಗಿ ಬಹುಮಾಧ್ಯಮ, ಬಹುನೆಲೆಯ ಅಭಿವ್ಯಕ್ತಿ ಸ್ಥಳ. ಯಾವ ಗಡಿಯೂ ಇಲ್ಲ. ಎಲ್ಲದಕ್ಕೂ ಆಗಬಹುದಾದ ಒಂದು ಜಾಗ. ಇಲ್ಲಿಗೆ ಬಂದವರು ದಿಗಂತದ ಕಡೆಗೆ ನೋಡಲೇಬೇಕೆಂದೇನಿಲ್ಲ. ಹೊಸ ದಾರಿ, ಹೊಸ ಪಯಣದ ಅಚ್ಚರಿಗಳಿಗೆ ಖುಷಿ ಪಟ್ಟರೆ ಸಾಕು. ಅದೇ ನಿರ್ದಿಗಂತದೆಡೆಗೆ ಕರೆದೊಯ್ಯುತ್ತದೆ. ಕಾವುಗೂಡಿನಂತೆ ಬೆಚ್ಚಗಿರಿಸುತ್ತದೆ.




ರಂಗಪಠ್ಯದ ಚರ್ಚೆಯಲ್ಲಿ ಶಿಬಿರಾರ್ಥಿಗಳು

ಮೊದಲ ಓದು

ಪಾರಿಸರಿಕ ಸತ್ಯಗಳಿಗೆ ಕನ್ನಡಿ

ಪರಿಸರದ ಸತ್ಯಗಳು ಅಭಿವೃದ್ಧಿಯ ದೊಡ್ಡ ಮನೆಯ ಹಿತ್ತಲಿನಲ್ಲಿ ಅವಿತಂತೆ ಇರುವುದೇ ಹೆಚ್ಚು. ಆ ಹಿತ್ತಲಿನಲ್ಲಿ ಅಡ್ಡಾಡಿ ಸತ್ಯದ ಕಥೆಗಳ ತಡಕುವ ಮನಃಸ್ಥಿತಿ, ವ್ಯವಧಾನ ಈಗ ಬಹುತೇಕರಿಗೆ ಇಲ್ಲ. ವೃತ್ತಿಯಲ್ಲಿ ಕಾಲೇಜು ಪ್ರಾಂಶುಪಾಲರಾದ ಗುರುರಾಜ್ ಎಸ್. ದಾವಣಗೆರೆ ಅವರಿಗೆ ಅಂತಹ ಆಸಕ್ತಿಯೂ ಇದೆ, ವ್ಯವಧಾನವೂ ಇದೆ. ಅದರ ಫಲವೇ 'ಹಸಿರು ಮನ್ವಂತರ' ಕೃತಿ. 143 ಪುಟಗಳ ಈ ಕೃತಿಯಲ್ಲಿ 35 ಬರಹಗಳಿವೆ. ಅವುಗಳೆಲ್ಲವೂ ಈಗಾಗಲೇ ಪತ್ರಿಕೆಯಲ್ಲಿ ಆಯಾ ಸಮಸ್ಯೆ, ಒಳಿತು ಸಂಭವಿಸಿದ ಸಂದರ್ಭದಲ್ಲಿ ಪ್ರಕಟವಾದಂಥವು. ಈ ಲೇಖನಗಳೆಲ್ಲ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸುಸ್ಥಿರ ವ್ಯವಸ್ಥೆಯೊಂದರ ಪುನರ್‌ಸ್ಥಾಪನೆಗೆ ಬಯಸುವ ಉಮೇದೊಂದನ್ನು ದಾಟಿಸುತ್ತವೆ.


ಪಾರಿಸರಿವಾಗಿ ಏನೆಲ್ಲ ಕಳೆದುಕೊಳ್ಳುತ್ತಿದ್ದೇವೆ ಎನ್ನುವುದನ್ನು ಅಂಕಿಅಂಶಗಳ ಸಮೇತ ದಾಖಲಿಸುವ ಲೇಖಕರು, ನಡೆಯುತ್ತಿರುವ ಸ್ತುತ್ಯರ್ಹ ಕೆಲಸಗಳನ್ನೂ ಗುರುತಿಸಿದ್ದಾರೆ. 'ರೈತರ ಹಿಂಡುವ ಮಿಡತೆ ಹಿಂಡು' ಎಂಬ ಬರಹವು ಕೊರೊನಾ ಕಾಲದಲ್ಲಿ ಉತ್ತರ ಭಾರತದ ರೈತರು ಎದುರಿಸಿದ ಪ್ರಮುಖ ಸಮಸ್ಯೆಯೊಂದರ ಆಳ-ಅಗಲ ತೆರೆದಿಟ್ಟರೆ, 'ಝೀರೊ ಕಾರ್ಬನ್‌ನತ್ತ ಭಾರತೀಯ ರೈಲು' ಎನ್ನುವ ಲೇಖನವು ಪ್ರಶಂಸನೀಯ ಕಾರ್ಯವೊಂದನ್ನು ಬೆಳಕಿಗೆ ತರುತ್ತದೆ. 'ಬರೀ ಮಾತು, ಮಾತು! ಕೆಲಸ ಮರೆತೇಹೋಯ್ತು!!' ಎನ್ನುವ ಅವರ ಬರಹ ಹೀಗೆ ಶುರುವಾಗುತ್ತದೆ: 'ಐದು ವರ್ಷಗಳ ಹಿಂದೆ ಕೊರೆಯುವ ಚಳಿಯ ಪ್ಯಾರಿಸ್ ನಗರದಲ್ಲಿ ವಾಯುಗುಣ ಬದಲಾವಣೆ ಮತ್ತು ಭೂಮಿ ಬಿಸಿ ನಿಯಂತ್ರಣಕ್ಕಾಗಿ 167 ದೇಶಗಳು ಒಟ್ಟಿಗೆ ಸೇರಿ ಮಾಡಿಕೊಂಡ ಒಪ್ಪಂದ ಈ ಪರಿ ಅಟಕಾಯಿಸಿಕೊಳ್ಳುತ್ತದೆಂದು ಯಾರಿಗೂ ಅನಿಸಿರಲಿಲ್ಲ... ಒಪ್ಪಂದದ ಪ್ರಕಾರ 2050ರ ವೇಳೆಗೆ ಭೂಮಿಯ ಬಿಸಿಯನ್ನು ನಿಯಂತ್ರಿಸಿ ಅದು 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗದಂತೆ ನೋಡಿಕೊಳ್ಳುತ್ತೇವೆ ಎಂದು ಘೋಷಿಸಿದವರಿಗೆ ಅದು ಅಷ್ಟು ಸುಲಭವಲ್ಲ ಎಂದು ಅರಿವಾಗಿ...ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುತ್ತಿದ್ದಾರೆ.' ಇದು ಒಪ್ಪಂದವೊಂದನ್ನು ಪ್ರಶ್ನಿಸುತ್ತಲೇ, ಎದುರಲ್ಲಿ ಇರುವ ಸವಾಲುಗಳನ್ನು ಚರ್ಚಿಸುವ ಮಾದರಿ. ಗುರುರಾಜ್ ಅವರು ಅಧಿಕೃತ ಅಂಕಿಅಂಶಗಳನ್ನು ದಾಖಲಿಸಲು ತಮ್ಮದೇ ಆದ ಅಗಾಧ ಸಂಪರ್ಕ ಜಾಲವನ್ನು ಸೃಷ್ಟಿಸಿಕೊಂಡಿರುವುದಕ್ಕೂ ಕೃತಿಯಲ್ಲಿ ದಟ್ಟ ಉದಾಹರಣೆಗಳು ಸಿಗುತ್ತವೆ.



ಪು: 143
₹150

ಹಸಿರು ಮನ್ವಂತರ
ಲೇ: ಗುರುರಾಜ್ ಎಸ್. ದಾವಣಗೆರೆ
ಪ್ರ: ವಸಿಷ್ಠ ಬುಕ್ಸ್
ಸಂ: 9901067738

ತೇಜಸ್ವಿ–ಶಾಮಣ್ಣನ ಜೊತೆಗೆ ಹಾಕಿದ ಹೆಜ್ಜೆ



ಪು: 136
₹130

ನಾ ಕಂಡಂತೆ ತೇಜಸ್ವಿ–ಶಾಮಣ್ಣ
ಲೇ: ಕಡಿದಾಳ್ ಪ್ರಕಾಶ್
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಕಡಿದಾಳ್ ಪ್ರಕಾಶ್ ಅವರು ತಮ್ಮ ಚೊಚ್ಚಲ ಕೃತಿ 'ಕಟ್ಟುವ ಹಾದಿಯಲ್ಲಿ' ಕುವೆಂಪು ಪ್ರತಿಷ್ಠಾನದ ಉಗಮ ಮತ್ತು ವಿಕಾಸದ ಬಗ್ಗೆ ವಿಸ್ತೃತವಾದ ವಿವರಣೆಯನ್ನೇ ನೀಡಿದ್ದರು. ರಾಷ್ಟ್ರಕವಿಯ ಅಂತಿಮ ಯಾತ್ರೆಯ ಕ್ಷಣ ಕ್ಷಣದ ವಿವರಣೆ, ಕವಿಶೈಲ ಸ್ಮಾರಕದ ನಿರ್ಮಾಣ, ಕಲ್ಲಿನ ದಿಮ್ಮಿಗಳ ಹಿಂದೆ ರೋಚಕ ಕಥೆಯನ್ನು ಆ ಕೃತಿಯಲ್ಲಿ ಕೆತ್ತಿದ್ದರು. ಇದರ ಸಂಕ್ಷಿಪ್ತ ರೂಪದಂತೆ ಭಾಸವಾಗುವ ಈ ಹೊತ್ತಿಗೆ ಸ್ಮೃತಿ ಕಥನಗಳನ್ನು ಹೊತ್ತು ತಂದಿದೆ. ಶಾಮಣ್ಣನೂ ಇಲ್ಲಿ ಜೊತೆಯಾಗಿದ್ದಾರೆ ಎನ್ನುವುದು ವಿಶೇಷ.

ಪೂರ್ಣಚಂದ್ರ ತೇಜಸ್ವಿ ಹಾಗು ಕಡಿದಾಳ್ ಶಾಮಣ್ಣ ಅವರ ಜೊತೆ ಬಾಲ್ಯದಿಂದ ಒಡನಾಡಿರುವುದನ್ನು ಈ ಕೃತಿಯಲ್ಲಿ ಲೇಖಕರು ದಾಖಲಿಸಿದ್ದಾರೆ. ತೇಜಸ್ವಿ ಅವರ ಸೈಕಲ್ ಸವಾರಿಯಿಂದ ಹಿಡಿದು ಕಡಲೆಕಾಯಿ ಗುದ್ದಿ ತಿಂದ ನೆನಪು, ಕೇಸರಿಬಾತ್ ಕಥೆ, ತೇಜಸ್ವಿ–ಶಾಮಣ್ಣನ ಸ್ನೇಹ ಜೋಡಿ, ಕವಿಮನೆ–ಕವಿಶೈಲ ಸ್ಮಾರಕ ನಿರ್ಮಾಣದ ಘಟನೆ ಇಲ್ಲಿ ಪ್ರಕಾಶ್ ಅವರು ಆಪ್ತವಾಗಿ ಬರೆದಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತೇಜಸ್ವಿ ಅವರ ಮಾತಿನ ಶೈಲಿಯನ್ನು, ಪದಗಳನ್ನೇ ಲೇಖಕರು ಉಲ್ಲೇಖಿಸಿದ್ದಾರೆ. ಇದು ಓದಿಗೆ ವೇಗವನ್ನಷ್ಟೇ ಅಲ್ಲ ಸ್ವಾರಸ್ಯವನ್ನೂ ತುಂಬಿದೆ.

ಕವಿಶೈಲಕ್ಕೆ ಬಂದ ಪ್ರವಾಸಿಗರಲ್ಲೊಬ್ಬ ಸಮಾಧಿ ಹತ್ತಿರದ ಮಣ್ಣನ್ನು ಹಣೆಗೆ ಹಚ್ಚಿಕೊಳ್ಳುತ್ತಿರುವುದನ್ನು ಪ್ರಕಾಶ್ ಅವರು ತೇಜಸ್ವಿ ಅವರಿಗೆ ತೋರಿಸಿದ ಸಂದರ್ಭದಲ್ಲಿ, 'ನಿನ್ನ ತಲೆ! ಮಾರಾಯ ನಿನ್ನನ್ನೆ ಬಿಟ್ಟರೆ ಧರ್ಮಸ್ಥಳದ ರೀತಿ ಮಾಡುತ್ತೀಯ. ಈ ವಿಚಾರದಲ್ಲಿ ಬಹಳ ಎಚ್ಚರದಿಂದ ಇರಬೇಕು. ಬರುವ ಪ್ರವಾಸಿಗರಿಗೆ ಬಹಳ ಸೌಕರ್ಯ ಕೊಡಬೇಡಿ! ನಿಜವಾಗಿಯೂ ಸಾಹಿತ್ಯದಲ್ಲಿ ಮತ್ತು ಕುವೆಂಪು ಬಗೆಗೆ ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ಬರುವವರಿಗೆ ಅನುಕೂಲ ಮಾಡಿಕೊಡಿ' ಎಂದು ಹೇಳಿರುವ ಮಾತು ಇಂದಿಗೂ ಪ್ರಸ್ತುತವಾಗಿದೆ. ಕೃತಿಯ 'ನನ್ನ ಅಣ್ಣಯ್ಯ' ಎಂಬ ದ್ವಿತೀಯಾರ್ಧದಲ್ಲಿ ಶಾಮಣ್ಣನ ಹೆಜ್ಜೆಗಳ ಜೊತೆಗೆ ಲೇಖಕರು ಹೆಜ್ಜೆ ಹಾಕಿದ್ದಾರೆ. ಶಿಕ್ಷಕ ವೃತ್ತಿಯಿಂದ ಕೃಷಿಕನಾದ ಶಾಮಣ್ಣ, ರೈತ ಸಂಘದ ಒಡನಾಟವನ್ನು ಶಾಮಣ್ಣನ ಚೀಲದಂತೆಯೇ ಸರಳವಾಗಿ ಕಟ್ಟಿಕೊಟ್ಟಿದ್ದಾರೆ ಲೇಖಕರು.


ಮುಖಪುಟದಲ್ಲಿ ತೇಜಸ್ವಿ ಹಾಗೂ ಶಾಮಣ್ಣ ಸೈಕಲ್ ಏರಿ ಹೊರಟ ವರ್ಣಚಿತ್ರ, ಪುಟಗಳಲ್ಲಿ ಇರುವ ರೇಖಾಚಿತ್ರಗಳಲ್ಲೇ ಸಾವಿರಾರು ಪದಗಳಿವೆ, ಕಥೆಗಳಿವೆ.

ಅಪ್ಪನ ನೆನಪುಗಳ ಮೆಲುಕು

'ಸೋಲು ಕೊನೆಯಲ್ಲ, ಗೆಲುವೂ ಅಂತಿಮವಲ್ಲ, ಬಾಳೊಂದು ಪಯಣ, ಖುಷಿಯಾಗಿರೋಣ, ಖುಷಿ ಹಂಚೋಣ ಎನ್ನುವ ತತ್ವವನ್ನು ಸಾರದೆ ಬಾಳಿ ತೋರಿಸಿದ ಅಪ್ಪನಿಗೆ...' ಕೃತಿಯ ಅರ್ಪಣೆಯಲ್ಲಿ ಕರ್ತೃ ರಂಗಸ್ವಾಮಿ ಮೂಕನಹಳ್ಳಿ ಬರೆದ ಸಾಲುಗಳಿವು. 'ಅಪ್ಪ' ಎಂಬ ಪದ ಅವರ ಬದುಕಿಗೆಷ್ಟು ಗಟ್ಟಿಯಾದ ಅಡಿಪಾಯ ಹಾಕಿಕೊಟ್ಟಿರಬಹುದೆಂಬುದನ್ನು ಈ ಸಾಲುಗಳು ಹೇಳುತ್ತವೆ. 'ಅಪ್ಪನ ಹಾದಿ' ಇಡೀ ಕೃತಿ ಲೇಖಕರ ತಂದೆಯ ಕುರಿತಾದ ಅನುಭವದ ಮೂಟೆ. ಪುಸ್ತಕ ತೀರ ಖಾಸಗಿ ಎನಿಸಿದರೂ ಎಲ್ಲರ ಬದುಕಿಗೂ ಅನ್ವಯವಾಗಬಲ್ಲ ಸಾಕಷ್ಟು ಅಂಶಗಳಿವೆ.

ಲೇಖಕರು ತಮ್ಮ ತಂದೆಯ ಬದುಕಿನ ಘಟನೆಗಳನ್ನು, ನೆನಪುಗಳನ್ನು ನೆಪವಾಗಿ ಇಟ್ಟುಕೊಂಡು ಬದುಕಿನ ನೆಮ್ಮದಿಯ ಸೂತ್ರವನ್ನು ಹೇಳುತ್ತಾ ಹೋಗುತ್ತಾರೆ. ಪುಸ್ತಕದಲ್ಲಿ 26 ಲೇಖನಗಳಿವೆ. ಎಲ್ಲವೂ ಪ್ರತಿಯೊಬ್ಬರ ಬದುಕಿಗೂ ಪುಟ್ಟ ಪಾಠವಾಗಬಲ್ಲಂತಹ ವಿಷಯಗಳು. 'ನಮಗೇನು ಬೇಕು ಅದೆಲ್ಲವೂ ನಮ್ಮಲ್ಲೇ ಇದೆ' ಎನ್ನುವ ಕೃತಿಯ ಮೊದಲ ಬರಹದಲ್ಲಿ ತಮ್ಮ ಸೋಲಿನ ದಿನಗಳಲ್ಲಿಯೂ ಅಪ್ಪ ಮನೆಯನ್ನು, ಕುಟುಂಬವನ್ನು ಹೇಗೆ ಸಂತೋಷವಾಗಿಟ್ಟಿದ್ದರು ಎಂಬುದನ್ನು ವಿವರಿಸುತ್ತಾರೆ.

'ಬದುಕು ಬದಲಾಗಲು ಅರೆ ಗಳಿಗೆ ಸಾಕು!' ಎಂಬ ಲೇಖನ ಭರವಸೆ ಕಳೆದುಕೊಳ್ಳದೆ ಬದುಕುವ ಬಗೆಯನ್ನು ಹೇಳುತ್ತದೆ. ಬಹುತೇಕ ಎಲ್ಲ ಬದುಕಿನಲ್ಲಿ ಆಗಿರಬಹುದಾದ ಸಿಹಿ–ಕಹಿ ಘಟನೆಗಳೇ ಇಲ್ಲಿವೆ. ಆದರೆ ಸ್ವರೂಪ ಬೇರೆಯಷ್ಟೆ. ಅಂತಹ ಘಟನೆಗಳನ್ನು ಹೇಗೆ ಸ್ವೀಕರಿಸಬೇಕು? ಸವಾಲುಗಳನ್ನು ಯಾವ ರೀತಿ ಮೆಟ್ಟಿ ನಿಲ್ಲಬೇಕು ಎಂದು ಈ ಕೃತಿ ವಿವರಿಸುತ್ತದೆ. ಒಂದು ರೀತಿ ಇದು ಸ್ಫೂರ್ತಿದಾಯಕ ಕೃತಿ. ಅಮ್ಮನ ನೆನಪಿನ ಕೃತಿಗಳು, ಬರಹಗಳು ಬಹಳಷ್ಟು ಸಿಗುತ್ತವೆ. ಆದರೆ ಬದುಕಿನ ಬಹುಪಾಲು ಮನೆಯಿಂದ ಆಚೆಯಿದ್ದು ದುಡಿಯುವ ಅಪ್ಪನ ಒಡನಾಟದ ಅನುಭವ ಕೃತಿಯಾಗಿದ್ದು ಕಡಿಮೆ. ಒಟ್ಟಾರೆಯಾಗಿ ಅಪ್ಪನನ್ನು ಇಷ್ಟಪಡುವವರಿಗೆ ಬದುಕಿನ ಹಳೆಯ ನೆನಪುಗಳನ್ನು ಮತ್ತೊಮ್ಮೆ ಮೆಲುಕು ಹಾಕಿಸಬಲ್ಲ ಬರಹಗಳು ಕೃತಿಯಲ್ಲಿವೆ.




ಪು: 112
₹150

ಅಪ್ಪನ ಹಾದಿ
ಲೇ:ರಂಗಸ್ವಾಮಿ ಮೂಕನಹಳ್ಳಿ
ಪ್ರ:ಸಾವಣ್ಣ ಎಂಟರ್‌ಪ್ರೈಸಸ್
ಸಂ:9036312786

ಭಾರತದ ಮೊದಲ ಮಹಿಳಾ ಕುಸ್ತಿಪಟು


ಹಮೀದಾ ಬಾನು



ಹಮೀದಾ ಬಾನು

ಮಹಿಳಾ ಕುಸ್ತಿಪಟುಗಳು ಗಂಡಾಳಿಕೆಯ ದಮನದ ಕಥನವಾಗಿ ಈಗಲೂ ಧ್ವನಿ ಎತ್ತುತ್ತಿರುವಾಗ 1911ರ ಸುಮಾರಿನಲ್ಲಿಯೇ ಪಂಜಾಬ್‌ನ ಮಿರ್ಜಾಪುರದ ಕುಸ್ತಿಪಟುಗಳ ಮನೆಯಲ್ಲಿ ಕುಸ್ತಿ ನೋಡುತ್ತ, ಅಖಾಡಕ್ಕಿಳಿಯುವ ಕನಸು ಕಾಣುತ್ತ ಬೆಳೆದಿದ್ದವರು ಹಮೀದಾ ಬಾನು. ಅವರ ಬದುಕಿನ ಪುಟಗಳು ಕಣ್ಣರಳುವಂತೆ ಮಾಡುತ್ತವೆ.

ತನ್ನನ್ನು ಸೋಲಿಸಿದವರನ್ನು ಮದುವೆಯಾಗುವೆ ಎಂದು ಹಮೀದಾ ಸವಾಲು ಹಾಕಿದ ಸ್ಪರ್ಧೆಯೊಂದರ ವರದಿ ಆಗಿನ ಸ್ಥಳೀಯ ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟವಾದದ್ದು ಹೀಗೆ...



Lady Wrestler Tosses Cupid Out of Ring for Third Time

BOMBAY, India, May 2 (AP)—Hundreds in Baroda watched today as Hamida Banu, a woman wrestler, beat Baba Pahelwan, a male matman, in her third bout to decide who should be her husband.

The heavyweights clashed with the promise by the woman to marry him if he got the better of her and an understanding by Pahelwan to retire from the wrestling arena if he went down before her.

The bout lasted one minute, 34 seconds, when the woman won a fall and the referee declared Pahelwan out of Hamida's wedding range. Pahelwan immediately announced he had had his last match.

He was the third wrestler to undertake the strange wooing of Hamida who since February has downed two other men wrestlers, Khadag Singh, a Sikh, and another Hindu from Calcutta.



Down he goes— and one more suitor hits the dust...

"Knock me down in the wrestling ring—and I'll marry you." That's the offer Indian woman wrestler Hamida Banu, 32, has made to men. And you can see above why she's still single.

That's Hamida — all 16st. 11lb. of her — on top. The unlucky suitor is Baba Pahelwan, heavyweight champion of the state of Baroda and the third contender for her hand. Hamida threw him within 90 seconds of their "marriage match" at Baroda. The referee promptly ruled that Baba was out of the matrimonial stakes. And Baba said that he was through with wrestling.


Now Hamida is hinting that she may visit Europe. Well, men—at least you know what to expect.

ಡಾ. ಎಚ್. ಎಸ್. ಅನುಪಮಾ

ಎದೆಯುಬ್ಬಿಸಿ, ತೊಡೆ ತಟ್ಟಿ ಎದುರಾಳಿಯನ್ನು ಆಹ್ವಾನಿಸುವ ಕುಸ್ತಿ ಕಣದಲ್ಲಿ ಏಣಿ ಶ್ರೇಣಿಯೇ ಉಸಿರಾದ ಗಂಡುಮೌಲ್ಯಗಳು ಮೆರೆಯುವುದು ಏನೂ ಅಚ್ಚರಿಯಲ್ಲ. ಗಂಡುಹಿರಿಮೆಯ ರೋಗಕ್ಕೆ ಬಲಶಾಲಿ 'ಅಬಲೆ'ಯರು ಬಲಿಯಾಗುವುದೂ ಹೊಸತಲ್ಲ. ನಂಬಿ, 2004ರವರೆಗೆ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಕುಸ್ತಿ ಪಂದ್ಯಗಳಿರಲಿಲ್ಲ. ದೈಹಿಕವಾಗಿ ಬಲಿಷ್ಠರಾಗಿದ್ದರೂ ಮಹಿಳಾ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯ ತಡೆಯಲಾಗಲಿಲ್ಲ. ಹೆಣ್ಣೆಂಬ ಕಾರಣಕ್ಕೆ ಹಿಂಸೆ, ಹೀಯಾಳಿಕೆಗಳನ್ನು ಅವರೀಗಲೂ ಎದುರಿಸುತ್ತಿದ್ದಾರೆ. ಅವಕಾಶ, ಅಧಿಕಾರದ ನೆಪದಲ್ಲಿ ದೌರ್ಜನ್ಯ ಅವ್ಯಾಹತವಾಗಿ ಮುಂದುವರೆದಿದೆ.

ಈ ಹೇಳಿಕೆಗೆ ಇಂಬುಕೊಡುವಂತೆ ನಾವು ಮರೆತ ಭಾರತದ ಮೊದಲ ಮಹಿಳಾ ಕುಸ್ತಿಪಟು ಹಮೀದಾ ಬಾನು ಬೇಗಂ ಬಗೆಗೆ ಒಂದಷ್ಟು ಮಾಹಿತಿ ಪ್ರಕಟವಾಗಿದೆ. ಪೇಪರ್‌ಕ್ಲಿಪ್ ಮತ್ತು ಬಿಬಿಸಿ ಜಾಲತಾಣಗಳು ಶತಮಾನದ ಹಿಂದೆ ಭಾರತದ ಮುಸ್ಲಿಂ ಹುಡುಗಿಯೊಬ್ಬಳು ಕುಸ್ತಿಪಟುವಾಗಲು ಯತ್ನಿಸಿ, ಮನೆ ಬಿಟ್ಟುಬಂದು, ಉಸ್ತಾದನನ್ನು ತಾನೇ ಹುಡುಕಿಕೊಂಡು ಅಜೇಯಳಾಗಿ ಮೆರೆದ ರೋಚಕ ಕಥನವನ್ನು ವೃತ್ತಪತ್ರಿಕೆಯ ವರದಿಗಳಿಂದ ಹೆಕ್ಕಿ ತೆಗೆದಿವೆ. ಮಾಹಿತಿ ಅಸ್ಪಷ್ಟವಾಗಿದ್ದರೂ ಅವಳ ಬದುಕು, ಸಾಧನೆಗಳು ದಿಙ್ಮೂಢಗೊಳಿಸುವಂತಿವೆ.

1911ರ ಸುಮಾರು ಪಂಜಾಬ್‌ನ ಮಿರ್ಜಾಪುರದ ಕುಸ್ತಿಪಟುಗಳ ಮನೆಯಲ್ಲಿ ಕುಸ್ತಿ ನೋಡುತ್ತ, ಅಖಾಡಕ್ಕಿಳಿಯುವ ಕನಸು ಕಾಣುತ್ತ ಹಮೀದಾ ಬಾನು ಬೆಳೆದಳು. ಸಾಂಪ್ರದಾಯಿಕ ಪರಿಸರದಲ್ಲಿ ಕುಸ್ತಿಪಟುವಾಗುವುದು ಕಷ್ಟ ಎಂದರಿವಾದದ್ದೇ ಮನೆಬಿಟ್ಟು ಅಮೃತಸರಕ್ಕೆ ಬಂದಳು. ಸಲಾಂ ಪೈಲ್ವಾನ ಎಂಬವನ ಮನವೊಲಿಸಿ



ತರಬೇತಿ ಪಡೆಯತೊಡಗಿದಳು. 1937ರಲ್ಲಿ ಮೊದಲ ಬಾರಿ ಅಖಾಡಕ್ಕಿಳಿದಾಗ ಮಹಿಳಾ ಪೈಲ್ವಾನರಿರದ ಕಾರಣ ಪುರುಷರೊಡನೆ ಸೆಣಸಬೇಕಾಯಿತು. ಪರ್ದಾದಲ್ಲಿರಬೇಕಾದ ಭಾರತೀಯ ನಾರಿ, ಅದರಲ್ಲೂ ಮುಸ್ಲಿಂ ಮಹಿಳೆ ಪೈಲ್ವಾನರನ್ನು ಕೆಡವಿ, ಗುದ್ದಿ, ಎತ್ತಿ ಒಗೆಯುವುದೆಂದರೆ?! ಅಮೃತಸರವೆಂಬ ಕುಸ್ತಿಯ ತವರು ಹುಬ್ಬುಗಂಟಿಕ್ಕಿತು. ಸಂಪ್ರದಾಯವಾದಿಗಳ ಕಣ್ಣು ಕೆಂಪಾದವು. ಬದುಕಲು ಕಷ್ಟವಾದಾಗ ಹಮೀದಾ ಅಲಿಘರಕ್ಕೆ ಬಂದಳು. ದೆಹಲಿಯ ಕೆಲವು ಪೈಲ್ವಾನರನ್ನು ಸೋಲಿಸಿದಳು.

ಲಾಹೋರಿನ ಫಿರೋಜ್ ಖಾನನೊಡನೆ ಆಗ್ರಾದಲ್ಲಿ ನಡೆದ ಪಂದ್ಯ ಅವಳನ್ನು ಪ್ರಖ್ಯಾತಗೊಳಿಸಿತು. ಹೆಂಗಸಿನೊಡನೆ ಕುಸ್ತಿಯೇ ಎಂದು ಮೂದಲಿಸಿದ ಫಿರೋಜ್‌ನನ್ನು ಕೆಲವೇ ನಿಮಿಷಗಳಲ್ಲಿ ಕೆಡವಿದಳು. ಚುರುಕುತನದ ಪಟ್ಟುಗಳಿಂದ ದಿನಬೆಳಗಾಗುವುದರಲ್ಲಿ ಖ್ಯಾತಳಾದಳು. ಒಬ್ಬರಾದ ಮೇಲೊಬ್ಬರನ್ನು ಮಣಿಸಿದಳು.

ಗಂಡಸರಿಗಿಂತ ಚೆನ್ನಾಗಿ ಕುಸ್ತಿ ಮಾಡುವ ಹೆಣ್ಣು! ಅರಗಿಸಿಕೊಳ್ಳಲು ಸಮಾಜಕ್ಕೆ ಕಷ್ಟವಾಯಿತು. ಅವಮಾನಿಸುವ ಬೈಗುಳಗಳು ತೂರಿಬಂದವು. ಕೋಪ ಬಂದರೂ ತಡೆದುಕೊಂಡ ಹಮೀದಾ ಅಖಾಡದಲ್ಲಿ ಗೆದ್ದು ಉತ್ತರಿಸಿದಳು. 'ಮುಂಚೆನೇ ಗುಟ್ಟಾಗಿ ಒಪ್ಪಂದ ಮಾಡಿಕೊಂಡಿರ್ತಾಳೆ. ಎದುರಾಳಿಗಳು ಬೇಕೆಂದೇ ಸೋಲ್ತಾರೆ' ಎಂದು ಹುಯಿಲೆಬ್ಬಿಸಲಾಯಿತು. ಪುಣೆಯ ರಾಮಚಂದ್ರ ಸಾಳಂಕೆಯೊಡನೆ ಪಂದ್ಯ ಏರ್ಪಟ್ಟಾಗ ಕುಸ್ತಿ ಒಕ್ಕೂಟ ತಕರಾರೆತ್ತಿ ಪಂದ್ಯವನ್ನು ರದ್ದುಗೊಳಿಸಿತು. ಕೊಲ್ಲಾಪುರದ ಪೈಲ್ವಾನನೊಬ್ಬನನ್ನು ಸೋಲಿಸಿದ ಬಳಿಕ ಅವನ ಅಭಿಮಾನಿಗಳು ಕಲ್ಲೆಸೆದು ಗದ್ದಲವೆಬ್ಬಿಸಿದರು. ಗುಂಪು ಚದುರಿಲು ಪೊಲೀಸರು ಬರಬೇಕಾಯಿತು. ಮತ್ತೊಮ್ಮೆ ಅವಳ ಪಂದ್ಯದ ಬಳಿಕ ಕುಂಟ ಮತ್ತು ಕುರುಡನ ನಡುವೆ ಕುಸ್ತಿ ಪಂದ್ಯ ಏರ್ಪಡಿಸಿ ಅವಳ ಪಂದ್ಯವನ್ನು ಮನೋರಂಜನೆಯ ಡಮ್ಮಿ ಪಂದ್ಯವೆಂಬಂತೆ ಬಿಂಬಿಸಲಾಯಿತು. ಅಷ್ಟಾದರೂ ಅವಳ ಜನಪ್ರಿಯತೆ ಎಷ್ಟಿತ್ತೆಂದರೆ 1944ರಲ್ಲಿ ಗೂಂಗಾ ಪೈಲ್ವಾನ್ ಜೊತೆಗಿನ ಕುಸ್ತಿ ನೋಡಲು ಮುಂಬಯಿಯಲ್ಲಿ 20,000 ಜನ ಸೇರಿದ್ದರು! ಕೊನೆಯ ಗಳಿಗೆಯಲ್ಲಿ ಪೈಲ್ವಾನ್ ಬೃಹತ್ ಮೊತ್ತಕ್ಕೆ ಬೇಡಿಕೆ ಇಟ್ಟಿದ್ದಲ್ಲದೇ ಸಿದ್ಧತೆ ನಡೆಸಲು ಸಮಯ ಬೇಕೆಂದು ಪಂದ್ಯ ರದ್ದುಗೊಳಿಸಿದ. ಬಂದ ಜನ ಕೋಪಗೊಂಡು ತಿರುಗಿ ಹೋದರೆಂದು ಬಾಂಬೆ ಕ್ರಾನಿಕಲ್ ಬರೆಯಿತು.

ಕ್ರಾಪ್‌ಕಟ್‌ನ ಕೇಶವಿನ್ಯಾಸ, ಯುದ್ಧ ಕವಚದಂತಹ ಅಂಗಿ ತೊಡುತ್ತಿದ್ದ ಹಮೀದಾಳ ಎತ್ತರ, ತೂಕ, ಊಟ ಎಲ್ಲವೂ ದೇಶ–ವಿದೇಶಗಳಲ್ಲಿ ಸುದ್ದಿಯಾದವು. ದಿನಕ್ಕೆಂಟು ತಾಸು ನಿದ್ರೆ, 6 ತಾಸು ತಾಲೀಮು, 10 ತಾಸು ಊಟ ಎಂದೆಲ್ಲ ಕತೆಗಳು ಹಬ್ಬಿದವು. ಐದಡಿ ಮೂರಿಂಚು ಎತ್ತರವಿದ್ದ ಹಮೀದಾ 108 ಕೆ.ಜಿ. ತೂಗುತ್ತಿದ್ದಳು. ಪ್ರತಿದಿನ 5.6 ಲೀಟರ್ ಹಾಲು, 2.8 ಲೀಟರ್ ಸೂಪು, 1.8 ಲೀಟರ್ ಜ್ಯೂಸ್ ಕುಡಿಯುತ್ತಿದ್ದಳು. ದಿನವೂ ಒಂದು ಕೋಳಿ, ಒಂದು ಕೆ.ಜಿ ಮಟನ್, ಒಂದು ಕೆ.ಜಿ ಬಾದಾಮಿ, ಅರ್ಧ ಕೆ.ಜಿ ಬೆಣ್ಣೆ, 6 ಮೊಟ್ಟೆ, ಎರಡು ದೊಡ್ಡ ಬ್ರೆಡ್‌ಲೋಫ್, ಎರಡು ತಟ್ಟೆ ಬಿರಿಯಾನಿ ತಿನ್ನುತ್ತಿದ್ದಳು.

ಆ ವೇಳೆಗೆ 320 ಪಂದ್ಯಗಳಲ್ಲಿ ಅಜೇಯಳಾಗುಳಿದ 'ಅಲಿಘರದ ಅಮೆಜಾನ್', 'ನನ್ನನ್ನು ಸೋಲಿಸಿದವರನ್ನು ಮದುವೆಯಾಗುವೆ'ನೆಂದು ಫೆಬ್ರುವರಿ 1954ರಲ್ಲಿ ಪ್ರಕಟಿಸಿದಳು. ಬಹಿರಂಗ ಸವಾಲಿಗೆ ಉತ್ತರವಾಗಿ ಪಾಟಿಯಾಲಾ, ಕೋಲ್ಕತ್ತದಿಂದ ಪೈಲ್ವಾನರು ಬಂದು ಸೋತುಹೋದರು. ಮೇ ತಿಂಗಳಲ್ಲಿ ಬರೋಡಾದ ಆಸ್ಥಾನ ಪೈಲ್ವಾನ್ ಛೋಟೆ ಗಾಮಾ ಮತ್ತು ಬಾಬಾ ಪೈಲ್ವಾನರೊಡನೆ ಸೆಣಸಬೇಕಿತ್ತು. ಪಂದ್ಯ ಶುರುವಾಯಿತು. ಗಾಮಾನನ್ನು ಇನ್ನೇನು ಮಣಿಸಿಯೇಬಿಟ್ಟಳು ಎನ್ನುವಷ್ಟರಲ್ಲಿ 'ಛೇ, ಹೆಂಗಸಿನೊಂದಿಗೆ ಸೆಣಸುವುದೇ?' ಎಂದಾತ ಹಿಂದೆಗೆದ. ನಂತರ ಬಾಬಾ ಪೈಲ್ವಾನನು 'ಗೆದ್ದರೆ ಮದುವೆ, ಸೋತರೆ ನಿವೃತ್ತಿ' ಎಂದು ಘೋಷಿಸಿದ. ಅವನನ್ನು ಒಂದೂವರೆ ನಿಮಿಷದಲ್ಲಿ ಮಣಿಸಿ ನಿವೃತ್ತಿ ಮಾಡಿಸಿದಳು. 1954ರಲ್ಲಿ ರಷ್ಯಾದ ವೆರಾ ಚಿಸ್ತಿಲಿನ್‌ಳನ್ನು ಒಂದೇ ನಿಮಿಷದಲ್ಲಿ ನೆಲಕ್ಕೊರಗಿಸಿದಳು. ಗೆಲುವಿನ ಸಂಭ್ರಮಕ್ಕೆ ಹುಕಿಗೊಂಡು ಯುರೋಪನ್ನು ಸಂಚರಿಸುವುದಾಗಿ ಪ್ರಕಟಿಸಿಬಿಟ್ಟಳು.

ಅಷ್ಟೇ. ಅದಾದ ಮೇಲೆ ಇದ್ದಕ್ಕಿದ್ದಂತೆ ಕುಸ್ತಿಯ ರಂಗದಿಂದ ಕಾಣೆಯಾದಳು. ಏನಾದಳು, ಎಲ್ಲಿರುವಳೆಂದು ಯಾರಿಗೂ ತಿಳಿಯಲಿಲ್ಲ. ಈಗ ಅಷ್ಟಿಷ್ಟು ವಿಷಯ ಹೊರಬಂದಿದೆ.

ತನ್ನನ್ನು ಕೇಳದೇ ಯುರೋಪಿಗೆ ಹೋಗುವೆನೆಂದು ಪ್ರಕಟಿಸಿದ್ದಕ್ಕೆ ಕೋಪಗೊಂಡ ಸಲಾಂ ಕೈಕಾಲಿನ ಮೂಳೆ ಮುರಿಯುವಂತೆ ಅವಳಿಗೆ ಹೊಡೆದು ಮುಂಬಯಿಯ ಕಲ್ಯಾಣದಲ್ಲಿ ಬಿಟ್ಟು ಅಲಿಘರಕ್ಕೆ ಹೋಗಿಬಿಟ್ಟ. ಅವಳ ಕೈಕಾಲುಗಳ ಬಲಿಷ್ಠಗೊಳಿಸಿದ್ದ ಕಬ್ಬಿಣದ ಬಡಿಗೆಯೇ ಮೂಳೆಯನ್ನೂ ಮುರಿಯಿತು. ವರುಷಗಟ್ಟಲೆ ನಡೆಯಲಾಗಲಿಲ್ಲ. ಮತ್ತೆಂದೂ ಕುಸ್ತಿ ಮಾಡಲಿಲ್ಲ. ಹಮೀದಾ ಗಂಡುಮಗುವೊಂದನ್ನು ಸಾಕುತ್ತಿದ್ದಳು. ಬದುಕು ದುಸ್ತರವಾಯಿತು. ಹಾಲುಹೈನು, ರಸ್ತೆಬದಿ ತಿಂಡಿ ತಿನಿಸು ಮಾರಿ ಮಗನೊಡನೆ ಬದುಕಿದಳು. (ಹಮೀದಾ ಸಲಾಂನನ್ನು ಮದುವೆಯಾಗಿದ್ದಳೆಂಬ ಗಾಳಿಸುದ್ದಿಯಿತ್ತು. ಅವನ ಮಗಳ ಪ್ರಕಾರ ಅವರಿಬ್ಬರೂ ಮದುವೆಯಾಗಿದ್ದರು. ಮಗಳು ಹಮೀದಾಳನ್ನು ಚಿಕ್ಕಮ್ಮನೆಂದೇ ಕರೆಯುತ್ತಿದ್ದಳು. ಹಮೀದಾಳ ಸಾಕುಮಗನ ಪ್ರಕಾರ ಅವರು ಆಪ್ತವಾಗಿದ್ದರು, ಆದರೆ ಮದುವೆಯಾಗಿರಲಿಲ್ಲ. 1985ರ ಆಸುಪಾಸು ತೀರಿಕೊಂಡ ಅವಳ ಕೊನೆಯ ದಿನಗಳು ದಾರುಣವಾಗಿದ್ದವು.)

ಎಲ್ಲರದ್ದೂ ಹೋರಾಟವೇ

ಕುಸ್ತಿ ಭಾರತದ ಜನಪ್ರಿಯ, ಪುರಾತನ ಕ್ರೀಡೆ. ಆದರೆ ಹೆಣ್ಣುಗಳು ಕುಸ್ತಿ ಆಡಿರುವ ಪೌರಾಣಿಕ, ಐತಿಹಾಸಿಕ ದಾಖಲೆಗಳಿಲ್ಲ. ಅಂತಹ ಗಂಡುಲೋಕದಲ್ಲಿ ಅಜೇಯಳಾಗಿ ಮೆರೆದದ್ದು; ದೇಹ ಮುಚ್ಚಿಕೊಳ್ಳದವರು ಹೆಂಗಸರೇ ಅಲ್ಲ ಅಂದುಕೊಳ್ಳುವ ಸಮಾಜದಲ್ಲಿ ಧಾರ್ಮಿಕ ಕಟ್ಟಲೆಗಳನ್ನು ಮೀರಿದ್ದು; ಮದುವೆಯ ಹಂಗಿಲ್ಲದೆ ಸಲಾಂನೊಡನೆ ಬದುಕಿದ್ದು; ಕಷ್ಟನಷ್ಟಗಳು ಬಂದೆರಗಿದಾಗಲೂ ಘನತೆಯ ಬದುಕು ಕಟ್ಟಿಕೊಂಡದ್ದು ಹಮೀದಾಳ ಛಲ, ಸ್ವಾಭಿಮಾನದ ಪ್ರತೀಕವಾಗಿವೆ. ಆದರೆ ಗಂಡು ಗೆಲ್ಲಲಾಗದ, ಗೆದ್ದವನನ್ನು ಮದುವೆಯಾಗುವೆನೆಂಬ ಅವಳ ಸವಾಲನ್ನು ಸಹಿಸದ ಗಂಡುಗರುವ ಕೈಕಾಲು ಮುರಿದು ಕೂರಿಸಿದ್ದು ಮಹಿಳೆಯರ ಸ್ವಾಯತ್ತ ಹಂಬಲದ ಗತಿಯನ್ನು ಸೂಚಿಸುವ ಸಂಕೇತವಾಗಿದೆ.

ಅಮೆರಿಕದ ಕುಸ್ತಿಪಟು ಮಿಲ್ಡ್ರೆಡ್ ಬರ್ಕಳದ್ದೂ ದಮನಿತ ಕಥನವೇ. ತಾನು ಮೊದಲು ನೋಡಿದ ಕುಸ್ತಿಪಟುವನ್ನು ಬೆನ್ನತ್ತಿ, ಕುಸ್ತಿ ಕಲಿತು, ಕೊನೆಗೆ ಅವನನ್ನೇ ಮದುವೆಯಾಗಿದ್ದ ಬರ್ಕ್, ವಿಶ್ವ ಕುಸ್ತಿಪಟುಗಳ ಒಕ್ಕೂಟದಲ್ಲಿ ಮಹಿಳಾ ಕುಸ್ತಿಪಟುಗಳಿಗೆ ಜಾಗವಿಲ್ಲವೆಂದಾಗ 1954ರಲ್ಲಿ ವಿಶ್ವ ಮಹಿಳಾ ಕುಸ್ತಿಪಟುಗಳ ಸಂಘ ಕಟ್ಟಿದಳು. ಅವರ ಹಕ್ಕಿಗಾಗಿ ಹೋರಾಡಿದಳು. ಏಕಾಂಗಿಯಾಗಿ ಅಮೆರಿಕವನ್ನು, ವಿಶ್ವವನ್ನು ಸುತ್ತಿದಳು. ಆದರೆ ಅವಳೂ ಗಂಡ-ಗುರುವಿನಿAದ ಅನ್ಯಾಯಕ್ಕೆ ಒಳಗಾದಳು.


ಅಲ್ಲಿ ಅವಳು, ಇಲ್ಲಿವಳು. ಅಂದು ಅವರು, ಇಂದು ಇವರು. ಅಂತೂ ಲೋಕದ ಗಂಡುಗರುವ ಇಳಿಯದ ಹೊರತು ಹೆಣ್ಣು ನೆಮ್ಮದಿಯ ನಾಳೆಗೆ ಬೆಳಕು ಹರಿಯದು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕ ಕೇಳಿಷ್ಟು ಕಥೆಯ | ಗುಂಡ ರಾಕೆಟ್!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಊರುಗಳು ನಿಮಗೆಷ್ಟು ಗೊತ್ತು?

ಇಲ್ಲಿ ಕೊಟ್ಟಿರುವ ಎರಡಕ್ಷರ ಪದಗಳಿಗೆ ಹಿಂದೆ ಎರಡಕ್ಷರ ಸೇರಿಸಿ ನಾಲ್ಕಕ್ಷರಗಳ ಊರಿನ ಹೆಸರನ್ನು ಬರೆಯಬಲ್ಲಿರಾ?

1. _ _ ಪತಿ
2. _ _ ಹರ
3. _ _ ಕವಿ
4. _ _ ಕೇರಿ
5. _ _ ಗಿರಿ
6. _ _ ವರ
7. _ _ ವಾರ
8. _ _ ಯಾಣ
9. _ _ ಚೂರ
10. _ _ ಪೂರ
11. _ _ ಮಣಿ
12. _ _ ಪಾಲ
13. _ _ ಗೋಳ
14. _ _ ನೆಲೆ
15. _ _ ಕೆರೆ
16. _ _ ಗೆರೆ
17. _ _ ನಾಡು
18. _ _ ಸ್ಥಳ
19. _ _ ಲಯ
20. _ _ ಬೀಡು

ಗಣಿತದಲ್ಲಿ ಗದ್ದಿಗಮ್ಮತ್ತು

ಘಳಿಗೆ–ತಾಸು

ಇತ್ತೀಚಿನ ದಿನಗಳಲ್ಲಿ ಘಳಿಗೆಯಿಂದ ವೇಳೆ ಹೇಳುವಾಗ ಅನೇಕರಿಗೆ ತಿಳಿಯುವುದಿಲ್ಲ. ಸರಿಯಾದ ಸರಳ ವಿಧಾನದಿಂದ ಅದನ್ನು ತಾಸು ನಿಮಿಷಗಳಲ್ಲಿ ತಿಳಿಯಬಹುದು.

ಘಳಿಗೆಗೆ 2 ರಿಂದ ಗುಣಿಸಿ, 5 ರಿಂದ ಭಾಗಿಸಿದಾಗ ಸಿಗುವ ಗುಣಲಬ್ಧವೇ ತಾಸು. ಉಳಿದ ಶೇಷಕ್ಕೆ 60ರಿಂದ ಗುಣಿಸಿ 5 ರಿಂದ ಭಾಗಿಸಲು ಬಂದ ಲಬ್ಧವೇ ಸೆಕೆಂಡು. ಹೀಗೆ ಬಂದ ಗಂಟೆ ನಿಮಿಷಗಳನ್ನು ಆ ದಿನದ ಸೂರ್ಯೋದಯದ ಸಮಯಕ್ಕೆ ಸೇರಿಸಿದರೆ ಗಡಿಯಾರದ ಸಮಯ ಸಿಗುವುದು.

ಉದಾ: 5 ಘಳಿಗೆ ಹೊತ್ತಾಯಿತೆಂದರೆ ಎಷ್ಟು ಗಂಟೆ ಎಂದು ತಿಳಿಯಬೇಕಾ?

ಆ ಘಳಿಗೆಗೆ 2 ರಿಂದ ಗುಣಿಸಲು 10 ಬರುವುದು. ಬಂದ ಮೊತ್ತಕ್ಕೆ 5ರಿಂದ ಭಾಗಿಸಲು ಲಬ್ಧ 2 ಬರುವುದು. ಇದೇ ಗಂಟೆ. ಅಂದಿನ ಸೂರ್ಯೋದಯ 6 ಗಂಟೆ 15 ನಿಮಿಷವಾದರೆ, ವೇಳೆ- 8 ಗಂಟೆ 15 ನಿಮಿಷ, ಅರ್ಥವಾಯಿತೆ.


ಪುಟಾಣಿ ಪದಬಂಧ

					ಸುಳಿವು
1			ಪಿ	ಲ್ಲಿ	ಅಸ್ತವ್ಯಸ್ತವಾಗಿ ಬಿದ್ದಿರುವಿಕೆ
2			ಮ	ಣ	ಮಣ ಭಾರ ಹೊತ್ತು ಚಲಿಸುವಿಕೆ
3			ಗ	ರ	ಗರ ಬಡಿದವರನ್ನು ಕಂಡಾಗ ಆದ ಸಂಕೋಚ
4			ಗ	ಡಿ	ಗಡಿಯಲ್ಲಿ ನಡೆದ ಅವ್ಯವಹಾರ
5			ರ	ಣ	ರಣರಂಗದಲ್ಲೂ ಕಂಡ ಒಡವೆ



SCOUT BOY

ಎಂಬ ಬರಹದಲ್ಲಿ ಸ್ಕೌಟ್ ಹುಡುಗನ ಚಿತ್ರ



ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1 ಜನಬರಲಿ = ____________

2 ಗಡಿಯಾರ = ____________

3 ಪಾಚಕವಟಿ = ____________

4 ಮಗುಹಾರು = ____________

ಜಿಜ್ಞಾಸೆ

ಸಕ್ಕರೆ ಬಿಸಿ ನೀರಿನಲ್ಲಿ ಬೇಗ ಕರಗುತ್ತದೆ; ಆದರೆ ತಣ್ಣೀರಿನಲ್ಲಿ ಬೇಗ ಕರಗುವುದಿಲ್ಲವೇಕೆ?

ನೀರಿನ ಕಣಗಳು ದೂರ ಸರಿಯುವಾಗ ಅದರ ಎಡೆಯಲ್ಲಿ ಸಕ್ಕರೆಯ ಸೂಕ್ಷ್ಮ ಕಣ ಸೇರುವ ಕ್ರಮವೇ ಕರಗುವಿಕೆ. ಕಾಯಿಸಿದಾಗ ನೀರಿನ ಕಣಗಳು ಸಕ್ಕರೆಯಿಂದ ಇನ್ನಷ್ಟು ದೂರದೂರಕ್ಕೆ ಸರಿಯುವುದರಿಂದ ಸಕ್ಕರೆ ಬೇಗನೆ ಕರಗುತ್ತದೆ.

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1.ನಿರಂಜನ 2.ಕಾದಂಬರಿ 3.ಉಸಾಬರಿ 4.ಉಪದ್ರವ 5.ಕಳೇಬರ

ಅದಲು ಬದಲು...: 1.ಜನಜೀವನ 2.ಕರಿಸುತ್ತ 3.ಉರಿಸುತ್ತ 4.ಮಾತನಾಡು

ಅಕ್ಷರ ಆಟ: 1.ಆರಿಸು 2.ಇರಿಸು 3.ಉರಿಸು 4.ಊರಿಸು 5.ವರಿಸು 6.ಕರಿಸು 7.ಕೂರಿಸು 8.ಕೇರಿಸು 9.ಜರಿಸು 10.ಜಾರಿಸು 11.ತರಿಸು 12.ತೂರಿಸು 13.ತುರಿಸು 14.ತೋರಿಸು 15.ದಿರಿಸು 16.ಧರಿಸು 17.ನುರಿಸು 18.ಪೇರಿಸು 19.ಬರಿಸು 20.ಬಾರಿಸು 21.ಭರಿಸು 22.ಮಾರಿಸು 23.ಮೀರಿಸು 24.ವರಿಸು 25.ಸರಿಸು 26.ಸಾರಿಸು 27.ಸುರಿಸು 28.ಸೋರಿಸು 29.ಹರಿಸು 30.ಹಾರಿಸು 31.ಹಿರಿಸು 32.ಹುರಿಸು 33.ಹೊರಿಸು 34.ಹೇರಿಸು 35.ಸೈರಿಸು 36.ಚೀರಿಸು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಶಶಾಂಕ್.ಹುಕ್ಕೇರಿ
ಕೊಪ್ಪಳ



ಬೃಂದಾ ಭಾರದ್ವಾಜ್, ಚಿಕ್ಕಮಗಳೂರು



ಪ್ರಥಮ್ ಬಳ್ಳಾ
ಸೂಳೇಬಾವಿ, ಬಾಗಲಕೋಟೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ಸ್: ಚಿನ್ನ ಗೆದ್ದ ತೇಜಸ್ವಿನ್, ಸ್ವಪ್ನಾ

ಏಷ್ಯನ್ ಗೇಮ್ಸ್‌ಗೆ ಜೆಸ್ಸಿ ಅರ್ಹತೆ

ಭುವನೇಶ್ವರ (ಪಿಟಿಐ): ಮಹಾರಾಷ್ಟ್ರದ ಸರ್ವೇಶ್ ಕುಶಾರೆ ಮತ್ತು ಕರ್ನಾಟಕದ ಜೆಸ್ಸಿ ಸಂದೇಶ್ ಅವರು ಹೈಜಂಪ್‌ನಲ್ಲಿ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಗಿಟ್ಟಿಸಿಕೊಂಡು ಸಂಭ್ರಮಿಸಿದರು. 62ನೇ ರಾಷ್ಟ್ರೀಯ ಅಂತರರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮೂರನೇ ದಿನ 100 ಮೀ. ಹರ್ಡಲ್ಸ್‌ನಲ್ಲಿ ಆಂಧ್ರ ಪ್ರದೇಶದ ಓಟಗಾರ್ತಿ ಜ್ಯೋತಿ ಯೆರ್ರಾಜಿ ಸಹ ಚಿನ್ನ ಗೆಲ್ಲುವ ಹಾದಿಯಲ್ಲಿ ಹಾಂಗ್‌ಜೌನ ಕ್ರೀಡಾಕೂಟಕ್ಕೆ ಆಯ್ಕೆಯಾದರು.

ಕಳಿಂಗ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಹೈಜಂಪ್ ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾರೆ 2.24 ಮೀ. ಎತ್ತರ ಜಿಗಿದರು. ಅವರಿಗೆ ಸಮನಾಗಿ ಪೈಪೋಟಿ ನೀಡಿದ ಕರ್ನಾಟಕದ ಜೆಸ್ಸಿ ಸಂದೇಶ್ ಕೂಡ ಇಷ್ಟೇ ಎತ್ತರಕ್ಕೆ ಜಿಗಿದರು. ಭಾರತ ಅಥ್ಲೆಟಿಕ್ ಫೆಡರೇಷನ್ ಏಷ್ಯನ್ ಕ್ರೀಡಾಕೂಟಕ್ಕೆ ನಿಗದಿಪಡಿಸಿದ ಅರ್ಹತಾ ಮಟ್ಟ ಕೂಡ 2.24 ಮೀ. ಆಗಿತ್ತು.

ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಮೊದಲ ಮೂರೂ ಸ್ಥಾನ ಪಡೆದ ಓಟಗಾರ್ತಿಯರು ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ ಸಮಯದೊಳಗೇ (13.63 ಸೆ.) ಓಟ ಪೂರೈಸಿದರು. ಶುಕ್ರವಾರ 100 ಮೀ. ಓಟದಲ್ಲೂ ಚಿನ್ನ ಗೆದ್ದಿದ್ದ ವಿಶಾಖಪಟ್ಟಣದ ಜ್ಯೋತಿ ಹರ್ಡಲ್ಸ್‌ನಲ್ಲೂ ಹೆಚ್ಚಿನ ಪೈಪೋಟಿ ಎದುರಿಸದೇ 12.92 ಸೆ.ಗಳಲ್ಲಿ ಅಂತರ ಕ್ರಮಿಸಿದರು. ತಮಿಳುನಾಡಿನ ನಿತ್ಯಾ ಆರ್. ಮತ್ತು ತೆಲಂಗಾಣದ ಅಗಸರ ನಂದಿನಿ ಕ್ರಮವಾಗಿ 13.48 ಸೆ. ಮತ್ತು 13.55 ಸೆ.ಗಳಲ್ಲಿ ಓಟ ಪೂರೈಸಿದರು.


ಜೆಸ್ಸಿ ಸಂದೇಶ್

ಡೆಕಾಥ್ಲಾನ್‌ನಲ್ಲಿ ಕಣಕ್ಕಿಳಿದಿರುವ ಹೈಜಂಪ್ ಪಟು ತೇಜಸ್ವಿನ್ ಶಂಕರ್ 7576 ಪಾಯಿಂಟ್ಸ್ ಸಂಗ್ರಹಿಸಿ ಏಷ್ಯನ್ ಗೇಮ್ಸ್ ಅರ್ಹತಾ ಮಟ್ಟ (7,500) ಸಾಧಿಸಿದರು.

ಟ್ರಿಪಲ್ ಜಂಪ್‌ನಲ್ಲೂ ಮೊದಲ ಮೂರು ಸ್ಥಾನ ಪಡೆದವರು ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ್ದ (16.60 ಮೀ) ಅರ್ಹತಾ ಮಟ್ಟ ಸಾಧಿಸಿದರು. ತಮಿಳುನಾಡಿನ ಪ್ರವೀಣ್ ಚಿತ್ರವೇಲ್ 17.07 ಮೀ. ಜಿಗಿದು ಚಿನ್ನ ಗೆದ್ದರು. ಕೇರಳದ ಅಬ್ದುಲ್ಲಾ ಅಬೂಬಕ್ಕರ್ (16.88) ಮತ್ತು ಎಲ್ದೋಸ್ ಪಾಲ್ (16.75 ಮೀ.) ಕೂಡ ಉತ್ತಮ ಸಾಧನೆ ತೋರಿದರು.

ಜಕಾರ್ತಾ ಏಷ್ಯನ್ ಕ್ರೀಡಾಕೂಟ ಹೆಪ್ಟಾಥ್ಲಾನ್ ಚಿನ್ನ ಗೆದ್ದುಕೊಂಡಿದ್ದ ಮಧ್ಯ ಪ್ರದೇಶದ ಸ್ವಪ್ನಾ ಬರ್ಮನ್ ಈ ಬಾರಿಯೂ ಸುಲಭವಾಗಿ ಅರ್ಹತಾ ಮಟ್ಟ (5654) ದಾಟಿದರು. ಅವರು 5918 ಪಾಯಿಂಟ್ಸ್ ಕಲೆಹಾಕಿದರು.


ಸಿಂಧುಶ್ರೀ

ಮಹಿಳೆಯರ ಪೋಲ್‌ವಾಲ್ಟ್‌ನಲ್ಲಿ ತಮಿಳುನಾಡಿನ ಪವಿತ್ರಾ ವೆಂಕಟೇಶ್ ಚಿನ್ನ ಗೆಲ್ಲುವ ಹಾದಿಯಲ್ಲಿ 4.10 ಮೀ. ಎತ್ತರಕ್ಕೆ ಜಿಗಿದು ಅರ್ಹತಾ ಮಟ್ಟ (4.10) ಸಾಧಿಸಿದರು. ಬೆಳ್ಳಿಯ ಪದಕ ಕರ್ನಾಟಕದ ಸಿಂಧುಶ್ರೀ (3.80 ಮೀ.) ಪಾಲಾಯಿತು. ಹರಿಯಾಣದ ವನ್ನಿಕಾ (3.40 ಮೀ.) ಕಂಚಿನ ಪದಕ ಗಳಿಸಿದರು. ಕರ್ನಾಟಕದ ಇನ್ನೋರ್ವ ಸ್ಪರ್ಧಿ ನಿಶಾ ಬಾನು ಅಬ್ದುಲ್ಲಾ (3.30 ಮೀ.) ನಾಲ್ಕನೇ ಸ್ಥಾನ ಪಡೆದರು.

ಕರ್ನಾಟಕದ ಅಖಿಲೇಶ್‌ಗೆ ಗಾಯ: ಕರ್ನಾಟಕದ ಅಥ್ಲೀಟ್ ಅಖಿಲೇಶ್ ಅವರು ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಜಿಗಿಯುವ ವೇಳೆ ಗಾಯಗೊಂಡರು. ಅವರ ಬಲಗಾಲಿನ ಮೂಳೆ ಮುರಿದಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಫಲಿತಾಂಶಗಳು: ಪುರುಷರ ವಿಭಾಗ: 110 ಮೀ.ಹರ್ಡಲ್ಸ್: ತೇಜಸ್ ಅಶೋಕ್ ಶಿರ್ಸೆ (ಮಹಾರಾಷ್ಟ್ರ)–1, ಸಚಿನ್ ಬಿನು (ಕೇರಳ)–2, ರೊನಾಲ್ಡ್ ಬಾಬು (ಮಧ್ಯಪ್ರದೇಶ)–3, ಕಾಲ: 13.87 ಸೆ.; ಹೈಜಂಪ್: ಸರ್ವೇಶ್ ಅನಿಲ್ ಕುಶಾರೆ (ಮಹಾರಾಷ್ಟ್ರ)–1, ಜೆಸ್ಸಿ ಸಂದೇಶ್ (ಕರ್ನಾಟಕ)–2, ಭಾರತಿ ವಿಶ್ವನಾಥನ್ (ತಮಿಳುನಾಡು)–3, ಎತ್ತರ: 2.24 ಮೀ.; ಟ್ರಿಪಲ್ ಜಂಪ್: ಪ್ರವೀಣ್ ಚಿತ್ರವೇಲ್ (ತಮಿಳುನಾಡು)–1, ಅಬ್ದುಲ್ಲಾ ಅಬೂಬಕ್ಕರ್ (ಕೇರಳ)–2, ಎಲ್ದೋಸ್ ಪಾಲ್ (ಕೇರಳ)–3, ಎತ್ತರ: 17.07 ಮೀ.; ಹ್ಯಾಮರ್ ಥ್ರೊ: ತರಣವೀರ್ ಸಿಂಗ್ ಬೇನ್ಸ್ (ಪಂಜಾಬ್)–1, ನಿತೇಶ್ ಪೂನಿಯಾ (ರಾಜಸ್ಥಾನ)–2, ದಮನೀತ್ ಸಿಂಗ್ (ಪಂಜಾಬ್)–3, ದೂರ: 71.10 ಮೀ.; ಡೆಕಾಥ್ಲಾನ್: ತೇಜಸ್ವಿನ್ ಶಂಕರ್ (ದೆಹಲಿ)–1, ಯಮನ್‌ದೀಪ್ ಶರ್ಮಾ (ರಾಜಸ್ಥಾನ)–2, ಗೋಕುಲ್ ಎಸ್. (ಕೇರಳ)–3, ಪಾಯಿಂಟ್ಸ್: 7576.; 4x100 ಮೀ. ರಿಲೇ: ತಮಿಳುನಾಡು (40.15 ಸೆ)–1, ಒಡಿಶಾ (40.24 ಸೆ.)–2, ಪಂಜಾಬ್ (41.05 ಸೆ)–3.

ಮಹಿಳೆಯರು: 100 ಮೀ. ಹರ್ಡಲ್ಸ್: ಜ್ಯೋತಿ ಯೆರ್ರಾಜಿ (ಆಂಧ್ರ ಪ್ರದೇಶ)–1, ನಿತ್ಯಾ ಆರ್. (ತಮಿಳುನಾಡು)–2, ಅಗಸರ ನಂದಿನಿ (ತೆಲಂಗಾಣ)–3, ಕಾಲ: 12.92 ಸೆ.; ಪೋಲ್‌ವಾಲ್ಟ್: ಪವಿತ್ರಾ ವೆಂಕಟೇಶ್ (ತಮಿಳುನಾಡು)–1, ಸಿಂಧುಶ್ರೀ (ಕರ್ನಾಟಕ)–2, ವನ್ನಿಕಾ (ಹರಿಯಾಣ)–3, ಎತ್ತರ: 4.10 ಮೀ.; ಹೆಪ್ಟಥ್ಲಾನ್: ಸ್ವಪ್ನಾ ಬರ್ಮನ್ (ಮಧ್ಯ ಪ್ರದೇಶ)–1, ಅಗಸರ ನಂದಿನಿ (ತೆಲಂಗಾಣ)–2, ಸೌಮ್ಯಾ (ಆಂಧ್ರ ಪ್ರದೇಶ)–3, ಪಾಯಿಂಟ್ಸ್: 5,918.; 4x100 ಮೀ. ರಿಲೇ: ಕೇರಳ (46.35 ಸೆ.)–1, ಆಂಧ್ರ ಪ್ರದೇಶ (46.61 ಸೆ.)–2, ಒಡಿಶಾ (46.68 ಸೆ.)–3.

ವಿಶ್ವ ಯು–20 ಅಥ್ಲೆಟಿಕ್ಸ್: ಬಿಡ್‌ಗೆ ಯತ್ನ

ಭುವನೇಶ್ವರ (ಪಿಟಿಐ): ವಿಶ್ವ 20 ವರ್ಷದೊಳಗಿನವರ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಅತಿಥ್ಯದಿಂದ ಪೆರು ಹಿಂದೆ ಸರಿದಲ್ಲಿ ಭಾರತ ಆತಿಥ್ಯಕ್ಕೆ ಬಿಡ್ ಸಲ್ಲಿಸಲು ಮುಂದಾಗಿದೆ. ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಅದಿಲ್ ಸುಮರಿವಾಲಾ ಶನಿವಾರ ಈ ವಿಷಯ ತಿಳಿಸಿದರು.

ಆದರೆ ಭೋಪಾಲ್‌ನಲ್ಲಿ ಕೂಟ ಸಂಘಟಿಸಲು ಭಾರತಕ್ಕೆ ಅವಕಾಶ ಸಿಗುವುದೇ ಎಂಬುದು ಖಚಿತವಾಗಿಲ್ಲ. ಲಿಮಾದಲ್ಲಿ ಈ ಕೂಟ ನಡೆಸಲು ಪೆರು ಮತ್ತೆ ಮುಂದೆ ಬರಬಹುದು ಎಂದು ವಿಶ್ವ ಅಥ್ಲೆಟಿಕ್ಸ್ ಇತ್ತೀಚೆಗೆ ಸುಮರಿವಾಲಾ ಅವರಿಗೆ ತಿಳಿಸಿದೆ.

ಫೈನಲ್‌ಗೆ ಸಾತ್ವಿಕ್– ಚಿರಾಗ್

ಇಂಡೊನೇಷ್ಯಾ ಓಪನ್: ಸೆಮಿಯಲ್ಲಿ ಪ್ರಣಯ್ ಪರಾಭವ

ಜಕಾರ್ತಾ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಶನಿವಾರ ಇಂಡೊನೇಷ್ಯಾ ಓಪನ್ ವಿಶ್ವ ಟೂರ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ಗೆ ದಾಪುಗಾಲಿಟ್ಟರು. ಆದರೆ ಎಚ್.ಎಸ್. ಪ್ರಣಯ್ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸೋಲನುಭವಿಸಿದರು.

ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಚಿನ್ನದ ಪದಕ ಗೆದ್ದಿರುವ ಸಾತ್ವಿಕ್–ಚಿರಾಗ್ ಜೋಡಿ ಹಿನ್ನಡೆಯಿಂದ ಚೇತರಿಸಿಕೊಂಡು 17–21, 21–19, 21–18 ರಿಂದ ಶ್ರೇಯಾಂಕರಹಿತ ಜೋಡಿಯಾದ ಮಿನ್ ಹ್ಯುಕ್ ಕಾಂಗ್ ಮತ್ತು ಸಿಯುಂಗ್ ಜೇ ಸಿಯೊ (ದಕ್ಷಿಣ ಕೊರಿಯಾ) ಅವರನ್ನು ಸೋಲಿಸಿತು.

ಏಳನೇ ಶ್ರೇಯಾಂಕ ಪಡೆದಿರುವ ಭಾರತದ ಈ ಜೋಡಿ ಮೊದಲ ಬಾರಿ ಸೂಪರ್ 1000 ಟೂರ್ನಿಯೊಂದರ ಫೈನಲ್ ತಲುಪಿದೆ.

ಈ ಜೋಡಿ ಫೈನಲ್‌ನಲ್ಲಿ ಮಲೇಷ್ಯಾದ ಆ್ಯರನ್ ಚಿಯಾ–ವೂಯ್ ಯಿಕ್ ಸೊ ಅವರ ಸವಾಲು ಎದುರಿಸಲಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಮಲೇಷ್ಯಾ ಜೋಡಿ 12–21, 23–21, 21–13 ರಲ್ಲಿ ಇಂಡೊನೇಷ್ಯಾದ ಪ್ರಮುದ್ಯ ಕುಸುಮವರ್ದನ– ಯಾಕೊನ್ ರಂಬಿಟನ್ ಅವರನ್ನು ಮಣಿಸಿತು.


ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ (ಬಲ) ಅವರ ಸಂಭ್ರಮ –ಎಪಿ ಚಿತ್ರ

ಪ್ರಣಯ್‌ಗೆ ಸೋಲು: ಆದರೆ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಪ್ರಣಯ್ ಸೋಲುವ ಮೂಲಕ ಭಾರತದ ಸವಾಲು ಅಂತ್ಯಗೊಂಡಿತು. ಅಗ್ರ ಶ್ರೇಯಾಂಕದ ಡೆನ್ಮಾರ್ಕ್‌ನ ಆಟಗಾರ ವಿಕ್ಟರ್ ಆಕ್ಸೆಲ್‌ಸನ್ 21–15, 21–15 ರಿಂದ ಪ್ರಣಯ್ ಅವರನ್ನು ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿದರು. ಪಂದ್ಯ 46 ನಿಮಿಷಗಳಲ್ಲಿ ಮುಗಿಯಿತು.

ಮೊದಲ ಗೇಮ್‌ನಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಎಂಬಂತೆ ಪ್ರಣಯ್ ಕೆಲವು ಕ್ರಾಸ್ ಕೋರ್ಟ್ ಸ್ಮ್ಯಾಶ್‌ಗಳನ್ನು ಪ್ರದರ್ಶಿಸಿದರು. ಆದರೆ ಆಕ್ಸೆಲ್‌ಸನ್ ಅವರ 'ಡ್ರಾಪ್'ಗಳು ಮತ್ತು ಕೋರ್ಟ್‌ನಲ್ಲಿ ಚುರುಕಿನ ಓಡಾಟದ ಎದುರು ಅವರ ಆಟ ನಡೆಯಲಿಲ್ಲ. ಎರಡನೇ ಗೇಮ್‌ನಲ್ಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ.

ಆಕ್ಸೆಲ್‌ಸನ್ ವಿರುದ್ಧ ಆಡಿರುವ ಎಂಟು ಪಂದ್ಯಗಳಲ್ಲಿ ಪ್ರಣಯ್ ಆರನ್ನು ಸೋತಂತಾಗಿದೆ.

ಡಬ್ಲ್ಯುಟಿಸಿ: ತಂಡದ ನಿರ್ಧಾರ ಮೊದಲೇ ತಿಳಿದಿತ್ತು– ಅಶ್ವಿನ್

ಬೆಂಗಳೂರು: 'ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಕಣಕ್ಕಿಳಿಯುವ ಅವಕಾಶ ಸಿಗುವುದಿಲ್ಲವೆಂಬುದು ಪಂದ್ಯ ಆರಂಭದ 48 ಗಂಟೆಗಳ ಮೊದಲೇ ನನಗೆ ತಿಳಿದಿತ್ತು' ಎಂದು ಭಾರತ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಹೇಳಿದ್ದಾರೆ.

ವಿಶ್ವದ ಅಗ್ರ ಶ್ರೇಯಾಂಕದ ಬೌಲರ್ ಆರ್. ಅಶ್ವಿನ್ ತಮ್ಮನ್ನು ಇತ್ತೀಚೆಗೆ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಹನ್ನೊಂದರ ಬಳಗದಿಂದ ಕೈಬಿಟ್ಟದರ ಕುರಿತು ಇದೇ ಮೊದಲ ಬಾರಿಗೆ ಇಂಗ್ಲಿಷ್ ವೆಬ್‌ಸೈಟ್‌ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡುವ ಅದಮ್ಯ ಹಂಬಲ ಹೊಂದಿದ್ದೆ. ತಂಡವು ಈ ಹಂತಕ್ಕೆ ತಲುಪಲು ಉಪಯುಕ್ತ ಕಾಣಿಕೆ ನೀಡಿದ್ದೆ. ಅಷ್ಟೇ ಅಲ್ಲ; ಮೊದಲ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡಿದ್ದಾಗ ನಾಲ್ಕು ವಿಕೆಟ್ ಕೂಡ ಗಳಿಸಿದ್ದೆ. ಆದರೆ ಈ ಬಾರಿ ಆಡಲು ಅವಕಾಶ ಪಡೆಯದಿರುವುದನ್ನು ಅರಗಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಆದರೆ ಇದನ್ನು ಹಿನ್ನಡೆಯೆಂದು ಭಾವಿಸುವುದಿಲ್ಲ. ಇದೊಂದು ಅಡಚಣೆಯಷ್ಟೇ' ಎಂದು 36 ವರ್ಷದ ಅಶ್ವಿನ್ ಹೇಳಿದ್ದಾರೆ.

'2018-19ರಿಂದ ನಾನು ವಿದೇಶಿ ಪಿಚ್‌ಗಳಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿರುವೆ. ತಂಡದ ಗೆಲುವಿಗಾಗಿ ಶ್ರೇಷ್ಠ ಬೌಲಿಂಗ್ ಮಾಡಿದ್ದೆ. ಇಂಗ್ಲೆಂಡ್‌ನಲ್ಲಿ ನಾಲ್ವರು ವೇಗಿಗಳು ಮತ್ತು ಒಬ್ಬ ಸ್ಪಿನ್ನರ್ ಇರುವ ಬೌಲಿಂಗ್ ಸಂಯೋಜನೆ ಸಾಕು ಎಂದು ತಂಡಕ್ಕೆ ಅನಿಸಿರಬೇಕು. ಆದರೆ ಅಲ್ಲಿಯ ಪಿಚ್‌ಗಳಲ್ಲಿ ನಾಲ್ಕನೇ ಇನಿಂಗ್ಸ್‌ಗಳಲ್ಲಿ ಸ್ಪಿನ್ನರ್ ಪಾತ್ರ ಮುಖ್ಯವಾಗುತ್ತದೆ. ಕೊನೆಯ ಇನಿಂಗ್ಸ್ ಯಾವಾಗಲೂ ಸವಾಲಿನದ್ದು' ಎಂದರು.


ಆರ್.ಅಶ್ವಿನ್

'ನನ್ನ ಕುರಿತು ಬೇರೆ ಯಾರೋ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆಂದುಕೊಳ್ಳುವುದೂ ಮೂರ್ಖತನವಾಗುತ್ತದೆ. ಬೇರೆಯವರು ನನ್ನ ಬಗ್ಗೆ ಏನು ಯೋಚಿಸುತ್ತಾರೆ ಎಂದು ಚಿಂತಿಸುವ ಹಂತದಲ್ಲಿ ನಾನಿಲ್ಲ. ನನ್ನ ಸಾಮರ್ಥ್ಯದ ಕುರಿತು ಚೆನ್ನಾಗಿ ಅರಿವಿದೆ' ಎಂದು ಅಶ್ವಿನ್ ಹೇಳಿದ್ದಾರೆ.

ನೆಟ್‌ಬಾಲ್: ಭಾರತಕ್ಕೆ 5ನೇ ಸ್ಥಾನ

ಬೆಂಗಳೂರು: ಭಾರತ ಮಹಿಳಾ ತಂಡದವರು ಕೊರಿಯಾದ ಜೆಂಜುವಿನಲ್ಲಿ ನಡೆದ ಏಷ್ಯನ್ ಯೂತ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನ ಪಡೆದುಕೊಂಡರು.

ಶನಿವಾರ ನಡೆದ ಪಂದ್ಯದಲ್ಲಿ ಭಾರತ 47–46 ರಲ್ಲಿ ಥಾಯ್ಲೆಂಡ್ ತಂಡವನ್ನು ಮಣಿಸಿತು. ವಿರಾಮದ ವೇಳೆಗೆ 21–19 ರಲ್ಲಿ ಹಿನ್ನಡೆಯಲ್ಲಿದ್ದ ಭಾರತ, ಕೊನೆಯಲ್ಲಿ ಅಮೋಘ ಆಟವಾಡಿ ಗೆಲುವು ಒಲಿಸಿಕೊಂಡಿತು.

ಮಲೇಷ್ಯಾ ತಂಡ ಚಾಂಪಿಯನ್ ಆದರೆ, ಸಿಂಗಪುರ ರನ್ನರ್ ಅಪ್ ಆಯಿತು.

ಭಾರತ– ವಿಯೆಟ್ನಾಂ ಪಂದ್ಯ ಡ್ರಾ

ಪಥುಮ್ ಥಾನಿ, ಥಾಯ್ಲೆಂಡ್ (ಪಿಟಿಐ): ಭಾರತ ತಂಡ, ಎಎಫ್‌ಸಿ 17 ವರ್ಷದೊಳಗಿನವರ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಶನಿವಾರ ವಿಯೆಟ್ನಾಂ ಜತೆ 1–1 ಗೋಲುಗಳ ಡ್ರಾ ಸಾಧಿಸಿತು.

ಲಾಂಗ್ ವು ಮೊದಲ ಅವಧಿಯಲ್ಲಿ ಗೋಲು ಗಳಿಸಿ ವಿಯೆಟ್ನಾಂಗೆ ಮುನ್ನಡೆ ತಂದುಕೊಟ್ಟರೆ, ಮಲೆಂಗಾಂಬ ಥಾಕ್‌ಚೊಮ್ 69ನೇ ನಿಮಿಷದಲ್ಲಿ ಭಾರತಕ್ಕೆ ಸಮಬಲದ ಗೋಲು ತಂದಿತ್ತರು.

ಆ್ಯಷಸ್ ಟೆಸ್ಟ್: ಉಸ್ಮಾನ್ ಅಜೇಯ ಶತಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಬ್ಯಾಟರ್‌ಗಳ ತಾಳ್ಮೆ ಮತ್ತು ಏಕಾಗ್ರತೆಗೆ ಸವಾಲೊಡ್ಡುವಂತಹ ಎಸೆತಗಳ ಮುಂದೆ ಶಾಂತಚಿತ್ತರಾಗಿ ಆಡಿದ ಆಸ್ಟ್ರೇಲಿಯಾದ ಉಸ್ಮಾನ್ ಖ್ವಾಜಾ ಚೆಂದದ ಶತಕ ದಾಖಲಿಸಿದರು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಮೊದಲ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವು ಉಸ್ಮಾನ್ (ಬ್ಯಾಟಿಂಗ್ 126; 279ಎ, 4X14, 6X2) ಶತಕದ ಬಲದಿಂದ 94 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 311 ರನ್ ಗಳಿಸಿತು.

ಪಂದ್ಯದ ಮೊದಲ ದಿನವಾದ ಶುಕ್ರವಾರ ಇಂಗ್ಲೆಂಡ್ ಪ್ರಥಮ ಇನಿಂಗ್ಸ್‌ನಲ್ಲಿ 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 393 ರನ್‌ಗಳನ್ನು ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು.

ಎರಡನೇ ದಿನವಾದ ಶನಿವಾರ ಬೆಳಿಗ್ಗೆ 11ನೇ ಓವರ್‌ನಲ್ಲಿ ಡೇವಿಡ್ ವಾರ್ನರ್ ಹಾಗೂ ಮಾರ್ನಸ್ ಲಾಬುಷೇನ್ ಅವರಿಬ್ಬರ ವಿಕೆಟ್ ಕಬಳಿಸಿದ ಇಂಗ್ಲೆಂಡ್ ವೇಗಿ ಸ್ಟುವರ್ಟ್ ಬ್ರಾಡ್ ಹಿರಿಹಿರಿ ಹಿಗ್ಗಿದರು. ಆದರೆ ಉಸ್ಮಾನ್ ಮಾತ್ರ ಸ್ವಿಂಗ್ ಎಸೆತಗಳನ್ನು ಎಚ್ಚರಿಕೆಯಿಂದ ಆಡಿ ರನ್ ಗಳಿಸಿದರು. ಸ್ಟೀವನ್ ಸ್ಮಿತ್ ಕೇವಲ 16 ರನ್ ಗಳಿಸಿ, ಬೆನ್ ಸ್ಟೋಕ್ಸ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಆದರೆ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಶತಕ ಬಾರಿಸಿದ್ದ ಟ್ರಾವಿಸ್ ಹೆಡ್ (50; 63ಎ) ಇಲ್ಲಿಯೂ ಉಪಯುಕ್ತ ಕಾಣಿಕೆ ನೀಡಿದರು. ಉಸ್ಮಾನ್ ಜೊತೆಗೂಡಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 81 ರನ್‌ಗಳನ್ನು ಸೇರಿಸಿದರು. ಮೋಯಿನ್ ಅಲಿ ಎಸೆತದಲ್ಲಿ ಹೆಡ್ ವಿಕೆಟ್ ಉರುಳಿತು. ಕ್ಯಾಮರಾನ್ ಗ್ರೀನ್ 38 ರನ್‌ಗಳ ಕಾಣಿಕೆ ನೀಡಿ ಮೋಯಿನ್ ಬೌಲಿಂಗ್‌ನಲ್ಲಿ ಔಟಾದರು. ಆದರೆ ಎಡಗೈ ಬ್ಯಾಟರ್ ಉಸ್ಮಾನ್ ಅವರ ಆಟಕ್ಕೆ ತಡೆಯೊಡ್ಡಲು ಇಂಗ್ಲೆಂಡ್ ಬೌಲಿಂಗ್ ಪಡೆಗೆ ಸಾಧ್ಯವಾಗಲಿಲ್ಲ. 36 ವರ್ಷದ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 15ನೇ ಶತಕ ದಾಖಲಿಸಿದರು. ಅಲೆಕ್ಸ್ ಕ್ಯಾರಿ (ಬ್ಯಾಟಿಂಗ್ 52) ಜತೆ ಮುರಿಯದ ಆರನೇ ವಿಕೆಟ್‌ಗೆ 91 ರನ್ ಸೇರಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್– ಇಂಗ್ಲೆಂಡ್: 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 393 ಡಿಕ್ಲೇರ್ಡ್. ಆಸ್ಟ್ರೇಲಿಯಾ:94 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 311 (ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 126, ಟ್ರಾವಿಸ್ ಹೆಡ್ 50, ಕ್ಯಾಮರಾನ್ ಗ್ರೀನ್ 38, ಅಲೆಕ್ಸ್ ಕ್ಯಾರಿ ಬ್ಯಾಟಿಂಗ್ 52, ಸ್ಟುವರ್ಟ್ ಬ್ರಾಡ್ 49ಕ್ಕೆ2, ಮೋಯಿನ್ ಅಲಿ 124ಕ್ಕೆ2, ಬೆನ್ ಸ್ಟೋಕ್ಸ್ 33ಕ್ಕೆ1)

ಬೆಂಗಳೂರು ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಫಿಲ್ಲೀಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅನ್ನೆ ಬೊಲಿನ್ 3, ಅಕಾಸಿ 2, ಜೆರ್ಸಿ ಲೆಜೆಂಡ್ 4

2ನೇ ರೇಸ್: ಇಂಪಿಯಾನ 1, ಡಬಲ್ ಸ್ಕಾಚ್ 3, ಫಿಯರ್ಲೆಸ್ ಜಾಯ್ 7

3ನೇ ರೇಸ್: ಅಲ್ಯೆಸ್ ಬ್ಲೂ 3, ಹೈ ಟ್ರಿಬ್ಯೂಟ್ 2, ಸೀ ಈಗಲ್ 8

4ನೇ ರೇಸ್: ಅಮ್ರೆಲಿ 10, ಪ್ಲೇಸ್ ವೆಂಡೋಮ್ 13, ಅಲ್ಬಿನಸ್ 7

5ನೇ ರೇಸ್: ಸಿಲ್ವರ್ ಕ್ಯಾನನ್ 8, ಹುಮಾನಿಟೇರಿಯನ್ 4, ನಿಕೊಲಿನ 6

6ನೇ ರೇಸ್: ಜಮಾರಿ 5, ಮೆರೋಪಿ 7, ನೆಜಯ್ಯಾ 9

7ನೇ ರೇಸ್: ಅಲೆಕ್ಸಿನಾ 5, ಶೀ ಈಸ್ ಎ ಲೇಡಿ 8, ಪ್ರೀಸಿಯಸ್ 6

8ನೇ ರೇಸ್: ಸಿರೇನಿಯಸ್ 7, ಬ್ಯಾಲೋರ್ 2, ಇನ್‌ಯುವಿಬಿಲೀವ್ 3

ಉತ್ತಮ ಬೆಟ್: ಇಂಪಿಯಾನ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,78

ಬಾಂಗ್ಲಾಕ್ಕೆ ದಾಖಲೆ ಜಯ

ಮೀರ್‌ಪುರ್ (ಎಪಿ): ಬಾಂಗ್ಲಾದೇಶ ತಂಡದವರು ಏಕೈಕ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಅಫ್ಗಾನಿಸ್ತಾನ ತಂಡದ ಮೇಲೆ 546 ರನ್‌ಗಳ ಭಾರಿ ಜಯ ಪಡೆದರು. ರನ್‌ಗಳ ಲೆಕ್ಕದಲ್ಲಿ ಇದು ಬಾಂಗ್ಲಾದೇಶದ ದಾಖಲೆ ಅಂತರದ ಮತ್ತು ಟೆಸ್ಟ್ ಇತಿಹಾಸದಲ್ಲಿ ಮೂರನೇ ಅತಿ ದೊಡ್ಡ ವಿಜಯವಾಗಿದೆ.

ಬಾಂಗ್ಲಾದೇಶ ಗೆಲುವಿಗೆ ಹೆಚ್ಚಿನ ಪ್ರಯಾಸ ಪಡಲಿಲ್ಲ. ವೇಗದ ಬೌಲರ್ ತಸ್ಕಿನ್ ಅಹ್ಮದ್ 37 ರನ್ನಿಗೆ 4 ವಿಕೆಟ್ ಪಡೆದು ಅಫ್ಗಾನಿಸ್ತಾನ ತಂಡ 115 ರನ್ನಿಗೆ ಉರುಳಲು ಪ್ರಮುಖ ಕಾರಣರಾದರು. ಮೂರನೇ ದಿನ, ಆತಿಥೇಯರು, ಅಫ್ಗಾನಿಸ್ತಾನ ಗೆಲುವಿಗೆ 663 ರನ್‌ಗಳ ಅತಿ ದೊಡ್ಡ ಗುರಿ ನಿಗದಿಪಡಿಸಿದ್ದರು.

2005ರಲ್ಲಿ ಜಿಂಬಾಬ್ವೆ ವಿರುದ್ಧ ಗಳಿಸಿದ 226 ರನ್‌ಗಳ ಜಯ, ಬಾಂಗ್ಲಾದೇಶದ ಇದುವರೆಗಿನ ದೊಡ್ಡ ವಿಜಯದ ಅಂತರವಾಗಿತ್ತು.

ಈ ಪಂದ್ಯದಲ್ಲಿ ನಜ್ಮುಲ್ ಹುಸೇನ್ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ್ದರು.

ಸ್ಕೋರುಗಳು: ಬಾಂಗ್ಲಾದೇಶ: 382 ಮತ್ತು 4 ವಿಕೆಟ್‌ಗೆ 425 ಡಿಕ್ಲೇರ್; ಅಫ್ಗಾನಿಸ್ತಾನ: 146 ಮತ್ತು 115 (ರಹಮತ್ ಶಾ 30, ಶರೀಫುಲ್ ಇಸ್ಲಾಂ 28ಕ್ಕೆ3, ತಸ್ಕಿನ್ ಅಹ್ಮದ್ 37ಕ್ಕೆ4).